# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 6 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 200 | ಪುಟಗಳು: 10
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

# ಪ್ರೇಕ್ಷಕರ ಮನಸೂರೆಗೊಂಡ ಮಂಟೇಸ್ವಾಮಿ ಕಥಾ ಪ್ರಸಂಗ



ಮೈಸೂರು, ನ.5(ಎಸ್‌ಪಿಎನ್)– ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಪ್ರದರ್ಶನಗೊಂಡ 'ಮಂಟೇಸ್ವಾಮಿ ಕಥಾಪ್ರಸಂಗ' ಜಾನಪದ ನಾಟಕ ಪ್ರೇಕ್ಷಕರ ಮನಸೆಳೆಯಿತು.

ಡಾ.ಹೆಚ್.ಎಸ್.ಶಿವಪ್ರಕಾಶ್ ನಿರ್ದೇಶಿಸಿ, ದೇವಾನಂದ ವರಪ್ರಸಾದ್ ಸಂಗೀತ ಸಂಯೋಜಿಸಿರುವ ಈ ನಾಟಕವನ್ನು ಜಿಪಿಐಇಆರ್ ರಂಗತಂಡದ ಕಲಾವಿದರು ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

'ಮಂಟೇಸ್ವಾಮಿ ಕಥಾಪ್ರಸಂಗ'ದ ಮಂಟೇಸ್ವಾಮಿ ಪಾತ್ರದಲ್ಲಿ ಬಿ.ಸುಮನ್ ರಾಜ್ ನಟಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಜಂಗಮರ ಪಾತ್ರದಲ್ಲಿ ಚಂದನ್, ಮಹದೇವ ಪ್ರಸಾದ್, ಚಂದ್ರು, ರಾಜು, ನಕುಲ್, ತೇಜಸ್ ನಟಿಸಿದ್ದಾರೆ. ನೀಲಗಾರರ ಪಾತ್ರದಲ್ಲಿ ಧನುಷ್‌ಕುಮಾರ್, ನೇಸರ ಮೈಮ್ ರಮೇಶ್, ಆರ್.ರೋಷನ್ ರಾಜ್, ಹೆಚ್.ನಿಕಿತ್, ಯಶವಂತ್ ಪ್ರಕಾಶ್, ಮಂಜು ಅಭಿನಯಿಸಿದರು.

ಬಸವಣ್ಣ ಪಾತ್ರದಲ್ಲಿ ಶ್ರೀವತ್ಸ, ನೀಲಾಂಬಿಕೆ ಪಾತ್ರದಲ್ಲಿ ದೀಯ, ಜಗದ್ಗುರು ಪಾತ್ರದಲ್ಲಿ ಎಂ.ಉಜ್ವಲ್, ಪಾರದವರು ಪಾತ್ರದಲ್ಲಿ ಶಶಿ, ಸೂರ್ಯವಂಶಿ, ರಾಚಪ್ಪಾಜಿ (ಬಾಲ್ಯ) ಮನು, ರಾಚಪ್ಪಾಜಿ(ವಯಸ್ಕ) ಪಾತ್ರದಲ್ಲಿ ಸಂಜೈ ಮೋಹನ್, ದೊಡ್ಡಮ್ಮ ಪಾತ್ರದಲ್ಲಿ ಉಷಾ, ಬಾಚಿ ಬಸವಯ್ಯ ಪಾತ್ರದಲ್ಲಿ ಅಲೋಕ್, ಬರಗ(ಹುಲಿ) ಪಾತ್ರದಲ್ಲಿ ಶರತ್‌ಕುಮಾರ್, ಕಾಳಿಂಗ ಪಾತ್ರದಲ್ಲಿ ಅಭಿಷೇಕ್, ಗೋಲಿ ಆಟದ ಹುಡುಗರ ಪಾತ್ರದಲ್ಲಿ ಸುಶಾಂತ್, ಕುಶಾಲ್, ತೇಜಸ್, ಅನಿರುದ್ಧ ನಿರ್ವಹಿಸಿದರು.

ಪಾಂಚಾಳರಾಗಿ ಎಸ್.ರಾಮಚಂದ್ರ, ಸಚಿನ್, ಸೂರ್ಯ, ಧ್ರುವ,ರಾಜು, ಚಂದು, ಅಭಿ ನಿರ್ವಹಿಸಿದ್ದು, ಕಲ್ಯಾಣಮ್ಮ ಪಾತ್ರದಲ್ಲಿ ರೇವತಿ, ಕಲಿ, ಶಾಸ್ತ್ರಿ ಪಾತ್ರದಲ್ಲಿ ಚಂದನ್ ಕ್ಯಾತಮಾರನಹಳ್ಳಿ, ಮಧುಮಗ ಪಾತ್ರದಲ್ಲಿ ಸುಶಾಂತ್, ಕೆಂಪಾಚಾರಿ ಪಾತ್ರದಲ್ಲಿ ಎಂ.ಉಜ್ವಲ್, ಸಿದ್ದಪ್ಪಾಜಿ ಪಾತ್ರದಲ್ಲಿ ಎಂ.ಪಿ.ಹರಿದತ್ತ, ಹುಡುಗಿಯರು ಪಾತ್ರದಲ್ಲಿ ರೂಪ, ಎಸ್.ಸ್ನೇಹ ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಪಾತ್ರರಾಗಿದ್ದಾರೆ. ರಾಘವೇಂದ್ರ ಅಚ್ಚಪ್ಪ ಬೆಳಕಿನ ನಿರ್ವಹಣೆ ಮಾಡಿದ್ದು, ಶ್ರೀ ರಾಜೇಶ್ವರಿ ವಸ್ತ್ರಾಲಂಕಾರದ ಬಿ.ಎಂ.ರಾಮಚಂದ್ರ ನಿರ್ವಹಣೆ ಮಾಡಿದ್ದಾರೆ. ರಂಗಾಯಣದ ಮಾಜಿ ಕಲಾವಿದ ಮೈಮ್ ರಮೇಶ್ ನೃತ್ಯ ಸಂಯೋಜನೆ ಗಮನ ಸೆಳೆಯಿತು.

# ಬಹುತೇಕ ಸಂದರ್ಭದ ಕನ್ನಡಪರತೆಯಲ್ಲಿ ಭಾರತೀಯತೆ ಧ್ವನಿಸುತ್ತಿಲ್ಲ

## ಭಾಷಾ ಚಿಂತಕ ನಾರಾಯಣ ಶೇವಿರೆ ಬೇಸರ

ಮೈಸೂರು,ನ.5(ಪಿಎಂ)– ಹೋರಾಟ ಸೇರಿದಂತೆ ಪ್ರಸ್ತುತದ ವಿವಿಧ ರೀತಿಯ ಕನ್ನಡ ಪರತೆಯಲ್ಲಿ ಬಹುತೇಕ ಸಂದರ್ಭ ಭಾರತೀಯ ಧ್ವನಿ ಧ್ವನಿಸುತ್ತಿಲ್ಲ ಎಂದು ಭಾಷಾ ಚಿಂತಕ ನಾರಾಯಣ ಶೇವಿರೆ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.6ರವರೆಗೆ ಹಮ್ಮಿಕೊಂಡಿರುವ 'ಕನ್ನಡ ಹಬ್ಬ–2023'ರ ಪ್ರಯುಕ್ತ ಭಾನುವಾರ ಆಯೋಜಿಸಿದ್ದ ಕನ್ನಡ ಸಂವಾದದಲ್ಲಿ 'ಕನ್ನಡವೆಂಬ ಭಾರತೀಯ ಭಾಷೆ' ಕುರಿತು ಅವರು ವಿಚಾರ ಮಂಡಿಸಿದರು.

ಭಾರತ ಬಿಟ್ಟು ಕನ್ನಡದ ಬಗ್ಗೆ ಯೋಚನೆ ಮಾಡಲು ಸಾಧ್ಯವಿಲ್ಲ. ಆದರೆ ಅಭಾರತೀಯ ಸಿದ್ಧಾಂತದ ಪರಿಣಾಮವಾಗಿ ಕನ್ನಡವೆಂದರೆ ಅದು ಭಾರತೀಯವಲ್ಲವೆಂಬ ಭಾವ ನಮ್ಮನ್ನು ಆವರಿಸುವಂತಾಗಿದೆ. ಇಂದಿನ ಕನ್ನಡಪರವಾದ ಹೋರಾಟ, ಭಾಷಣ ಎಲ್ಲವೂ ಬಹುತೇಕ ಸಂದರ್ಭದಲ್ಲಿ ಭಾರತೀಯ ಯೋಚನೆಯನ್ನು ಒಳಗೊಂಡಿಲ್ಲ. ಭಾರತೀಯ ಧ್ವನಿಯನ್ನು ಧ್ವನಿಸುತ್ತಿಲ್ಲ. ಬದಲಿಗೆ ಅಭಾರತೀಯವಾಗಿ ಮೊಳಗುವಂತಾಗಿದೆ ಎಂದು ವಿಷಾದಿಸಿದರು.

ಕನ್ನಡವೂ ಸೇರಿದಂತೆ ಭಾರತದ ಎಲ್ಲಾ ಭಾಷೆಗಳು ಭಾರತೀಯತೆಗೆ ಒಂದು ಪುಷ್ಟಿ ಕೊಟ್ಟಿದ್ದು, ಜೊತೆಗೆ ಭಾರತೀಯತೆಯಿಂದ ಆ ಎಲ್ಲವೂ ಪುಷ್ಟಿ ಪಡೆದಿವೆ. ಎಲ್ಲವನ್ನೂ ಒಳಗೊಳ್ಳಬೇಕು ಎನ್ನುವುದು ಸಿದ್ಧಾಂತವಲ್ಲ. ಅದು ದರ್ಶನ ಮತ್ತು ವಿಚಾರವಾಗಲಿದೆ. ನನ್ನದು ಮಾತ್ರ ಇರಬೇಕೆಂಬುದು ಸಿದ್ಧಾಂತ ಅಥವಾ ಒಂದು ವಾದವಾಗಲಿದೆ. ಭಾರತ ಮತ್ತು ಕರ್ನಾಟಕದ ವಿಚಾರದಲ್ಲಿ ಯಾವುದೇ ಸಿದ್ಧಾಂತವಿಲ್ಲ. ಇಲ್ಲಿ ದರ್ಶನ ಮತ್ತು ವಿಚಾರವಿದ್ದು, ಪರಸ್ಪರ ಒಳಗೊಳ್ಳ ಬೇಕಿದೆ. 'ಕನ್ನಡವೆಂಬ ಭಾರತೀಯ ಭಾಷೆ' ಎಂಬುದು ದರ್ಶನವಾಗಲಿದೆ ಹೊರತು, 'ಕನ್ನಡವೆಂಬ ಕರ್ನಾಟಕದ ಭಾಷೆ' ಎಂಬುದು ದರ್ಶನ ಆಗಲಾರದು ಎಂದು ವಿಶ್ಲೇಷಿಸಿದರು.

ವಿಶಾಲ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ನಾಮಕರಣವಾದ 50ನೇ ವರ್ಷಾಚರಣೆ ಮಾಡುತ್ತಿದ್ದೇವೆ. ಇದಕ್ಕೂ ಮುನ್ನ ಕರ್ನಾಟಕ ಎಂಬುದಕ್ಕೆ ಬದಲಾಗಿ ಮೈಸೂರು ಎಂದು ಕರೆಯಲಾಗುತ್ತಿತ್ತು. ಮಹಾಭಾರತದಲ್ಲೂ 'ಕರ್ನಾಟಕ' ಪದದ ಉಲ್ಲೇಖವಿದೆ. ಕನ್ನಡ ಭಾಷೆ ಹೆಚ್ಚು ಮಾತನಾಡುವ ಪ್ರದೇಶವನ್ನು ಸಂಸ್ಕೃತ ಸಾಹಿತ್ಯದಲ್ಲಿ 'ಕರ್ನಾಟ' ಎಂದು ಗುರುತಿಸಲಾಗಿದೆ. 'ಕರ್ನಾಟ' ಎಂಬ ಪದದಿಂದ 'ಕರ್ನಾ ಟಕ' ವೆಂಬ ಹೆಸರು ಸೃಷ್ಟಿಯಾಗಿದೆ ಎಂದು ಹೇಳಿದರು.



ಭಾರತದೊಳಗೆ ಕರ್ನಾಟಕವಿದ್ದು, ಭಾರತ ಬಿಟ್ಟು ಕನ್ನಡ, ಕರ್ನಾಟಕ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಕರ್ನಾಟಕವು ಭಾರತದಿಂದ ಸತ್ವ ಹಿರಿಕೊಂಡು ಭಾರತೀಯತೆಗೆ ತನ್ನದೇ ಆದ ಕೊಡುಗೆಯನ್ನೂ ನೀಡಿದೆ. 'ಭಾರತ' ಎಂದರೆ ಅದು ಕೇವಲ ಒಂದು ಭೌಗೋಳಿಕ ಪ್ರದೇಶ ಮಾತ್ರವಲ್ಲ. ಪ್ರತಿಯೊಂದು ದೇಶಕ್ಕೆ ಒಂದು ಹೆಸರು ಇರುವುದು ಸಹಜ. ಆದರೆ ನಮ್ಮ ದೇಶಕ್ಕೆ ನಾನಾ ಹೆಸರುಗಳಿವೆ ಎಂದರು.

ಭಾರತ ಬ್ರಿಟಿಷರಿಂದ ರಾಷ್ಟ್ರದ ಸ್ವರೂಪ ಪಡೆಯಿತು. ಇದಕ್ಕೂ ಮುನ್ನ ಹಲವು ಸಂಸ್ಥಾನಗಳಿದ್ದವು ಎಂಬ ವಾದವಿದ್ದು, ಇದು ಅತ್ಯಂತ ಅಭಾರತೀಯ ವಾದ. ನಮ್ಮ ದೇಶದ ವಿಚಾರದಲ್ಲಿ ರಾಜ್ಯಗಳು ಸೇರಿ ಒಂದು ದೇಶವಲ್ಲ. ಇದು ಬೇರೆ ದೇಶಗಳ ವಿಚಾರದಲ್ಲಿ ಸೇರಿ ಹೊಂದಬಹುದು. ಹಲವು ರಾಜ್ಯಗಳು ಸೇರಿ ಅಮೇರಿಕ ಸಂಯುಕ್ತ ಸಂಸ್ಥಾನವಾಗಿದೆ. ನಮ್ಮ ದೇಶದಲ್ಲಿ ಕೂಡ ಇಂದಿನ ಆಡಳಿತ ಪದ್ಧತಿ ಹಿನ್ನೆಲೆಯಲ್ಲಿ ರಾಜ್ಯಗಳು ಸೇರಿ ದೇಶವೆಂದು ನಾವು ಹೇಳುತ್ತೇವೆ. ಆದರೆ ಆ ರಾಜ್ಯಗಳು ನಿರ್ಮಾಣಕ್ಕೂ ಮೊದಲೇ ಭಾರತ ದೇಶವಾಗಿತ್ತು ಎಂದು ಹೇಳಿದರು.

ಈ ಮೊದಲು ಭಾರತ ದೇಶವಾಗಿರಲಿಲ್ಲ. ನಾವು ಒಟ್ಟುಗೂಡಿಸಿ ದೇಶದ ಸ್ವರೂಪ ನೀಡಿದೆವು ಎಂದು ಆಂಗ್ಲರು ಬಿಂಬಿಸಿದ್ದು, ಇದು ಕಟ್ಟುಕತೆ. ಇದೊಂದು ಸಿದ್ಧಾಂತ ಮತ್ತು ವಾದವಾಗಿದೆ. ನಮ್ಮ ದೇಶಕ್ಕೆ ಬ್ರಿಟಿಷರು ಇಟ್ಟರೆಂದುಕೊಂಡಿರುವ 'ಇಂಡಿಯಾ' ಹೆಸರು ಕೂಡ ಅವರು ನಾಮಕರಣ ಮಾಡಿದ್ದಲ್ಲ. ಅದರ ಮೂಲ ಇಂಡಸ್ ಆಗಿದ್ದು, ಇದನ್ನು ಹೆಸರಿಸಿದವರು ಗ್ರೀಕರು. ಹಿಂದೂ ಎಂಬುದನ್ನು ಅವರು ಇಂಡಸ್ ಎಂದು ಕರೆದರು. ಹೀಗಾಗಿ ಮುಂಚೆಯೇ ಇದ್ದ ಹೆಸರನ್ನು ಬ್ರಿಟಿಷರು 'ಇಂಡಿಯಾ' ಎಂದು ರೂಪಾಂತರ ಮಾಡಿದರು. ಭಾರತ, ಸನಾತನ, ಆರ್ಯವೃತ್ತ, ಜಂಬುದೀಪ ಸೇರಿದಂತೆ ಮೊದಲಾದ ಹೆಸರುಗಳು ನಮ್ಮ ದೇಶಕ್ಕೆ ಪ್ರಾಚೀನ ಕಾಲದಿಂದಲೂ ಇವೆ ಎಂದು ತಿಳಿಸಿದರು.

ಟಿ.ನರಸೀಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಜಿ.ಎಸ್. ದೇವರಾಜೇಗೌಡ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಡಾ.ನಾ.ಸೋಮೇಶ್ವರ್ ಅವರು 'ಥಟ್ ಅಂತ ಹೇಳಿ' ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತನ್ನು ನಡೆಸಿಕೊಟ್ಟರು.

# ಕತಾರ್‌ನಲ್ಲಿ ಭಾರತೀಯ ಮಾಜಿ ಯೋಧರಿಗೆ ಮರಣದಂಡನೆ ಖಂಡಿಸಿ ಮೈಸೂರಲ್ಲಿ ಮೌನ ಪ್ರತಿಭಟನಾ ಮೆರವಣಿಗೆ



ಮೈಸೂರು, ನ.5(ಎಂಕೆ)– ಕತಾರ್ ರಾಷ್ಟ್ರವು ವಿನಾಕಾರಣ ಭಾರತೀಯ ನೌಕಾದಳದ ಎಂಟು ಮಾಜಿ ಯೋಧರನ್ನು ಬಂಧಿಸಿ ಮರಣದಂಡನೆ ಶಿಕ್ಷೆ ವಿಧಿಸಿರುವುದನ್ನು ಖಂಡಿಸಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಮೈಸೂರು ಜಿಲ್ಲಾ ಘಟಕದ ವತಿಯಿಂದ ಶನಿವಾರ ಮೌನ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ನಗರದ ಓವೆಲ್ ಮೈದಾನದಿಂದ ಮೆಟ್ರೋಪೋಲ್ ವೃತ್ತದವರೆಗೆ ಮೌನ ಪ್ರತಿಭಟನಾ ಮೆರವಣಿಗೆ ನಡೆಸಿದ ಸಂಘದ ಸದಸ್ಯರು, ಕತಾರ್‌ನಲ್ಲಿ ಭಾರತೀಯ ನೌಕಾದಳದ ಮಾಜಿ ಸೈನಿಕರು ಧಾರಾ ಗ್ಲೋಬಲ್ ಕನ್ಸಲೆನ್ಸಿಯಲ್ಲಿ ಸಬ್ ಮೆರಿನ್ ಯೋಜನೆ ಅಡಿ ಕಾರ್ಯನಿರ್ವಹಿಸುತ್ತಿದ್ದರು. ಇದರ ಮಾಲೀಕರನ್ನು ದೋಷಮುಕ್ತರನ್ನಾಗಿಸಿ ಇವರನ್ನಷ್ಟೇ ಇಸ್ರೇಲ್ ಸರ್ಕಾರದ ಗೂಢಚಾರರಾಗಿ ಕೆಲಸ ಮಾಡುತ್ತಿದ್ದರು ಎಂಬ ಆರೋಪದಲ್ಲಿ ಯಾವುದೇ ಮಾಹಿತಿ ನೀಡದೆ ಬಂಧಿಸಿರುವುದು ಅವರ ಕುಟುಂಬವನ್ನು ಆತಂಕಕ್ಕೆ ದೂಡಿದಂತಾಗಿದೆ. ಬಂಧಿತರಾಗಿರುವ ಮಾಜಿ ಸೈನಿಕರನ್ನು ದೋಷಮುಕ್ತರನ್ನಾಗಿಸಿ, ದೇಶಕ್ಕೆ ಮರಳುವಂತೆ ಅವಕಾಶ ಒದಗಿಸಿ ಎಂದು ಒತ್ತಾಯಿಸಿದರು.

ಸಂಘದ ಮುಖಂಡರಾದ ರ‍್ಯಾಡಂ ಗಾಯಕ್‌ವಾಡ್, ಗಜಾನನ್ ಭಟ್, ಕೆ.ಪಿ. ಉತ್ತಪ್ಪ, ಆರ್.ರಾಜೇಶ್ ಮತ್ತಿತರರಿದ್ದರು.

# ಅಯೋಧ್ಯೆಯಲ್ಲಿ ಅಕ್ಷತೆ ಪೂಜೆಯೊಂದಿಗೆ ರಾಮಲಲ್ಲಾ ಪ್ರತಿಷ್ಠಾಪನೆ ಪ್ರಕ್ರಿಯೆಗೆ ಚಾಲನೆ



ಅಯೋಧ್ಯೆ, ನ.5– ಅಯೋಧ್ಯೆಯ ರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆಗೆ ಇನ್ನು ಕೆಲವೇ ದಿನಗಳು ಬಾಕಿ ಇವೆ. ಅಕ್ಷತೆ ಪೂಜೆಯ ಮೂಲಕ ಪ್ರತಿಷ್ಠಾಪನೆ ಪ್ರಕ್ರಿಯೆಗಳ ತಯಾರಿಗೆ ಇಂದು ಚಾಲನೆ ದೊರೆತಿದೆ.

ರಾಮ ದರ್ಬಾರ್‌ನಲ್ಲಿ 100 ಕ್ವಿಂಟಾಲ್‌ನಷ್ಟು ಅಕ್ಷತೆಗೆ ಪೂಜೆ ಸಲ್ಲಿಸಲಾಗಿದ್ದು, ಅಕ್ಕಿಗೆ ಅರಿಶಿನ ಹಾಗೂ ದೇಸಿ ತುಪ್ಪ ಮಿಶ್ರಾ ಮಾಡುವ ಮೂಲಕ ಅಕ್ಷತೆಯನ್ನು ತಯಾರಿಸಲಾಗಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹೇಳಿದೆ.

ದೇಶದ 45 ಸಂಘಟನಾ ಪ್ರಾಂತ್ಯಗಳಿಂದ ಅಯೋಧ್ಯೆಗೆ ಆಗಮಿಸಿರುವ 90 ಪ್ರಮುಖ ಪದಾಧಿಕಾರಿಗಳಿಗೆ ಈ ಅಕ್ಷತೆಯನ್ನು ವಿತರಿಸಲಾಗುತ್ತದೆ. ಬಳಿಕ ವಿಹೆಚ್‌ಪಿಯ ಸದಸ್ಯರು ಈ ಅಕ್ಷತೆಯನ್ನು ಜ.22ಕ್ಕೂ ಮುನ್ನ ದೇಶಾದ್ಯಂತ ವಿತರಣೆ ಮಾಡಲಿದ್ದಾರೆ.

# ಪರಂಪರೆಯ ಜ್ಞಾನವಿದ್ದರೆ ವಾಸ್ತವ ಅರಿಯಲು ಸಾಧ್ಯ

## ಸಾಹಿತಿ ಪ್ರೊ.ಎಸ್.ಪಿ.ಉಮಾದೇವಿ ಅಭಿಮತ



ಮೈಸೂರು, ನ.5(ಬಿಎಲ್‌ಯು)– ಪರಂಪರೆಯ ಜ್ಞಾನ ಇದ್ದರೆ ವಾಸ್ತವ ವಿಚಾರಗಳನ್ನು ಅರಿಯಲು ಸಾಧ್ಯವಾಗುತ್ತದೆ. ಇದು ನಮ್ಮನ್ನು ವಿಚಾರವಂತರನ್ನಾಗಿ ರೂಪಿಸುತ್ತದೆ ಎಂದು ವಿಶ್ರಾಂತ ಪ್ರಾಧ್ಯಾಪಕರೂ ಆದ ಸಾಹಿತಿ ಪ್ರೊ.ಎಸ್.ಪಿ. ಉಮಾದೇವಿ ಅಭಿಪ್ರಾಯಪಟ್ಟರು.

ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕನ್ನಡ ವಿಭಾಗ ಹಾಗೂ ಶರಣ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ವಚನ ವಾಚನ, ವ್ಯಾಖ್ಯಾನ ಸ್ಪರ್ಧೆ ಹಾಗೂ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯ ನಮ್ಮೆಲ್ಲರ ನಿತ್ಯದ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕಾಲ ಬದಲಾದಂತೆ ಸಾಹಿತ್ಯದ ಅಭಿರುಚಿ ಹಾಗೂ ಅಭಿವ್ಯಕ್ತಿ ಬದಲಾಗುತ್ತಿದೆ. ಆದರೆ ವಚನಗಳು ಎಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಪ್ರಕಟಣೆ ವಿಭಾಗದ ನಿರ್ದೇಶಕ ಪ್ರೊ.ಮಲ್ಲಿಕಾರ್ಜುನ ಮೊರಬದ, 12ನೇ ಶತಮಾನದಲ್ಲಿ ಕನ್ನಡ ಮಾಧ್ಯಮ ಬದುಕಿನ ಸ್ವರ್ಣ ಶಕ್ತಿಯಾಗಿತ್ತು. ಈ ಕಾರಣದಿಂದ ವಚನ ಸಾಹಿತ್ಯದ ಬಗ್ಗೆ ಮಾತನಾಡುತ್ತೇವೆ ಅಂದರೆ ಅದು, ಕನ್ನಡ ರಾಜ್ಯೋತ್ಸವ ಆಚರಿಸಿದಂತೆ ಎಂದು ಅಭಿಪ್ರಾಯಪಟ್ಟರು.

ಶರಣ ಸಂಸ್ಕೃತಿ ಹಾಗೂ ಶರಣರ ಆಶಯಗಳನ್ನು ಜನರಿಗೆ ತಲುಪಿಸಬೇಕು. ಅದರ ಅಂಗವಾಗಿ ಮೈಸೂರಿನ ಎಲ್ಲಾ ಕಾಲೇಜುಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ.ಗು. ಸದಾನಂದಯ್ಯ ಹೇಳಿದರು.

ವಚನ ವಾಚನ–ವ್ಯಾಖ್ಯಾನ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಂ.ಜಿ.ಧನುಶ್ರೀ ಮೊದಲ ಬಹುಮಾನ, ಎಂ.ಎನ್. ಹರಿಣಿಶ್ರೀ 2ನೇ ಬಹುಮಾನ ಹಾಗೂ ಸಿ.ಪಿ.ಪ್ರಶಾಂತ್ 3ನೇ ಬಹುಮಾನವನ್ನು ಪಡೆದರು. ಶಾರದಾ ವಿಲಾಸ ವಿದ್ಯಾ ಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಂ. ದೇವಿಕಾ, ಶರಣ ಸಾಹಿತ್ಯ ಪರಿಷತ್ ನಗರ ಕಾರ್ಯದರ್ಶಿ ಬಿ.ಎಸ್.ಕುಮಾರಸ್ವಾಮಿ, ಸದಸ್ಯೆ ಡಾ.ಬಿ.ನಿರ್ಮಲ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಶಿಕಾರಿಪುರ ಶಾಸಕ ಬಿ.ವೈ. ವಿಜಯೇಂದ್ರ ಅವರನ್ನು ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಭೇಟಿ ಮಾಡಿದ ಡಿ. ದೇವರಾಜ ಅರಸು, ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆರ್. ರಘು ಅವರು ಹುಟ್ಟುಹಬ್ಬದ ಶುಭಾಶಯ ಕೋರಿದರು.

# ಸ್ವಯಂ ಉದ್ಯೋಗ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು,ನ.5–ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ 2023–24ನೇ ಸಾಲಿನ ಡೇ ನಲ್ಮ್ ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗ ಯೋಜನೆಗೆ ಉಪ ಘಟಕದಡಿ ಅರ್ಜಿ ಆಹ್ವಾನಿಸಲಾಗಿದ್ದು, ನ.24ರ ಒಳಗೆ ಸೂಕ್ತ ದಾಖಲೆಗಳೊಂದಿಗೆ ಡೇ ನಲ್ಮ್ ಶಾಖೆಗೆ ಅರ್ಜಿಯನ್ನು ಸಲ್ಲಿಸಬಹುದು.

# ಸಮಾಜಕ್ಕೆ ಸಂದೇಶ ನೀಡುವ ಕಾದಂಬರಿ ರಚಿಸಬೇಕು

ಮೈಸೂರು, ನ.5(ಜಿಎ)–ಸಮಾಜಕ್ಕೆ ಸಂದೇಶ ನೀಡುವ ಕಾದಂಬರಿ ರಚಿಸಬೇಕು ಎಂದು ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್ ಸಲಹೆ ನೀಡಿದರು.

ನಗರದ ನಂಜುಮಳಿಗೆ ವೃತ್ತ ಸಮೀಪದ ಗೋಪಾಲಸ್ವಾಮಿ ಪಿಯು ಕಾಲೇಜು ಸಭಾಂಗಣದಲ್ಲಿ ಡಿಎನ್ಕೆ ಸ್ನೇಹ ಬಳಗವು ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಡಿ.ಎನ್. ಕೃಷ್ಣಮೂರ್ತಿ ಅವರ 'ಮಹಾನದಿ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಮಹಾನದಿ ಕೃತಿಯು ಸಾಮಾಜಿಕ, ಸಮಾಜಮುಖಿ ಕೃತಿ ಮಾತ್ರವಲ್ಲದೆ ಮಹಿಳಾವಾದಿ ಕೃತಿಯೂ ಕೂಡ ಆಗಿದೆ. ಕೃಷ್ಣಮೂರ್ತಿ ಅವರ ಮಹಾನದಿ ಕೃತಿಯು ಗ್ರಾಮೀಣ ಬದುಕಿನ ಅನುಭವವನ್ನು ಒಳಗೊಂಡಿದೆ. ನೈತಿಕ ನಿಲುವನ್ನು ಕೃತಿ ಒಳಗೊಂಡಿದೆ. ಡಿ.ಎನ್.ಕೃಷ್ಣಮೂರ್ತಿ ಅವರು ಗ್ರಾಮೀಣ ಬದುಕಿನ ಅನುಭವವನ್ನು ಮಹಾನದಿ ಕೃತಿಯಲ್ಲಿ ಚಿತ್ರಿಸಿದ್ದಾರೆ. ಅನೇಕರು ಕೃತಿಗಳನ್ನು ಓದದೆ ಪುಸ್ತಕ ಕುರಿತು ಟೀಕಿಸುವುದುಂಟು ಎಂದು ಅವರು ತಿಳಿಸಿದರು.




ಮೈಸೂರಿನ ಗೋಪಾಲಸ್ವಾಮಿ ಪಿಯು ಕಾಲೇಜು ಸಭಾಂಗಣದಲ್ಲಿ ಡಿಎನ್ಕೆ ಸ್ನೇಹ ಬಳಗವು ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಡಿ.ಎನ್.ಕೃಷ್ಣಮೂರ್ತಿ ಅವರ ಹಲವು ಕೃತಿಗಳ ಬಿಡುಗಡೆ ಸಂದರ್ಭ.

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಅವರು, ಡಿಎನ್ಕೆ ಅವರ 'ಪರಿಕ್ರಮಣ' ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ಇತ್ತೀಚೆಗೆ ಓದುವವರಿಗಿಂತ ಹೆಚ್ಚು ಹೆಚ್ಚು ಕೃತಿಗಳು ಮಾರುಕಟ್ಟೆ ಬರುತ್ತಿವೆ ಎಂದರು.

ಡಿಎನ್ಕೆ ಅವರಿಗೆ 60ನೇ ವರ್ಷದ ಸಂಭ್ರಮದ ಹಿನ್ನೆಲೆ ಅವರನ್ನು ಶಾಸಕ ಟಿ.ಎಸ್. ಶ್ರೀವತ್ಸ ಅಭಿನಂದಿಸಿ ಮಾತನಾಡಿ, ಡಿಎನ್ಕೆ ಅವರ ಕೃತಿ ಹಳ್ಳಿಗಾಡಿನ ಸೊಗಡನ್ನು ಒಳಗೊಂಡಿದೆ. ಸಮಾಜದ ಅಂಕು–ಡೊಂಕನ್ನು ತಿದ್ದುವ ಕೆಲಸವನ್ನು ಡಿಎನ್ಕೆ ಅವರು ಕೃತಿ ಮಾಡುತ್ತಿದೆ ಎಂದರು.

ಡಿಎನ್ಕೆ ಅವರ ನ್ಯಾಯದರ್ಶನ ಕೃತಿಯನ್ನು ಸಾಹಿತಿ ಬನ್ನೂರು ಕೆ.ರಾಜು ಬಿಡುಗಡೆಗೊಳಿಸಿದರು. ಮಾಜಿ ಸಚಿವ ಸಿ.ಎಚ್.ವಿಜಯಶಂಕರ್ ಕಾರ್ಯಕ್ರಮ ಉದ್ಘಾಟಿಸಿದರು. ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಮುರಳಿ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ಎಸ್.ಆರ್.ಗೋಪಾಲರಾವ್, ಕೃತಿಯ ಲೇಖಕ ಡಿ.ಎನ್.ಕೃಷ್ಣಮೂರ್ತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯ, ಶಂಕರನಾರಾಯಣ, ಉಪನ್ಯಾಸಕ ರಾಜೇಂದ್ರ ಪ್ರಸಾದ್, ಡಿಎನ್ಕೆ ಅವರ ಪುತ್ರಿ ನಿವೇದಿತಾ ಮತ್ತಿತರರು ಉಪಸ್ಥಿತರಿದ್ದರು.

## ಒಡನಾಡಿ ಸಂಸ್ಥೆಯ ವಿರುದ್ಧ ಆರೋಪ

# ನಿವೃತ್ತ ಪೊಲೀಸ್ ಅಧಿಕಾರಿ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ

ಮೈಸೂರು, ನ.5(ಎಂಕೆ)– ಒಡನಾಡಿ ಸಂಸ್ಥೆಯೇ ಅನೈತಿಕ ಚಟುವಟಿಕೆ ನಡೆಸುತ್ತಿದೆ ಎಂಬ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಅವರ ಹೇಳಿಕೆ ಖಂಡಿಸಿ ಒಡನಾಡಿ ಆಶ್ರಯಿತ ವಿದ್ಯಾರ್ಥಿನಿಯರು ಕಪ್ಪು ಬಾವುಟ ಪ್ರದರ್ಶಿಸಿ, ಪ್ರತಿಭಟನೆ ನಡೆಸಿದರು.

ಮೈಸೂರಿನ ಆಲನಹಳ್ಳಿಯಲ್ಲಿರುವ ನಿವೃತ್ತ ಪೊಲೀಸ್ ಅಧಿಕಾರಿ ರಂಗಸ್ವಾಮಿ ಮಾಲೀಕತ್ವದ ಕಟ್ಟಡವಿರುವ ರಸ್ತೆಯಲ್ಲಿ ಶನಿವಾರ ಜಮಾಯಿಸಿದ ವಿದ್ಯಾರ್ಥಿನಿಯರು 'ನಿನ್ನ ನಡೆಗೆ, ನಮ್ಮ ಧಿಕ್ಕಾರ' ಫಲಕ ಹಿಡಿದು ಕಪ್ಪು ಬಾವುಟ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

**ಆಯುಕ್ತರಿಗೆ ದೂರು ಸಲ್ಲಿಕೆ:** ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಅವರ ವಿರುದ್ಧ ತನಿಖೆ ನಡೆಸುವಂತೆ ಒತ್ತಾಯಿಸಿ ವಿದ್ಯಾರ್ಥಿನಿಯರ ತಂಡ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರಿಗೆ ದೂರು ಸಲ್ಲಿಸಿದರು.

ರಂಗಸ್ವಾಮಿ ಅವರು ಒಡನಾಡಿ ಸಂಸ್ಥೆ ಅನೈತಿಕ ಚಟುವಟಿಕೆ ನಡೆಸುತ್ತಿದೆ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ನೀಡಿದ್ದಾರೆ. ಆದರೆ ಸಂಸ್ಥೆಯು ಅಸಹಾಯಕ ಹಾಗೂ ಅತಂತ್ರಗೊಂಡ ಹೆಣ್ಣು ಮಕ್ಕಳನ್ನು ಸಂರಕ್ಷಿಸುತ್ತಿದೆ. ಅದಾಗ್ಯೂ ನಮ್ಮಲ್ಲಿ ಆಶ್ರಯಿತ ಹೆಣ್ಣು ಮಕ್ಕಳ ಕುರಿತು ಅನೈತಿಕ ಚಟುವಟಿಕೆ ನಡೆಸಲಾಗುತ್ತಿದೆ ಎಂಬ ಆರೋಪ ಮಾಡಿದ್ದಾರೆ. ಇದನ್ನು ಸಂಸ್ಥೆಯು ಗಂಭೀರವಾಗಿ ಪರಿಗಣಿಸಿದ್ದು, ನಿವೃತ್ತ ಅಧಿಕಾರಿ ವಿರುದ್ಧ ದೂರು ದಾಖಲಿಸಿ ತನಿಖೆ ನಡೆಸಬೇಕು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.



ಡಾ.ರಾಜ್, ಶಿವಸೈನ್ಯ, ಶಿವರಾಜ್‌ಕುಮಾರ್ ಅಭಿಮಾನಿ ಸಂಘದ ವತಿಯಿಂದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರಿಂದ ಡಾ.ರಾಜ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಚಲನಚಿತ್ರ ನಟ ಸೋಮಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಅಧ್ಯಕ್ಷ ಬಿ.ಎಸ್.ಶೇಖರ್, ಬಿ.ಎಸ್.ಮಹೇಶ್, ದೊರೆ, ಧರ್ಮರಾಜ್ ಹಾಗೂ ಇತರರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**6.11.2023 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 25.10.2023 ರಿಂದ 06.11.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.**

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ದಿ ಆರ್ಟ್ ಆಫ್ ಲೀವಿಂಗ್ (ವೇದ ವಿಜ್ಞಾನ ಮಹಾ ವಿದ್ಯಾಪೀಠ):** ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲೀವಿಂಗ್ ಶಿಬಿರ, ಆನಂದದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲೀವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ.

■ **ರಾಷ್ಟ್ರಭಾರತಿ ಚಾರಿಟೆಬಲ್ ಟ್ರಸ್ಟ್, ಮೈಸೂರು:** ಕನ್ನಡ ಹಬ್ಬ–2023, ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಚಿಂತಕರು ಮತ್ತು ಚಲನಚಿತ್ರ ನಟಿ ಮಾಳವಿಕ ಅವಿನಾಶ್, ಮುಖ್ಯ ಅತಿಥಿಗಳು: ಚಲನಚಿತ್ರ ನಟ ವಶಿಷ್ಠ ಸಿಂಹ, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಾಧಕರಿಗೆ ಸನ್ಮಾನ: ಪ್ರಶಸ್ತಿ ವಿತರಣೆ, ಸ್ಥಳ: ಕಲಾಮಂದಿರ, ಸಂಜೆ 5.30ರಿಂದ.

■ **ವಾಗ್ಭಾರತಿ ಕಲಾ ಸ್ಪಂದನ:** ರಂಗಭೂಮಿಯಿಂದ ಶೈಕ್ಷಣಿಕ ಪ್ರೋತ್ಸಾಹ ಕಲ್ಪಿಸುವುದಕ್ಕಾಗಿ ನಾಟಕ ಪ್ರಯೋಗ, 'ಕತ್ತಲೆ ಲೋಕ ಬೇರೆ–ಬೆಳಕಿನ ಲೋಕ ಬೇರೆ' ನಾಟಕ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಕದಂಬ ರಂಗವೇದಿಕೆಯ ರಾಜಶೇಖರ ಕದಂಬ, ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸ ಸಂಗೋತ್ರಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿಯಮಿತ, ಬೆಂಗಳೂರು:** 2023–23ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಸಹಕಾರ' ವಿಷಯ ಕುರಿತು ಚರ್ಚಾ ಸ್ಪರ್ಧೆ, ಉದ್ಘಾಟನೆ: ಮಾನಸಸಂಗೋತ್ರಿಯ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಸ್.ಮಹೇಂದ್ರಕುಮಾರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವ (ಪರಿಕ್ಷಾಂಗ) ಪ್ರೊ.ಕೆ.ಎಂ.ಮಹದೇವನ್, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸ ಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತತೆ):** ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ, ಉದ್ಘಾಟನೆ: ಅಂತಾರಾಷ್ಟ್ರೀಯ ನೃತ್ಯಗಾರ್ತಿ, ದಕ್ಷಿಣ ಭಾರತದ ದೂರದರ್ಶನ ಮತ್ತು ಚಲನಚಿತ್ರ ನಟಿ ಯಮುನಾ ಶ್ರೀನಿಧಿ, ಮುಖ್ಯ ಅತಿಥಿ: ಅಂತಾರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು, ತಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ರೇಷ್ಮಾ ಚಂಗಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮಾಗೇಶಪ್ಪ ಆರ್, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 11 ಗಂಟೆಗೆ.

■ **ಗಾನಭಾರತಿ, ವೀಣೆ ಶೇಷಣ್ಣ ಭವನ:** ನವೆಂಬರ್ ತಿಂಗಳ ಕಾರ್ಯಕ್ರಮ, ಮೈಸೂರಿನ ಪ್ರಸಿದ್ಧ ಗಾಯಕರಿಂದ ಭಾವಗೀತೆಯ ರಸದೌತಣ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6 ಗಂಟೆಗೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ: ಡಾ.ಜ್ಯೋತಿಶಂಕರ್, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರ ಕುಮಾರ್, 6.45 "ಕಲ್ಯಾಣ ಕರೆದಿದೆ ಕಲ್ಯಾಣ" ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಸಾಹಿತ್ಯ ಲೋಕದ ಹಿರಿಯ ವಿದ್ವಾಂಸ ಡಾ.ಕೆ.ಕೃಷ್ಣಮೂರ್ತಿ ಅವರೊಂದಿಗೆ ಸುಜನಾ ಅವರು ನಡೆಸಿದ್ದ ಸಂವಾದ, 10.00 ಬಳ್ಳಾರಿ ಎಂ.ರಾಘವೇಂದ್ರ ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ: ಬಾಂಬೆ ಸಹೋದರಿಯರು, ಶಂಕರ್ ಶ್ಯಾನುಭೋಗ್, 12.45 ನಮ್ಮ ಆರೋಗ್ಯ ಕಣ್ಣಿನ ತೊಂದರೆಗಳಿಗೆ ಆಯುರ್ವೇದ ಚಿಕಿತ್ಸೆ ಕುರಿತು ಡಾ.ಸ್ವರ್ಣಾ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು, 3.00 ಆರ್.ಕೆ.ಪದ್ಮನಾಭ–ವೀಣಾವಾದನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ: ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ತುರ್ತು ನಿಗಾ ಘಟಕ ಅಂದರೆ ಐ.ಸಿ.ಯು.ನಲ್ಲಿ ತೆಗೆದುಕೊಳ್ಳುವ ತುರ್ತು ಚಿಕಿತ್ಸಾ ನಿರ್ಣಯಗಳು. ಭಾಗವಹಿಸುವವರು ಡಾ.ಐಶ್ವರ್ಯ, 4.45 ಹಿಂದಿ ಪಾಠ: ಡಾ.ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: 'ಹಣ್ಣು ಹೊನ್ನು' ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ, 7.45 ಕಾನೂನುಗಳ ಭಾರತೀಕರಣ: ಮಾತನಾಡುತ್ತಾರೆ ಹಿರಿಯ ವಕೀಲ ಸಿ.ವಿ. ಕೇಶವಮೂರ್ತಿ. **ರಾತ್ರಿ:** 9.30 ಹಳ್ಳೀ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್, 10.00 ನಾಟಕ ನಾಟಕ 'ನಾಯಿ ಬಾಲ ಡೊಂಕೆ' ರಚನೆ– ಡಾ.ಅನಿಲ್‌ಕುಮಾರ್ ಮುಗಳಿ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 6 ಸೋಮವಾರ 2023

ಸಂಪುಟ: 44 | ಸಂಚಿಕೆ: 200 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4




# ರಾಜರ ಕಾಲದ ಗತ ವೈಭವ ತರಲು ನೀಲನಕ್ಷೆ ತಯಾರಿಸಿ

## ಮೈಸೂರನ್ನು ಮಾದರಿಯಾಗಿಸಲು ಅಧಿಕಾರಿಗಳಿಗೆ ಸಿಎಂ ಟಾಸ್ಕ್

- ಮಹಾರಾಜ ನಾಲ್ವಡಿ ಅವರನ್ನು ಮಾದರಿಯಾಗಿಟ್ಟುಕೊಳ್ಳಿ
- ಮೈಸೂರನ್ನು ನಂಬರ್ ಒನ್ ಸ್ಥಾನಕ್ಕೇರಿಸಿ
- ಜನರ ಸಮಸ್ಯೆ ಅರಿಯಿರಿ, ಜನಪ್ರಿಯತೆ ಗಳಿಸಿ
- ಮುಂದಿನ ವರ್ಷ ಅದ್ದೂರಿ ದಸರಾ ಆಚರಿಸೋಣ

ಮೈಸೂರು, ನ.5 (ಬಿಎಲ್‌ಯು)–ರಾಜರ ಕಾಲದ ಅಭಿವೃದ್ಧಿಯ ಗತ ವೈಭವ ಮೈಸೂರು ಜಿಲ್ಲೆಯಲ್ಲಿ ಮರುಕಳುಹಿಸಿ, ಮಾದರಿಯಾಗಿ ರೂಪಿಸಲು ನೀಲನಕ್ಷೆ (ಬ್ಲೂ ಪ್ರಿಂಟ್) ತಯಾರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಯಶಸ್ವಿಯಾಗಿ ನಡೆಯಲು ಕಾರಣಕರ್ತರಾದ ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಲು ಆಯೋಜಿಸಿದ್ದ ಔತಣಕೂಟಕ್ಕೂ ಮುನ್ನ ನಡೆಸಿದ ಸಭೆಯಲ್ಲಿ ಸಿದ್ದರಾಮಯ್ಯ ಈ ಆದೇಶ ನೀಡಿದರು.

ರಾಜರ ಕಾಲದ ಅಭಿವೃದ್ಧಿಯ ಗತ ವೈಭವ ಮೈಸೂರಿನಲ್ಲಿ ಮರುಕಳುಹಿಸಬೇಕು. ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮಾಡಿದ ನೀರಾವರಿ, ಕೃಷಿ, ಸಮಾಜ ಕಲ್ಯಾಣ ಸೇರಿದಂತೆ ಹಲವು ಕ್ಷೇತ್ರಗಳ ಅಭಿವೃದ್ಧಿ ಮಾದರಿಯಾಗಿಟ್ಟುಕೊಳ್ಳಬೇಕು. ಈ ಮೂಲಕ ರಾಜರ ಕಾಲದ ಅಭಿವೃದ್ಧಿಯ ಗತ ವೈಭವ ಮರುಕಳುಹಿಸಬೇಕು ಎಂದರು.

ಇದನ್ನು ಕಾರ್ಯಗತಗೊಳಿಸಲು ನೀಲನಕ್ಷೆ ತಯಾರಿಸಿ. ಈ ಮೂಲಕ ಮೈಸೂರನ್ನು ಅಭಿವೃದ್ಧಿಯಲ್ಲಿ ನಂಬರ್ ಒನ್ ಸ್ಥಾನಕ್ಕೆ ಕೊಂಡೊಯ್ಯಿರಿ ಎಂದು ಅಧಿಕಾರಿಗಳಿಗೆ ಟಾರ್ಗೆಟ್ ನೀಡಿದ ಸಿಎಂ ಸಿದ್ದರಾಮಯ್ಯ, ಈ ಸಂಬಂಧ ಶೀಘ್ರವೇ ನೀಲನಕ್ಷೆ ತಯಾರಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ತಾಕೀತು ಮಾಡಿದರು.

ಕಳೆದ ಐದು ವರ್ಷದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೈಸೂರಿನ ಅಭಿವೃದ್ಧಿ ಶೂನ್ಯವಾಗಿದೆ. ಹಾಗಾಗಿ ಈಗ ಮೈಸೂರು ಅಭಿವೃದ್ಧಿ ಮಾಡೋಣ. ಅಧಿಕಾರಿಗಳಿಗೆ ಜನಪರವಾದ ಮನಸ್ಸು, ಕಾಳಜಿ ಹಾಗೂ ಹೃದಯ ವೈಶಾಲ್ಯತೆ ಇದ್ದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಸಾಗಬೇಕು ಎಂದು ಸಲಹೆ ನೀಡಿದರು.


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಈ ವೇಳೆ ಜನಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

> “ ಅಧಿಕಾರಿಗಳು ಅರ್ಪಣಾ ಮನೋಭಾವದಿಂದ ಕೆಲಸ ಮಾಡಿದರೆ ಪರಿಣಾಮಕಾರಿ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ. ಅಧಿಕಾರಿಗಳು ಜನರ ಜೊತೆ ಸಮನ್ವಯತೆ ಸಾಧಿಸಿ ಅವರ ಕಷ್ಟಗಳಿಗೆ ಸ್ಪಂದಿಸಿದರೆ ಅಧಿಕಾರಿಗಳ ಜನಪ್ರಿಯತೆ ಹೆಚ್ಚಾಗುತ್ತದೆ. ಇದರಿಂದ ಜನರ ಸಮಸ್ಯೆ ಕೂಡ ಮನದಟ್ಟಾಗುತ್ತದೆ. ಈ ಕಾರಣದಿಂದ ಜನರ ಸಮಸ್ಯೆಗೆ ಪರಿಹಾರ ಒದಗಿಸಲು ಸುಲಭವಾಗುತ್ತದೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ ಸೇರಿದಂತೆ ಪ್ರತಿಯೊಂದು ಕ್ಷೇತ್ರದ ಅಭಿವೃದ್ಧಿಯಲ್ಲಿ ಮೈಸೂರು ಅಗ್ರಸ್ಥಾನದಲ್ಲಿರಬೇಕು. ಇದು ನಿಮ್ಮಿಂದ ಮಾತ್ರ ಸಾಧ್ಯವಾಗುತ್ತದೆ. ಇದನ್ನು ಸಾಧಿಸಿ ತೋರಿಸಿ ಎಂದು ಸಿದ್ದರಾಮಯ್ಯ ಅಧಿಕಾರಿಗಳಿಗೆ ಟಾಸ್ಕ್ ನೀಡಿದರು. ಮೈಸೂರು ದಸರಾ ಮಹೋತ್ಸವವನ್ನು ಯಶಸ್ವಿಯಾಗಿ ನಡೆಸಿದ್ದೀರಾ ಎಂದು ಅಧಿಕಾರಿಗಳನ್ನು ಅಭಿನಂದಿಸಿದ ಸಿದ್ದರಾಮಯ್ಯ, ಒಗ್ಗಟ್ಟಿನ ಶ್ರಮ ಮತ್ತು ಕೆಲಸಗಳ ಹಂಚಿಕೆ ಮೂಲಕ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಇಲ್ಲದೆ ದಸರಾ ಯಶಸ್ವಿ ಮಾಡಿದ್ದೀರಾ. ಇದು ಅಧಿಕಾರಿಗಳ ಕಾರ್ಯಕ್ಷಮತೆಗೆ ನಿದರ್ಶನವಾಗಿದೆ. ದಸರಾದಂತೆ ಸರ್ಕಾರದ ಎಲ್ಲಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಗೊಳಿಸಿ, ● 8ನೇ ಪುಟಕ್ಕೆ

# ಪಂಚರಾಜ್ಯ ಚುನಾವಣೆಯಲ್ಲಿ ಮೋದಿಯಿಂದ ಕರ್ನಾಟಕದ ಗ್ಯಾರಂಟಿ ಯೋಜನೆ ಘೋಷಣೆ

## ಈಗ ದೇಶ ದಿವಾಳಿಯಾಗುವುದಿಲ್ಲವೆ?: ಸಿಎಂ ಸಿದ್ದರಾಮಯ್ಯ ಪ್ರಶ್ನೆ

ಮೈಸೂರು,ನ.5(ಎಂಟಿವೈ)–ಕರ್ನಾಟಕದಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ರಾಜಕೀಯ ಉದ್ದೇಶಕ್ಕಾಗಿ ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿ ಇದೀಗ ಪಂಚರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ವತಿಯಿಂದಲೇ ಗ್ಯಾರಂಟಿ ಯೋಜನೆಗಳನ್ನು ಘೋಷಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಲ್ಲಾ ಜಾತಿ, ಜನಾಂಗಗಳ ಹಾಗೂ ಧರ್ಮಗಳ ಬಡ ಜನರ ಹಿತಕಾಯಲು ಜಾರಿಗೊಳಿಸಿದ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ಮೋದಿ ಟೀಕಿಸಿದ್ದರು. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂದು ಆರೋಪಿಸಿದ್ದರು. ಇದೀಗ ಪಂಚರಾಜ್ಯ ಚುನಾವಣೆಗಾಗಿ ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನೇ ಅನುಕರಣೆ ಮಾಡುವಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಈಗ ದೇಶ ದಿವಾಳಿಯಾಗುವುದಿಲ್ಲವೇ? ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದಾಗ ಮಾತ್ರ ರಾಜ್ಯ ದಿವಾಳಿಯಾಗುತ್ತದಾ ಎಂದು ಪ್ರಶ್ನಿಸಿದರು.

**ನಾಯಕತ್ವ ಬದಲಾವಣೆ ಮಾತನಾಡಬಾರದು:** ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಸಂಬಂಧ ಸ್ವಪಕ್ಷದ ಶಾಸಕರಿಗೆ ಮಾತನಾಡದಂತೆ ಸೂಚಿಸಿದ್ದೇನೆ. ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸದ್ಯಕ್ಕೆ ಆ ವಿಷಯದ ಚರ್ಚೆ ಅಪ್ರಸ್ತುತ ಎಂದರು. ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ರಚಿಸಬೇಕೆಂದು ಹಂಬಲಿಸುತ್ತಿದ್ದರು. ಆದರೆ, ಎರಡೂ ಪಕ್ಷಗಳಿಗೂ ತೀವ್ರ ಹಿನ್ನಡೆಯಾಗಿದೆ. ಆ ಕಾರಣದಿಂದಲೇ ನಾಯಕತ್ವ ಬದಲಾವಣೆ ವಿಷಯವನ್ನು ಮುನ್ನೆಲೆಗೆ ತಂದಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಹತಾಶರಾಗಿದ್ದಾರೆ. ಈ ಕಾರಣದಿಂದಲೇ ಸರ್ಕಾರದ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ. ಯಾರು ಏನೇ ಹೇಳಿದರೂ ನಮ್ಮ ಸರ್ಕಾರ ಬಡವರು, ರೈತರು ಹಾಗೂ ಗ್ರಾಮೀಣ ಜನರ ಹಿತಕಾಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎಂದು ತಿಳಿಸಿದರು.

**ಪರೀಕ್ಷಾ ಅಕ್ರಮ:** ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ, ಈ ಬಗ್ಗೆ ಮಾಹಿತಿ ತರಿಸಿಕೊಳ್ಳುತ್ತೇನೆ. ಅಲ್ಲದೆ, ಅಕ್ರಮದ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ● 8ನೇ ಪುಟಕ್ಕೆ

### ಅಧಿಕಾರ ಎಷ್ಟು ದಿನ ಎಂಬುದು ಸಿದ್ದರಾಮಯ್ಯಗೇ ಗೊತ್ತಿಲ್ಲ

### ಪ್ರಧಾನಿ ನರೇಂದ್ರ ಮೋದಿ ವ್ಯಂಗ್ಯ

**ಖಂಡವಾ/ಸಿವನಿ:** ಕಾಂಗ್ರೆಸ್ ಪಕ್ಷವು ಕರ್ನಾಟಕಕ್ಕೆ ಧಕ್ಕೆ ಉಂಟು ಮಾಡಿದೆ, ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.



ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಎಷ್ಟು ದಿನ ಮುಂದುವರಿಯುತ್ತಾರೆ ಎಂಬುದು ಅವರಿಗೇ ಗೊತ್ತಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಕಾಂಗ್ರೆಸ್ ಎಲ್ಲಿಯೇ ಸರ್ಕಾರ ರಚಿಸಿದರೂ ಭ್ರಷ್ಟಾಚಾರದಲ್ಲಿ ತೊಡಗುತ್ತದೆ, ರಾಜ್ಯವನ್ನು ಹಾಳು ಮಾಡುತ್ತದೆ. ಅವರು ಒಳಜಗಳದಲ್ಲಿ ತೊಡಗಿರುತ್ತಾರೆ. ಜನರಿಗೆ ನೀಡಲು ಅವರಲ್ಲಿ ಸಮಯವೇ ಇರುವುದಿಲ್ಲ ಎಂದು ಮೋದಿ ಮಧ್ಯಪ್ರದೇಶದ ಖಂಡವಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಕರ್ನಾಟಕದಲ್ಲಿ 6 ತಿಂಗಳ ಹಿಂದಷ್ಟೇ ರಚನೆಯಾಗಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ನೋಡಿ. ರಾಜ್ಯದ ಮುಖ್ಯಸ್ಥ ಸ್ಥಾನದಲ್ಲಿ ಎಷ್ಟು ದಿನ ಇರುತ್ತೇನೆ ಎಂಬುದು ಮುಖ್ಯಮಂತ್ರಿಗೆ ಗೊತ್ತಿಲ್ಲ. ಕರ್ನಾಟಕವನ್ನು ಅವರು ಹಾಳು ಮಾಡಿದ್ದಾರೆ, ಅಭಿವೃದ್ಧಿ ಕೆಲಸಗಳು ನಿಂತುಹೋಗಿವೆ. ಇದು ಕಾಂಗ್ರೆಸ್ ಸಂಸ್ಕೃತಿ. ದೆಹಲಿಯಲ್ಲಿ ಕುಳಿತಿರುವ ಪಕ್ಷದ ನ್ಯಾಯಾಧೀಶ, ನ್ಯಾಯನಿರ್ಣಯ ಮಾಡುತ್ತಾರೆ ಎಂದು ಲೇವಡಿ ಮಾಡಿದರು. ಕಾಂಗ್ರೆಸ್ ಸರ್ಕಾರವು ರಚನೆಯಾದಲ್ಲೆಲ್ಲ, ಆ ರಾಜ್ಯವನ್ನು ಲೂಟಿ ಮಾಡಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ನಡುವೆ ಸ್ಪರ್ಧೆ ಶುರುವಾಗುತ್ತದೆ. ಇಂತಹ ಸುದ್ದಿಗಳು ಕರ್ನಾಟಕದಿಂದ ಬರುತ್ತಲೇ ಇವೆ ಎಂದರು.

ರಾಜಸ್ಥಾನದಲ್ಲಿ ಸ್ಪಷ್ಟ ಬಹುಮತ ಪಡೆದ ನಂತರದಲ್ಲಿ 2 ಗುಂಪುಗಳು ಕಳೆದ ನಾಲ್ಕೂವರೆ ವರ್ಷಗಳಿಂದ ದಿನದ 24 ಗಂಟೆಗಳೂ ಕಿತ್ತಾಡುತ್ತಿವೆ ಎಂದು ದೂರಿದರು. ರಾಜಸ್ಥಾನದಲ್ಲಿ ಕನ್ಹಯ್ಯಾ ಲಾಲ್ ಎಂಬುವವರ ಹತ್ಯೆ ನಡೆದಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿದರು. ಮಾಫಿಯಾ ಆಡಳಿತ, ಭ್ರಷ್ಟಾಚಾರ ಮತ್ತು ಲೂಟಿಯನ್ನು ಕಾಂಗ್ರೆಸ್ ಉತ್ತೇಜಿಸುತ್ತದೆ. ರಾಜಸ್ಥಾನದಲ್ಲಿ ವ್ಯಕ್ತಿಯೊಬ್ಬರ ಕತ್ತು ಸೀಳಿದ ನಂತರ ನಡೆದ ಸಂಭ್ರಮಾಚರಣೆಯು ಊಹೆಗೂ ನಿಲುಕದ್ದಾಗಿತ್ತು. ಇದು ಕಾಂಗ್ರೆಸ್ ಆಡಳಿತದಲ್ಲಿ ನಡೆಯಿತು ಎಂದರು.

### ಸಾರಿಗೆ ಬಸ್ ಪ್ರಯಾಣ ದರ ಪರಿಷ್ಕರಣೆ: ಪ್ರತ್ಯೇಕ ಆಯೋಗಕ್ಕೆ ಚಿಂತನೆ

**ಬೆಂಗಳೂರು:** ಬಸ್‌ಗಳ ಖರೀದಿ, ಬಿಡಿ ಭಾಗಗಳು ಹಾಗೂ ದುರಸ್ತಿ ವೆಚ್ಚ ಮತ್ತು ಇಂಧನ ದರ ಏರಿಕೆ ಆಧಾರದಲ್ಲಿ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಪರಿಷ್ಕರಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮಾದರಿಯಲ್ಲಿ ಪ್ರತ್ಯೇಕ ಆಯೋಗವೊಂದನ್ನು ರಚಿಸುವ ಕುರಿತು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಈ ಹಿಂದೆ ಇದ್ದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾರಿಗೆ ಇಲಾಖೆ ಅಧೀನದಲ್ಲಿರುವ 4 ರಸ್ತೆ ಸಾರಿಗೆ ನಿಗಮಗಳನ್ನು ನಷ್ಟದಿಂದ ಪಾರು ಮಾಡುವ ಕುರಿತು ಅಧ್ಯಯನ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸ ಮೂರ್ತಿ ನೇತೃತ್ವದ ಸಮಿತಿ ರಚಿಸಲಾಗಿತ್ತು. ಬಸ್ ಪ್ರಯಾಣ ದರ ಪರಿಷ್ಕರಣೆಗೆ ಕೆಇಆರ್‌ಸಿ ಮಾದರಿಯಲ್ಲಿ ಆಯೋಗವೊಂದನ್ನು ನೇಮಿಸುವುದು ● 8ನೇ ಪುಟಕ್ಕೆ



# ಕೊಹ್ಲಿ ಶತಕ, ಜಡೇಜಾ ಸ್ಪಿನ್ ಮೋಡಿ: ಭಾರತಕ್ಕೆ ಜಯ

- ದಕ್ಷಿಣ ಆಫ್ರಿಕಾ 83 ರನ್‌ಗೆ ಆಲೌಟ್
- ಸತತ 8ನೇ ಗೆಲುವಿನೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡ ಭಾರತ



ಕೋಲ್ಕತ್ತಾ, ನ.5– ವಿರಾಟ್ ಕೊಹ್ಲಿ ಅವರ ಭರ್ಜರಿ ಶತಕ ಹಾಗೂ ರವೀಂದ್ರ ಜಡೇಜಾ ಸ್ಪಿನ್ ಮೋಡಿ ನೆರವಿನಿಂದ ಭಾರತ ಬಲಿಷ್ಠ ದಕ್ಷಿಣ ಆಫ್ರಿಕಾ ವಿರುದ್ಧ 243 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇದರೊಂದಿಗೆ ಭಾರತ ಐಸಿಸಿ ವಿಶ್ವಕಪ್‌ನಲ್ಲಿ ಸತತ 8ನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದೆ. ಮತ್ತೊಂದೆಡೆ 83 ರನ್‌ಗಳಿಗೆ ಆಲೌಟ್ ಆಗುವ ಮೂಲಕ ದಕ್ಷಿಣ ಆಫ್ರಿಕಾ ವಿಶ್ವಕಪ್ ಇತಿಹಾಸದಲ್ಲೇ ಅತ್ಯಂತ ಕೆಟ್ಟ ದಾಖಲೆ ಬರೆಯಿತು.


ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತಕ್ಕೆ ಶುಭ್‌ಮನ್ ಗಿಲ್ ಹಾಗೂ ನಾಯಕ ರೋಹಿತ್ ಶರ್ಮಾ ಜೋಡಿ ಮೊದಲ ವಿಕೆಟ್‌ಗೆ 5.5 ಓವರ್‌ಗಳಲ್ಲೇ 62 ರನ್‌ಗಳ ಜೊತೆಯಾಟವಾಡುವ ಮೂಲಕ ಸ್ಫೋಟಕ ಆರಂಭ ಒದಗಿಸಿದರು. ಪಂದ್ಯದಲ್ಲಿ ಮಿಂಚಿನ ಬ್ಯಾಟಿಂಗ್ ನಡೆಸಿದ ನಾಯಕ ರೋಹಿತ್ ಶರ್ಮಾ 24 ಎಸೆತಗಳಲ್ಲಿ 6 ಬೌಂಡರಿ. 2 ಸಿಕ್ಸರ್ ಒಳಗೊಂಡ 40 ರನ್ ಸಿಡಿಸಿ ನಿರ್ಗಮಿಸಿದರು. ಇವರ ಬೆನ್ನಲ್ಲೇ ಶುಭಮನ್ ಗಿಲ್ 23 ರನ್ ಗಳಿಸಿ ಪೆವಿಲಿಯನ್‌ಗೆ ಸೇರಿಕೊಂಡರು.

ನಂತರ 3ನೇ ವಿಕೆಟ್‌ಗೆ ಜೊತೆಯಾದ ಶ್ರೇಯಸ್ ಅಯ್ಯರ್ ಹಾಗೂ ವಿರಾಟ್ ಕೊಹ್ಲಿ ಎಚ್ಚರಿಕೆಯ ಆಟವಾಡಿದರು. ಬಳಿಕ ಸಹಜ ಆಟವಾಡಿದ ಇವರಿಬ್ಬರೂ 138 ರನ್‌ಗಳ ಜೊತೆಯಾಟವಾಡಿ ಬೇರ್ಪಟ್ಟರು. ಆರಂಭದಲ್ಲಿ ● 8ನೇ ಪುಟಕ್ಕೆ

### 49ನೇ ಶತಕ ಸಿಡಿಸಿ ಸಚಿನ್ ದಾಖಲೆ ಸರಿಗಟ್ಟಿದ ಕೊಹ್ಲಿ

ಕೋಲ್ಕತ್ತಾ, ನ.5– ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಮಿಂಚಿನ ಪ್ರದರ್ಶನ ನೀಡಿದ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 49ನೇ ಶತಕ ಬಾರಿಸಿದರು. ಈ ಮೂಲಕ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಹೆಸರಲ್ಲಿದ್ದ ಒಡಿಐ ಕ್ರಿಕೆಟ್‌ನಲ್ಲಿನ ಅತಿ ಹೆಚ್ಚು ಶತಕಗಳ ವಿಶ್ವ ದಾಖಲೆಯನ್ನು ಸರಿಗಟ್ಟಿದ್ದಾರೆ.

ವಿರಾಟ್ ಕೊಹ್ಲಿ ಅವರು ತಮ್ಮ 35ನೇ ಹುಟ್ಟುಹಬ್ಬವನ್ನು ವಿಶ್ವ ದಾಖಲೆಯ ಶತಕದೊಂದಿಗೆ ● 8ನೇ ಪುಟಕ್ಕೆ




### ಕೊಹ್ಲಿ ಬರ್ತ್ ಡೇ ಶತಕ–ಶುಭಾಶಯಗಳ ಸುರಿಮಳೆ!

ಕೋಲ್ಕತ್ತಾ, ನ.5– ಬರ್ತ್‌ಡೇ ದಿನದಂದೇ ಸಚಿನ್ ದಾಖಲೆ ಸರಿಗಟ್ಟಿ ಶತಕ ಸಿಡಿಸಿದ ವಿರಾಟ್ ಕೊಹ್ಲಿಗೆ ಸೋಷಿಯಲ್ ಮೀಡಿಯಾ ಎಕ್ಸ್‌ನಲ್ಲಿ ಶುಭಾಶಯಗಳ ಸುರಿಮಳೆಯಾಗಿದೆ.

ಕ್ರಿಕೆಟ್ ದೇವರು ಎಂದೇ ಆರಾಧಿಸಲ್ಪಡುವ ಸಚಿನ್ ತೆಂಡೂಲ್ಕರ್ ವಿರಾಟ್ ಸಾಧನೆಗೆ ಶುಭ ಕೋರಿದ್ದಾರೆ. ತನ್ನ ದಾಖಲೆಯನ್ನು ಸರಿಗಟ್ಟಿದ ಕೊಹ್ಲಿ ಸಾಧನೆಯನ್ನು ಕೊಂಡಾಡಿದ್ದಾರೆ. ಜೊತೆಗೆ ಶೀಘ್ರದಲ್ಲೇ 50ನೇ ಶತಕ ದಾಖಲಿಸಿ ಎಂದು ಶುಭ ಹಾರೈಸಿದ್ದಾರೆ. ಐಸಿಸಿ ಕೂಡಾ, ಗ್ರೇಟ್ ನೆಸ್ ಮೀಟ್ಸ್ ಗ್ರೇಟ್ ನೆಸ್. ಕೊಹ್ಲಿಗೆ 49ನೇ ● 8ನೇ ಪುಟಕ್ಕೆ



# ಬೆಂಗಳೂರಲ್ಲಿ ಗಣಿ–ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿ ಬರ್ಬರ ಹತ್ಯೆ

ಬೆಂಗಳೂರು, ನ.5–ಬೆಂಗಳೂರಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿಯನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ.


ಪ್ರತಿಮಾ

ಬೆಂಗಳೂರು ಗ್ರಾಮಾಂತರ ಭೂಗರ್ಭಶಾಸ್ತ್ರ ವಿಭಾಗದ ಉಪನಿರ್ದೇಶಕಿ ಪ್ರತಿಮಾ (37) ಹತ್ಯೆಗೀಡಾದವರು. ಇವರು ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡಕಲ್ಲಸಂದ್ರದ ಗೋಕುಲ್ ಅಪಾರ್ಟ್‌ಮೆಂಟ್‌ನಲ್ಲಿ ಒಂಟಿಯಾಗಿ ವಾಸವಿದ್ದರು.

ಶನಿವಾರ ರಾತ್ರಿ 8 ಗಂಟೆ ಸುಮಾರಿನಲ್ಲಿ ಇವರನ್ನು ಇಲಾಖೆ ಚಾಲಕ ಅಪಾರ್ಟ್‌ಮೆಂಟ್‌ನಲ್ಲಿ ಡ್ರಾಪ್ ಮಾಡಿ ಹೋಗಿದ್ದ. ನಂತರ ಇವರ ಮನೆಗೆ ಪ್ರವೇಶಿಸಿದ ದುಷ್ಕರ್ಮಿಗಳು ಅವರನ್ನು ಹತ್ಯೆ ಮಾಡಿರಬಹುದು ಎಂದು ಶಂಕಿಸಲಾಗಿದೆ. ಪ್ರತಿಮಾ ಅವರ ಮನೆಯಲ್ಲಿ ಯಾವುದೇ ವಸ್ತುಗಳು ಕಳುವಾಗಿಲ್ಲ. ಇವರಿಗೆ ಪರಿಚಯವಿರುವವರೇ ಹತ್ಯೆ ಮಾಡಿರಬಹುದು ಎಂದು ಶಂಕಿಸಿದ್ದು, ಹತ್ಯೆಗೆ ಕಾರಣವೇನು ಎಂಬುದು ನಿಗೂಢವಾಗಿಯೇ ಉಳಿದಿದೆ. ಘಟನಾ ಸ್ಥಳಕ್ಕೆ ಡಿಸಿಪಿ ರಾಹುಲ್ ಶಹಪುರವಾಡ್ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಅಪಾರ್ಟ್‌ಮೆಂಟ್‌ನ ಸಿಸಿಟಿವಿ ಫುಟೇಜ್‌ಗಳನ್ನು ಸಂಗ್ರಹಿಸಿ ತನಿಖೆ ಮುಂದುವರೆಸಿದ್ದಾರೆ.

ಪ್ರತಿಮಾ 18 ವರ್ಷದ ಹಿಂದೆ ಸತ್ಯನಾರಾಯಣರನ್ನು ವಿವಾಹವಾಗಿದ್ದು, ದಂಪತಿಗೆ 15 ವರ್ಷದ ಪುತ್ರನಿದ್ದಾನೆ. ವಿವಾಹವಾದ ಕೆಲ ದಿನಗಳಲ್ಲೇ ಪ್ರತಿಮಾಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ನೌಕರಿ ದೊರೆತಿದ್ದು, ಬೆಂಗಳೂರಿನಲ್ಲಿ ವಾಸವಿದ್ದರೆ, ಪತಿ ಮತ್ತು ಪುತ್ರ ತೀರ್ಥಹಳ್ಳಿಯಲ್ಲಿ ವಾಸವಾಗಿದ್ದಾರೆ.

ಪ್ರತಿಮಾ ಉತ್ತಮ ಅಧಿಕಾರಿಯಾಗಿದ್ದು, ಕೆಲಸದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ ಅವರ ಬಗ್ಗೆ ಯಾವುದೇ ದೂರುಗಳೂ ಬಂದಿರಲಿಲ್ಲ. ಯಾವ ಕಾರಣಕ್ಕೆ ಕೊಲೆಯಾಗಿದೆ ಎಂಬುದನ್ನು ಪೊಲೀಸರ ತನಿಖೆಯಿಂದ ತಿಳಿಯಬೇಕಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಹೇಳಿದರು.

ಅಕ್ರಮವಾಗಿ ಜಲ್ಲಿ ಸಾಗಾಣಿಕೆ ಹಾಗೂ ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂಬ ದೂರುಗಳು ಬಂದಿದ್ದವು. ಈ ಬಗ್ಗೆ ಚರ್ಚಿಸಲು ತಿಂಗಳ ಹಿಂದೆ ಕರೆದಿದ್ದ ಸಭೆಯಲ್ಲಿ ಪ್ರತಿಮಾ ಕೂಡ ಭಾಗವಹಿಸಿದ್ದರು. ತಮಿಳುನಾಡಿನಿಂದ ಬರುವ ವಾಹನಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅವರಿಗೆ ಸೂಚಿಸಿದ್ದೆ ಎಂದರು.

# ಅರಣ್ಯ ಸಿಬ್ಬಂದಿ ಗುಂಡೇಟಿಗೆ ಕಡವೆ ಬೇಟೆಗಾರ ಬಲಿ

- ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದ ಘರ್ಷಣೆ
- ಕಡವೆ ಬೇಟೆಯಾಡಿ ಹೊತ್ತೊಯ್ಯುತ್ತಿದ್ದ ಬೇಟೆಗಾರರ ಗ್ಯಾಂಗ್
- ಬೇಟೆಗಾರರ ದಾಳಿಗೆ ಪ್ರತಿದಾಳಿ ನಡೆಸಿದ ಅರಣ್ಯ ಸಿಬ್ಬಂದಿ

ಬಂಡೀಪುರ, ನ.5 (ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದಲ್ಲಿ ಕಡವೆ (ಸಾಂಬರ್) ಬೇಟೆಯಾಡಿ ಪರಾರಿಯಾಗುತ್ತಿದ್ದ ಬೇಟೆಗಾರರ ನಡುವೆ ನಡೆದ ಸಂಘರ್ಷದಲ್ಲಿ ಅರಣ್ಯ ಸಿಬ್ಬಂದಿ ಗುಂಡೇಟಿಗೆ ಬೇಟೆಗಾರನೊಬ್ಬ ಬಲಿಯಾಗಿರುವ ಘಟನೆ ಭಾನುವಾರ ಮುಂಜಾನೆ ನಡೆದಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಭೀಮನಬೀಡು ಗ್ರಾಮದ ಮನು(26) ಎಂಬಾತನೇ ಅರಣ್ಯ ಸಿಬ್ಬಂದಿ ಗುಂಡೇಟಿಗೆ ಬಲಿಯಾದ ಬೇಟೆಗಾರನಾಗಿದ್ದಾನೆ. ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಗೆ ಒಳಪಡುವ ಮದ್ದೂರು ವಲಯದಲ್ಲಿ 8ರಿಂದ 10 ಮಂದಿ ಬೇಟೆಗಾರರ ತಂಡವೊಂದು ಪ್ರಾಣಿ ಬೇಟೆಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ನುಗ್ಗಿರುವ ಖಚಿತ ಮಾಹಿತಿ ಮೇರೆಗೆ ಅರಣ್ಯ ಸಿಬ್ಬಂದಿ ಎರಡು ತಂಡ ಕಾರ್ಯೋನ್ಮುಖವಾಗಿತ್ತು. ಇಂದು ಮುಂಜಾನೆ 3ರಿಂದ 4 ಗಂಟೆ ವೇಳೆಗೆ ಬಂಡೀಪುರ ಅರಣ್ಯದ ಮದ್ದೂರು ವಲಯದ ಚೆನ್ನಮಲ್ಲಾಪುರ ರಸ್ತೆಯಲ್ಲಿ ಬೇಟೆಗಾರರ ತಂಡ ಎರಡು ಬಂದೂಕಿನೊಂದಿಗೆ ಪ್ಲಾಸ್ಟಿಕ್ ಚೀಲದಲ್ಲಿ ಕಡವೆ ಮಾಂಸವನ್ನು ತುಂಬಿಕೊಂಡು ಹೋಗುತ್ತಿರುವುದು ಅರಣ್ಯ ಸಿಬ್ಬಂದಿ ಗಮನಕ್ಕೆ ಬಂದಿದೆ.

ಈ ವೇಳೆ ಅರಣ್ಯ ಸಿಬ್ಬಂದಿ ತಂಡ ಬೇಟೆಗಾರರಿಗೆ ಶರಣಾಗುವಂತೆ ಎಚ್ಚರಿಕೆ ನೀಡಿದ್ದಾರೆ. ಈ ವೇಳೆ ಬೇಟೆಗಾರರು ಅರಣ್ಯ ಸಿಬ್ಬಂದಿ ಎಚ್ಚರಿಕೆಗೆ ಮನ್ನಣೆ ನೀಡದೇ ಅರಣ್ಯ ಸಿಬ್ಬಂದಿ ವಿರುದ್ಧವೇ ತಿರುಗಿಬಿದ್ದಿದ್ದಾರೆ. ಬೇಟೆಗಾರರು ದಾಳಿಗೆ ಮುಂದಾದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ಕಂಗೆಟ್ಟಿದ್ದಾರೆ. ಇದರಿಂದ ಇಬ್ಬರು ಸಿಬ್ಬಂದಿ ನೆಲಕ್ಕುರುಳಿ ಬಿದ್ದರೆ ಆತ್ಮರಕ್ಷಣೆಗಾಗಿ ಪ್ರಭಾರ ಡಿಆರ್‌ಎಫ್‌ಓ ನವೀನ್ ಎಂಬುವರು ಗುಂಡು ಹಾರಿಸಿದ್ದಾರೆ. ಕತ್ತಲೆಯಲ್ಲಿ ಗುಂಡು ಹಾರಿಸಿದ್ದರಿಂದ ಅದು ಬೇಟೆಗಾರರ ತಂಡದಲ್ಲಿದ್ದ ಮನುವಿನ ದೇಹ ಹೊಕ್ಕಿ, ಆತ ಕುಸಿದು ಬೀಳುತ್ತಿದ್ದಂತೆ ತಂಡದಲ್ಲಿದ್ದ ಇನ್ನಿತರ ಬೇಟೆಗಾರರು ಪರಾರಿಯಾಗಿದ್ದಾರೆ.


ಗುಂಡೇಟಿಗೆ ಬಲಿಯಾದ ಮನು

ಈ ಬೇಟೆಗಾರರ ತಂಡ ಕಳೆದ ಹಲವು ತಿಂಗಳುಗಳಿಂದ ಜಿಂಕೆ, ಕಡವೆ, ಮೊಲ ಬೇಟೆಯಾಡಿ ಮಾಂಸ ಮಾರಾಟ ಜಾಲ ನಡೆಸುತ್ತಿತ್ತು ಎಂದು ತಿಳಿದು ಬಂದಿದ್ದು, ತಂಡದ ಕೆಲವು ಬೇಟೆಗಾರರ ವಿರುದ್ಧ ಈ ಹಿಂದೆ ಪ್ರಕರಣಗಳು ದಾಖಲಾಗಿತ್ತು ಎನ್ನಲಾಗಿದೆ. ಆದರೆ ಗುಂಡೇಟಿಗೆ ಬಲಿಯಾದ ಮನು ಆ ತಂಡದ ಹೊಸ ಸದಸ್ಯನಾಗಿದ್ದು, ಆತನ ವಿರುದ್ಧ ಈ ಹಿಂದೆ ಯಾವುದೇ ಅರಣ್ಯ ಅಪರಾಧ ಪ್ರಕರಣ ದಾಖಲಾಗಿರಲಿಲ್ಲ. ಕೆಲವರ ಮಾತು ಕೇಳಿ ಕೊಂಡು ಪ್ರಾಣಿ ಬೇಟೆಯಾಡಲು ಬಂದು ಗುಂಡೇಟಿಗೆ ಬಲಿಯಾಗಿದ್ದಾನೆ.

ಮನು ಮೃತದೇಹ ದೊರೆತ ಸ್ಥಳದಲ್ಲಿ ಎರಡು ಪ್ಲಾಸ್ಟಿಕ್ ಚೀಲಗಳಲ್ಲಿ ಕಡವೆ ಮಾಂಸ ದೊರೆತಿದೆ. ಅಲ್ಲದೇ ಎರಡು ಬಂದೂಕು ಸಿಕ್ಕಿದೆ. ಅದರಲ್ಲಿ ಒಂದು ಬಂದೂಕು ಮನು ಬಳಸಿದ್ದ ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಗುಂಡು ಹಾರಿಸಿದ ಬಳಿಕ ತಂಡದ ಇನ್ನಿತರ ಬೇಟೆಗಾರರು ಪರಾರಿಯಾಗಿರುವ ಕುರುಹುಗಳು ಲಭ್ಯವಾಗಿದೆ.

**ಸ್ಥಳ ಪರಿಶೀಲನೆ:** ಗುಂಡೇಟಿಗೆ ಬೇಟೆಗಾರ ಬಲಿಯಾದ ಸ್ಥಳಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಚಾಮರಾಜನಗರದ ಎಸ್ಪಿ ಪದ್ಮಿನಿ ಸಾಹು, ಎಸಿಎಫ್ ರವೀಂದ್ರ, ಗುಂಡ್ಲುಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಎಸ್‌ಐ ಸಾಹೇಬಗೌಡ ಹಾಗೂ ಮೈಸೂರಿನಿಂದ ಎಫ್‌ಎಸ್‌ಎಲ್ ತಂಡದ ಸದಸ್ಯರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ಅರಣ್ಯ ಸಿಬ್ಬಂದಿ ಹಾರಿಸಿದ ಗುಂಡಿನ ಕಾರ್ಟ್ರೇಜ್, ಕಡವೆ ದೇಹದಲ್ಲಿ ಗುಂಡಿನ ಗಾಯ ಹಾಗೂ ಇನ್ನಿತರ ಕುರುಹುಗಳು ಪತ್ತೆಯಾಗಿವೆ. ಎಫ್‌ಎಸ್‌ಎಲ್ ತಂಡ ಎರಡು ಬಂದೂಕು ಹಾಗೂ ಕಾರ್ಟ್ರೇಜ್ ಅನ್ನು ವಶಕ್ಕೆ ಪಡೆದಿದೆ.

> “ ಬೇಟೆಗಾರರು ಅರಣ್ಯ ಪ್ರದೇಶಕ್ಕೆ ನುಗ್ಗಿರುವ ಖಚಿತ ಮಾಹಿತಿ ಮೇರೆಗೆ ಅರಣ್ಯ ಸಿಬ್ಬಂದಿ ತಂಡ ಗಸ್ತು ತಿರುಗುತ್ತಿತ್ತು. ಈ ವೇಳೆ ಮುಂಜಾನೆ 8ರಿಂದ 10 ಮಂದಿ ಬೇಟೆಗಾರರಿದ್ದ ತಂಡ ಕಡವೆಯೊಂದನ್ನು ಬೇಟೆಯಾಡಿ ಹೋಗುತ್ತಿರುವುದು ನಮ್ಮ ಸಿಬ್ಬಂದಿ ಗಮನಕ್ಕೆ ಬಂದಿದೆ. ಕೂಡಲೇ ಶರಣಾಗುವಂತೆ ಎಚ್ಚರಿಕೆ ನೀಡಿದ್ದರೂ ಬೇಟೆಗಾರರು ದಾಳಿ ನಡೆಸಲು ಮುಂದಾದಾಗ ನಮ್ಮ ಸಿಬ್ಬಂದಿ ಪ್ರತಿದಾಳಿ ನಡೆಸಿ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದ್ದಾರೆ. ಇದರಿಂದ ಓರ್ವ ಬೇಟೆಗಾರ ಬಲಿಯಾಗಿದ್ದಾನೆ. ಪರಾರಿಯಾಗಿರುವ ಬೇಟೆಗಾರರ ಸುಳಿವು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ.
>
> –ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

**ಸ್ಥಳದಲ್ಲೇ ವಿಚಾರಣೆ:** ಎಸ್ಪಿ ಪದ್ಮಿನಿ ಸಾಹು ಅವರು ಘಟನೆ ನಡೆದ ಅರಣ್ಯ ಪ್ರದೇಶದಲ್ಲಿಯೇ ಗುಂಡು ಹಾರಿಸಿದ ಪ್ರಭಾರ ಡಿಆರ್‌ಎಫ್‌ಓ ನವೀನ್(ಗಾರ್ಡ್) ಅವರನ್ನು ವಿಚಾರಣೆಗೊಳಪಡಿಸಿದರು. ಅಲ್ಲದೇ ಘಟನೆ ಬಗ್ಗೆ ವಿವರಣೆ ಪಡೆದರು. ಈ ವೇಳೆ ನವೀನ್ ಬೇಟೆಗಾರರು ನಮ್ಮ ಮೇಲೆ ದಾಳಿ ನಡೆಸಲು ಬಂದ ದೃಶ್ಯವನ್ನು ವಿವರಿಸಿದರು. ಆನಂತರ ಆತ್ಮರಕ್ಷಣೆಗಾಗಿ ಅನಿವಾರ್ಯವಾಗಿ ಗುಂಡು ಹಾರಿಸಿದ್ದಾಗಿ ತಿಳಿಸಿದರು. ಅಲ್ಲದೇ ಕತ್ತಲೆಯಲ್ಲಿ ಗುಂಡು ಹಾರಿಸಿದ್ದರಿಂದ ಅದು ಬೇಟೆಗಾರನಿಗೆ ತಾಗಿದೆ ಎಂದು ವಿವರಣೆ ನೀಡಿದರು.

**ಸ್ಥಳೀಯರ ಆಕ್ರೋಶ:** ಅರಣ್ಯ ಸಿಬ್ಬಂದಿಗಳ ಗುಂಡೇಟಿಗೆ ಬಲಿಯಾದ ಮನು ಕಳೆದ ವರ್ಷವಷ್ಟೇ ವಿವಾಹವಾಗಿದ್ದ. ತಂಡದ ಇತರ ಬೇಟೆಗಾರರ ಆಮಿಷಕ್ಕೆ ಒಳಗಾಗಿ ಅರಣ್ಯ ಪ್ರದೇಶಕ್ಕೆ ತೆರಳಿ ಗುಂಡೇಟಿಗೆ ಬಲಿಯಾಗಿದ್ದು ಆತನ ಪೋಷಕರನ್ನು ಕಂಗೆಡುವಂತೆ ಮಾಡಿದೆ. ಅಲ್ಲದೇ ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ತಮ್ಮ ಮಗನನ್ನು ಪುಸಲಾಯಿಸಿ ಬೇಟೆಗೆಂದು ಕರೆದುಕೊಂಡು ಹೋದವರಿಗೆ ತಕ್ಕ ಶಿಕ್ಷೆ ನೀಡಬೇಕು. ಅಲ್ಲದೇ ತಮ್ಮ ಮಗ ಅಮಾಯಕನಾಗಿದ್ದು, ಯಾವುದೇ ರೀತಿಯ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರಲಿಲ್ಲ. ಆದರೂ ಬೇಟೆಗೆಂದು ಕರೆದೊಯ್ದು ತಮ್ಮ ಮಗನ ಸಾವಿಗೆ ಕಾರಣರಾಗಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಅರಣ್ಯ ಸಿಬ್ಬಂದಿಗಳ ವಿರುದ್ಧವೂ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆಗೆ ಮುಂದಾಗಿದ್ದರು. ಕಾಡಂಚಿನ ಗ್ರಾಮದ ● 8ನೇ ಪುಟಕ್ಕೆ

## ನಕ್ಕರೆ ಅದೇ ಸ್ವರ್ಗ

ಗುಂಡ : ಹೆಣ್ಮಕ್ಕಳ ಪ್ರಾಬ್ಲಂ ಏನು ಅಂದ್ರೆ
ಮದುವೆ ಆದ ಮೇಲೆ ಅತ್ತೆ ಇಷ್ಟ ಆಗಲ್ಲ...
ತಿಮ್ಮ : ಆಮೇಲೆ?
ಡಾಕ್ಟರ್ : ಮುಂದೆ ತಾವು ಅತ್ತೆ ಆದಾಗ ಸೊಸೆ ಇಷ್ಟ ಆಗಲ್ಲ....!!

ಮೈಸೂರು ಮಿತ್ರ
ಸೋಮವಾರ, 6 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

'ಸಂಬಂಧಗಳಲ್ಲಿ ಸುಂದರ ಹಾಗೂ ಶ್ರೇಷ್ಠ ಸಂಬಂಧವೆಂದರೆ, ಅದು ಕಣ್ಣುಗಳ ಸಂಬಂಧ. ಏಕೆಂದರೆ, ತೆರೆದರೆ ಜೊತೆಯಾಗಿ ತೆರೆದುಕೊಳ್ಳುತ್ತವೆ, ಮುಚ್ಚಿದರೆ ಜೊತೆಯಾಗಿ ಮುಚ್ಚಿಕೊಳ್ಳುತ್ತವೆ. ಅತ್ತರೆ ಎರಡು ಜೊತೆಯಾಗಿ ಅಳುತ್ತವೆ. ಅದು ಕೂಡಾ ಜೀವನಪೂರ್ತಿ ಒಂದನ್ನೊಂದು ನೋಡದೆ!'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಟ್ಟವನು ಕೋಡಂಗಿ, ಈಸ್ಕೊಂಡವನು ಈರಭದ್ರ

## ನಿಮ್ಮ ಪತ್ರಗಳು

### ನೀರು ಬಿಡಿ, ಕನ್ನಂಬಾಡಿ ಖಾಲಿ ಮಾಡಿ ಬಿಡಿ

ಮಾನ್ಯರೆ,

ನಮ್ಮ ರಾಜ್ಯದ ಜಲಾಶಯಗಳಲ್ಲಿ ನೀರೇ ಇಲ್ಲ ಎಂದರೂ ತಮಿಳುನಾಡಿಗೆ ನೀರು ಬಿಡಲು ಕಾವೇರಿ ಪ್ರಾಧಿಕಾರ ಮತ್ತು ಕಾವೇರಿ ನೀರು ನಿರ್ವಹಣಾ ಮಂಡಳಿ ಪದೇ ಪದೆ ಆದೇಶ ನೀಡುತ್ತಿದೆ. ನಮ್ಮ ರಾಜ್ಯದ ಮನವಿಗೆ ಕ್ಯಾರೇ ಎನ್ನದೇ, ವಾಸ್ತವ ಸಂಗತಿ ಅರಿಯದೇ, ದೂರದ ದೆಹಲಿಯ ಕೋಣೆಯಲ್ಲಿ ಕುಳಿತು ಆದೇಶ ಮಾಡುತ್ತಿರುವುದು ಸರಿಯೇ? ಈಗಾಗಲೇ ಕಾವೇರಿದ ಕಾವೇರಿ ವಿವಾದ ತಣ್ಣಗಾಗಿಯೇ ಹೋಗಿದೆ. ಪ್ರಾಧಿಕಾರದ ಆದೇಶದಂತೆ ಪ್ರತಿನಿತ್ಯ ಮೂರು, ನಾಲ್ಕು ಸಾವಿರ ಕ್ಯೂಸೆಕ್ ನೀರು ಕಳೆದ ಒಂದೆರಡು ತಿಂಗಳುಗಳಿಂದ ಹೋಗುತ್ತಲೇ ಇದೆ. ಇದೂ ಸಾಲದೆಂಬಂತೆ, ಪ್ರತಿ ಹದಿನೈದು ದಿನಗಳಿಗೊಮ್ಮೆ ಪ್ರಾಧಿಕಾರ ಮತ್ತೆ ನೀರು ಬಿಡಲು ಆದೇಶಿಸುತ್ತಲೇ ಇದೆ. ಇವೆಲ್ಲ ಬೇಡ ಬಿಡಿ, ಒಮ್ಮೆಲೆ ಕನ್ನಂಬಾಡಿ ಖಾಲಿ ಆಗುವವರೆಗೂ ನೀರು ಬಿಡಿ, ಎಂದುಬಿಡಿ. ಅಲ್ಲಿಗೆ "ಹೊಳೆ ನೀರಿಗೆ ದೊಣ್ಣೆನಾಯಕನ ಅಪ್ಪಣೆ" ಎನ್ನುವ ಗಾದೆಯಾದರೂ ಸರಿಯಾದೀತು ಅಲ್ಲವೇ.

– ವಿಜಯ್‌ಹೆಮ್ಮಿಗೆ, ಮೈಸೂರು

### ನಾಳೆ ನಾವು ಬದುಕಿರುವ ನಂಬಿಕೆ ಇದೆಯೇ?

ಮಾನ್ಯರೆ,

ಜನತಾ ದರ್ಶನ ನಡೆಯುತ್ತಿತ್ತು. ತಮ್ಮ ತಮ್ಮ ಸಮಸ್ಯೆಗಳನ್ನು ಪ್ರಜೆಗಳು ಧರ್ಮರಾಯನ ಮುಂದೆ ಹೇಳುತ್ತಿದ್ದರು.

ಧರ್ಮಜ ಸಹಾಯ ನೀಡುತ್ತಿದ್ದ. ಅಷ್ಟರಲ್ಲಿ ಸೂರ್ಯಾಸ್ತದ ಸಮಯವಾಯಿತು. ಓರ್ವ ಪ್ರಜೆಯ ಸಮಸ್ಯೆಯನ್ನು ಆಲಿಸಿದ ಧರ್ಮಜ "ಈಗ ಸೂರ್ಯಾಸ್ತದ ಸಮಯ ಆದುದರಿಂದ ನೀನು ನಾಳೆ ಬಾ.ನಾನು ನಿನಗೆ ಸಹಾಯ ಮಾಡುತ್ತೇನೆ" ಎಂದು ಭರವಸೆ ನೀಡುತ್ತಿದ್ದಂತೆಯೇ ಅಲ್ಲಿಯೇ ಇದ್ದ ಭೀಮಸೇನ ಕಿಸಕ್ಕನೆ ನಕ್ಕ! ಭೀಮ ನಕ್ಕಿದ್ದೇಕೆ ಎಂದು ಧರ್ಮಜ ಪ್ರಶ್ನಿಸಿದಾಗ ಭೀಮಸೇನ ನೀಡಿದ ಉತ್ತರ ಮಾರ್ಮಿಕವಾಗಿತ್ತು.

"ಅಣ್ಣಾ, ಪರಿಹಾರ ಕೇಳಿಕೊಂಡು ಬಂದ ಪ್ರಜೆಗೆ ನೀನು ನಾಳೆ ಬಾ ಸಹಾಯ ಮಾಡುತ್ತೇನೆ ಎಂದು ಹೇಳಿದೆಯಲ್ಲಾ? ಅದನ್ನು ಕೇಳಿ ನಗು ಬಂತು!"

ಅದರಲ್ಲಿ ನಗೆ ಬರುವಂತಹುದೇನಿದೆ? ಎಂದ ಧರ್ಮಜ.

ಆಗ ಭೀಮಸೇನ ಹೇಳಿದ "ನಾಳೆ ನೀನು ಬದುಕಿರುತ್ತೀಯೆಂಬ ನಂಬಿಕೆ ನಿನಗಿದೆಯೇ?"

"....ಎರಡೂವರೆ ವರ್ಷದ ನಂತರ ನಾನೇ ಸಿಎಂ...

ಒಂದೂವರೆ ವರ್ಷದ ನಂತರ ನಾನೇ ಸಿಎಂ...

ಮುಂದಿನ ಸಿಎಂ ನಾನೇ...

ಇನ್ನೈದೂ ವರ್ಷ ನಾನೇ ಸಿಎಂ..." ಎಂಬ ನಮ್ಮವರ ಮಾತುಗಳನ್ನು ಕೇಳುವಾಗ ಭೀಮಸೇನ ಧರ್ಮರಾಜನಿಗೆ ಹೇಳಿದ ಮಾತು ನೆನಪಾಯಿತು.

– ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

### ತುರ್ತಾಗಿ ಇಲ್ಲಿ ಸಂಚಾರಿ ಸುರಕ್ಷತಾ ಕ್ರಮ ಜರುಗಿಸಿ

ಮಾನ್ಯರೆ,

ಹಿನಕಲ್‌ನ ಫ್ಲೈಓವರ್‌ನ ಹತ್ತಿರ ತುಂಬಾ ಸಂಚಾರ ದಟ್ಟಣೆ ಹೆಚ್ಚಾಗಿದೆ. ಮಂಗಳೂರು ಮಡಿಕೇರಿ ಕಡೆಯಿಂದ ಬರುವ ಎಲ್ಲಾ ಬಗೆಯ ವಾಹನಗಳ ತಂಗುದಾಣ ಇದಾಗಿದೆ. ಮತ್ತೆ ಮೈಸೂರಿನಿಂದ ಮಡಿಕೇರಿ ಮಂಗಳೂರು ಕಡೆಗೆ ಹೋಗುವ ಎಲ್ಲಾ ವಾಹನಗಳು ಇಲ್ಲೇ ನಿಂತು ಹೊರಡುತ್ತವೆ. ಇನ್ನೊಂದು ರೀತಿಯಲ್ಲಿ ಸಮಸ್ಯೆ ಏನೆಂದರೆ ಪಕ್ಕದಲ್ಲೇ ಆಟೋ ನಿಲ್ದಾಣ ಇದೆ. ಅಲ್ಲದೇ ಮತ್ತಿತರ ವಾಹನಗಳ ನಿಲುಗಡೆಯೂ ಇದಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಫ್ಲೈ ಓವರ್ ಹತ್ತಿರದಲ್ಲಿನ ರಸ್ತೆಯ ಇಕ್ಕೆಲಗಳಲ್ಲಿ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಚಲಿಸುವ ವಾಹನಗಳ ದೆಸೆಯಿಂದ ಇಲ್ಲಿ ನಿತ್ಯವೂ ಸಂಚಾರ ದಟ್ಟಣೆಯ ಕಿರಿಕಿರಿ ತಪ್ಪಿದ್ದಲ್ಲ. ಮತ್ತೆ ಬಿಳಿಕೆರೆ, ಹುಣಸೂರು, ಗೋಣಿಕೊಪ್ಪಲು, ವಿರಾಜಪೇಟೆ, ಮಡಿಕೇರಿ, ಮಂಗಳೂರು, ಕೆ.ಆರ್.ನಗರ ಹಾಸನ, ಪಿರಿಯಾಪಟ್ಟಣ, ಕುಶಾಲನಗರ ಇತರೇ ಸ್ಥಳಗಳಿಗೆ ತೆರಳುವ ಪ್ರಯಾಣಿಕರು ಇಲ್ಲೇ ನಿಲ್ಲುವುದು ಸಾಮಾನ್ಯ ಎನಿಸಿದೆ. ಆದ್ದರಿಂದ ಈ ಸ್ಥಳದಲ್ಲಿ ಸಂಚಾರ ನಿಯಮ ಸೂಚನೆಗಳನ್ನು ಅಳವಡಿಸಬೇಕು. ಇದು ಇಲ್ಲಿ ಅನಿವಾರ್ಯ ಎನಿಸಿದೆ. ರಸ್ತೆ ದಾಟುವ ಜನರು ಮತ್ತು ವಾಹನಗಳಿಗೆ ಆಕಾರದ ನಿಯಮವನ್ನು ಇಲ್ಲಿ ರದ್ದು ಮಾಡಬೇಕಾಗಿದೆ.

ಇಷ್ಟೆಲ್ಲಾ ಸಮಸ್ಯೆಗಳು ಕಣ್ಣಿಗೆ ಕಾಣುತ್ತಿದ್ದರೂ ಇಲ್ಲಿನ ಜನಪ್ರತಿನಿಧಿಗಳು, ಸಂಬಂಧಿತ ಅಧಿಕಾರಿಗಳು ಸುಮ್ಮನೆ ಇರುವುದು ಬೇಸರದ ಸಂಗತಿ. ಇನ್ನು ಮುಂದಾದರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ನಾಗರಿಕರ ಮನವಿ.

–ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಮೈಸೂರು.

### ತನಿಖಾ ಸಂಸ್ಥೆಗಳು ಮರ್ಜಿ, ಮುಲಾಜಿಗೆ ಒಳಗಾಗದಿರಲಿ

ಮಾನ್ಯರೆ,

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿರುವ ಜಾರಿ ನಿರ್ದೇಶನಾಲಯ (ಇಡಿ), ಸಿ,ಬಿ.ಐ. ಸಿಒಡಿ, ಲೋಕಾಯುಕ್ತದಂತಹ ಸಂಸ್ಥೆಯ ಅಧಿಕಾರಿಗಳು ನ್ಯಾಯ ಸಮ್ಮತವಾಗಿ ತನಿಖೆ ನಡೆಸಬೇಕು. ಅಧಿಕಾರಸ್ಥರ ಮಾತು ಕೇಳಿ ಅನವಶ್ಯಕ ದಾಳಿ ಮತ್ತು ವಿಚಾರಣೆಗೆ ಒಳಪಡಿಸಬಾರದು. ರಾಜಕೀಯ ನಾಯಕರು ಮತ್ತೊಂದು ರಾಜಕೀಯ ಪಕ್ಷದ ನಾಯಕನನ್ನು, ಗುರಿಯಾಗಿಸಿ ವಿನಾಕಾರಣ ತಪ್ಪು ಸಂದೇಶ ಸಾರುವ ಸುದ್ದಿಗಾಗಿ ಮಾಡುವ ದಾಳಿಗಳು ಕಾನೂನನ್ನು ಅಸ್ಥಿರಗೊಳಿಸುತ್ತವೆ ಮತ್ತು ಅಧಿಕಾರಿಗಳ ಬೆಲೆಯನ್ನು ಕಳೆಯುತ್ತವೆ. ಆದ್ದರಿಂದ ಪ್ರಧಾನಿಯಾಗಲಿ, ಮುಖ್ಯಮಂತ್ರಿಯಾಗಲಿ ಯಾರ ಆದೇಶವಿದ್ದರೂ ಅವರಿಗಾಗಿ ಅವರ ಆಣತಿಯಂತೆ ನಡೆಯದೆ ಯಾರ ಮರ್ಜಿ, ಮುಲಾಜಿಗೂ ಒಳಗಾಗದೆ ಅಧಿಕಾರ ಚಲಾಯಿಸಬೇಕು. ಇದರಿಂದ ಕಾನೂನು ಗಟ್ಟಿಗೊಳ್ಳುತ್ತದೆ ಮತ್ತು ಸಂಸ್ಥೆಯ ಮೇಲೂ ನಂಬಿಕೆ ಬರುತ್ತದೆ. ಇತ್ತೀಚೆಗೆ ಚುನಾವಣೆ ಸಮಯದಲ್ಲೆ ಇಂತಹ ಪ್ರಕರಣ ಹೆಚ್ಚಾಗುತ್ತಿರುವುದು ತನಿಖಾ ಸಂಸ್ಥೆಯನ್ನು ಅನುಮಾನದಿಂದ ನೋಡುವಂತೆ ಮಾಡಿದೆ.

– ದಡದಹಳ್ಳಿ ರಮೇಶ್, ಚಂದಕವಾಡಿ ಅಂಚೆ, ಚಾಮರಾಜನಗರ ಜಿಲ್ಲೆ.

# ಬೀದಿಬದಿ ವ್ಯಾಪಾರಿಗಳಿಗೆ 'ಪಿಎಂ ಸ್ವನಿಧಿ' ಆಸರೆ

## ದಿನದ ಬಡ್ಡಿಸಾಲದಿಂದ ಮುಕ್ತವಾಗಿರುವ ನಂ.ಗೂಡು ಫಲಾನುಭವಿಗಳ ಹರ್ಷ

● ನಂಜನಗೂಡು ಹೆಚ್.ಡಿ.ರಂಗಸ್ವಾಮಿ

ಕೇಂದ್ರ ಸರ್ಕಾರದ 'ಪ್ರಧಾನಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ(ಪಿಎಂ ಸ್ವನಿಧಿ)' ವಿಶೇಷ ಕಿರುಸಾಲ ಯೋಜನೆ ಲಕ್ಷಾಂತರ ಬೀದಿಬದಿ ವ್ಯಾಪಾರಿಗಳ ಆರ್ಥಿಕ ಅಭಿವೃದ್ಧಿಗೆ ಆಸರೆಯಾಗಿದೆ. ಕೋವಿಡ್–19 ಬಿಕ್ಕಟ್ಟು ಹಾಗೂ ನಿರ್ಬಂಧಗಳಿಂದ ತತ್ತರಿಸಿದ್ದ ಬೀದಿಬದಿ ವ್ಯಾಪಾರಿಗಳಿಗೆ ಆರ್ಥಿಕ ಸ್ವಾವಲಂಬನೆ ಕಲ್ಪಿಸುವ ಉದ್ದೇಶದಿಂದ ಜಾರಿಗೆ ತರಲಾದ ಈ ಯೋಜನೆ, ಸಣ್ಣ ವ್ಯಾಪಾರಿಗಳನ್ನು ಕೈಸಾಲದ ಶೂಲದಿಂದ ಪಾರು ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಬೆಳಗ್ಗೆ ಪಡೆದ ಸಾಲಕ್ಕೆ ಸಂಜೆ ವೇಳೆಗೆ ಭಾರಿ ಬಡ್ಡಿ ತೆರುತ್ತಿದ್ದ ಪರಿಸ್ಥಿತಿ ಬದಲಾಗಿದೆ. ಪಿಎಂ ಸ್ವನಿಧಿ ಯೋಜನೆಯಡಿ 10ರಿಂದ 50 ಸಾವಿರದವರೆಗೆ ಸಬ್ಸಿಡಿ ಸಹಿತ ಸಾಲ ಪಡೆದು, ನಿರಾತಂಕವಾಗಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುವಂತಹ ವಾತಾವರಣ ನಿರ್ಮಾಣವಾಗಿದೆ.

ಕೋವಿಡ್‌ನಿಂದ ಆದಾಯದ ಮೂಲವನ್ನೇ ಕಳೆದುಕೊಂಡು ಕಂಗಾಲಾಗಿದ್ದ ಬೀದಿಬದಿ ವ್ಯಾಪಾರಿಗಳಿಗಾಗಿ 2020ರ ಜೂನ್ 1ರಿಂದ 2022ರ ಮಾರ್ಚ್‌ವರೆಗೆ ಪಿಎಂ ಸ್ವನಿಧಿ ಕಿರುಸಾಲ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಇದರಿಂದ ಲಕ್ಷಾಂತರ ವ್ಯಾಪಾರಿಗಳ ಆರ್ಥಿಕ ಸ್ಥಿತಿ ಸುಧಾರಿಸಿದ್ದರಿಂದ 2024ರ ಡಿಸೆಂಬರ್‌ವರೆಗೆ ಯೋಜನೆ ವಿಸ್ತರಿಸಲಾಗಿದೆ. ಅಗತ್ಯ ದಾಖಲೆಗಳನ್ನು ಹೊಂದಿರುವ ಬೀದಿಬದಿ ವ್ಯಾಪಾರಿಗಳು ಯಾವುದೇ ಆಧಾರ ಅಥವಾ ಖಾತರಿ ನೀಡದೆ ಸಾಲ ಸೌಲಭ್ಯ ಪಡೆಯಬಹುದು. ಮೊದಲ ಹಂತದಲ್ಲಿ ಪಡೆಯುವ 10 ಸಾವಿರ ರೂ. ಸಾಲವನ್ನು ವರ್ಷದೊಳಗೆ ಮರುಪಾವತಿ ಮಾಡಿದರೆ ಕೇಂದ್ರ ಸರ್ಕಾರ ಶೇ.7ರಷ್ಟು ಸಬ್ಸಿಡಿ ಸಿಗುವುದರ ಜೊತೆಗೆ ಎರಡನೇ ಹಂತದಲ್ಲಿ 20 ಸಾವಿರ ಹಾಗೂ ಮೂರನೇ ಹಂತದ 50 ಸಾವಿರ ಸಾಲಕ್ಕೆ ಅರ್ಜಿ ಹಾಕಬಹುದು. ಬೀದಿಬದಿ ವ್ಯಾಪಾರಿಗಳು ಮತ್ತು ಅವರ ಕುಟುಂಬದವರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸದೃಢಗೊಳಿಸುವಲ್ಲಿ ಸಹಕಾರಿಯಾಗಿರುವ ಈ ಯೋಜನೆಯ ಸದುಪಯೋಗಪಡಿಸಿಕೊಂಡಿರುವ ನಂಜನಗೂಡಿನ ಹಲವು ಫಲಾನುಭವಿಗಳು ಈ ಬಗ್ಗೆ ಸಂತಸ ಹಂಚಿಕೊಂಡಿದ್ದಾರೆ.

### ಲಾಭವನ್ನೆಲ್ಲಾ ಬಡ್ಡಿ ಕಟ್ಟುತ್ತಿದ್ದೆ



ನಾನು 30 ವರ್ಷಗಳಿಂದ ವ್ಯಾಪಾರನ್ನೇ ನಂಬಿ ಜೀವನ ಸಾಗಿಸುತ್ತೇನೆ. ಕೆಲವೊಮ್ಮೆ ಬಂಡವಾಳಕ್ಕೆ ಹಣವಿಲ್ಲದೆ ದಿನದ ಬಡ್ಡಿಗೆ ಸಾಲ ತಂದು ವ್ಯಾಪಾರ ಮಾಡಿ ಬಂದ ಲಾಭವನ್ನು ಬಡ್ಡಿಗೇ ಕಟ್ಟಿದ್ದೆ. ವ್ಯಾಪಾರದಲ್ಲಿ ನಷ್ಟವಾಗಿ ಬಡ್ಡಿ ಕಟ್ಟಲಾಗದೆ ವ್ಯಾಪಾರ ಮಾಡಲಾಗದ ದಿನಗಳನ್ನೂ ಕಂಡಿದ್ದೇನೆ. ಲಾಕ್‌ಡೌನ್ ನಂತರ ಬಡ್ಡಿ ಸಾಲವೂ ದೊರಕದಿರುವ ದುಸ್ಥಿತಿಯಲ್ಲಿ ಪಿಎಂ ಸ್ವನಿಧಿ ಯೋಜನೆ ಆಸರೆಯಾಯಿತು. ಮೊದಲ ಬಾರಿಗೆ 10 ಸಾವಿರ ಸಾಲ ಪಡೆದು ವ್ಯಾಪಾರ ಆರಂಭಿಸುವ ಮೂಲಕ ಆರ್ಥಿಕವಾಗಿ ಸುಧಾರಿಸಿಕೊಂಡೆ. ನಂತರ 20 ಸಾವಿರ, ಬಳಿಕ 50 ಸಾವಿರ ಸಾಲವನ್ನು ಪಡೆದಿದ್ದೇನೆ ಖಾಸಗಿ ಲೇವಾದೇವಿದಾರರ ಬಳಿ ಅಂಗಲಾಚುವುದು ತಪ್ಪಿದೆ. ಸಾಲ ಪಡೆದು ಸುಲಭ ಕಂತುಗಳಲ್ಲಿ ಪಾವತಿಸಲು ಅವಕಾಶವಿರುವುದರಿಂದ ಸಾಕಷ್ಟು ಅನುಕೂಲವಾಗಿದೆ. ಈಗ ಬಂದಷ್ಟು ಲಾಭದಲ್ಲಿ ತೊಂದರೆಯಿಲ್ಲದೆ ಜೀವನ ಸಾಗಿಸುತ್ತಿದ್ದೇವೆ. ಬೀದಿಬದಿ ವ್ಯಾಪಾರಿಗಳಿಗೆ ಈ ಯೋಜನೆ ಸಂಜೀವಿನಿಯಂತೆ ನೆರವಾಗಿದೆ ಎಂದು ತರಕಾರಿ ವ್ಯಾಪಾರಿ ರಾಮಚಂದ್ರ ತಿಳಿಸಿದರು.

### ಆತ್ಮವಿಶ್ವಾಸ ಹೆಚ್ಚಿಸಿದೆ



ಚಾಮಲಾಪುರ ಬೀದಿಯ ಬ್ಯಾಗ್ ಅಂಗಡಿ ವ್ಯಾಪಾರಿ ಕುಮಾರ, ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಸಾಲ ಪಡೆದು ವ್ಯಾಪಾರದಲ್ಲಿ ಸುಧಾರಿಸಿಕೊಂಡೆ. ಕುಟುಂಬ ನಿರ್ವಹಣೆ ಜೊತೆಗೆ ನನ್ನಿಬ್ಬರು ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಯಿತು. ಈ ಯೋಜನೆಯಡಿ ಹಂತ ಹಂತವಾಗಿ ಹೆಚ್ಚು ಸಾಲ ಪಡೆಯುವ ಅವಕಾಶವಿರುವುದರಿಂದ ನಮ್ಮಂತಹ ಬೀದಿ ಬದಿ ವ್ಯಾಪಾರಿಗಳ ಆತ್ಮವಿಶ್ವಾಸ ವೃದ್ಧಿಗೊಂಡಿದೆ. ಸುಲಭವಾಗಿ ಸಾಲ ಮರುಪಾವತಿಗೆ ಅವಕಾಶವಿರುವ ಕಾರಣ ಯೋಜನೆ ವರದಾನವಾಗಿದೆ. ಯುವಕರು ಸ್ವಉದ್ಯೋಗ ಆರಂಭಿಸಲು ನೆರವಾಗಲಿದೆ ಎಂದು ಹೇಳಿದರು.

### ಆರ್ಥಿಕ ಸ್ಥಿತಿ ಸುಧಾರಿಸಿದೆ



ಹಣ್ಣು ವ್ಯಾಪಾರಿ ರಾಮು ಮಾತನಾಡಿ, ಕೊರೊನಾ ನಂತರ ಹಣ್ಣಿನ ವ್ಯಾಪಾರದಲ್ಲಿ ನಷ್ಟ ಅನುಭವಿಸಿ ಬಂಡವಾಳಕ್ಕೂ ಹಣ ಹೊಂದಿಸಲಾಗದ ಸ್ಥಿತಿಯಲ್ಲಿದ್ದೆ. ಆ ಸಂದರ್ಭದಲ್ಲಿ ಪಿಎಂ ಸ್ವನಿಧಿ ಯೋಜನೆಯಿಂದ ಸಾಲ ಪಡೆದು ವ್ಯಾಪಾರ ಆರಂಭಿಸಿದೆ. ನಿತ್ಯ ಬಡ್ಡಿ ಕಟ್ಟುವ ಆತಂಕವಿಲ್ಲದೆ ವ್ಯಾಪಾರ ಮಾಡಿ, ಲಾಭಗಳಿಸಿದೆ. ಕಾಲಮಿತಿಯಲ್ಲಿ ಸಾಲ ಮರುಪಾವತಿಸಿ 20 ಹಾಗೂ 50 ಸಾವಿರ ಸಾಲ ಪಡೆದು ವ್ಯಾಪಾರ ವಿಸ್ತರಿಸಿದೆ. ಇದರಿಂದ ಆರ್ಥಿಕ ಸ್ಥಿತಿ ಸುಧಾರಿಸಿದ್ದರ ಪರಿಣಾಮ ಕಳೆದ ವರ್ಷ ನನ್ನ ಮಗಳ ಮದುವೆ ಮಾಡಲು ಸಾಧ್ಯವಾಯಿತು ಎಂದು ಖುಷಿ ವ್ಯಕ್ತಪಡಿಸಿದರು.

### ಅರಿವಿನ ಕೊರತೆ ನೀಗಿಸಲಿ



ಅದೆಷ್ಟೋ ವ್ಯಾಪಾರಿಗಳಿಗೆ ಪಿಎಂ ಸ್ವನಿಧಿ ಯೋಜನೆ ಬಗ್ಗೆ ತಿಳಿದಿರುವುದಿಲ್ಲ. ಯೋಜನೆ ಬಗ್ಗೆ ತಿಳಿದವರಿಗೂ ಅದರ ಪ್ರಯೋಜನ ಪಡೆಯುವುದು ಹೇಗೆಂದು ತಿಳಿಯದೆ ಸುಮ್ಮನಾಗಿಬಿಡುತ್ತಾರೆ. ಹಲವರಿಗೆ ಅರ್ಜಿ ಹಾಕಿದರೂ ಸಾಲ ದೊರೆತಿಲ್ಲ. ಇದಕ್ಕೆ ನಿಖರ ಕಾರಣವೂ ಅವರಿಗೆ ತಿಳಿದಿಲ್ಲ. ಪರಿಣಾಮ ಅನೇಕ ವ್ಯಾಪಾರಿಗಳು ದಿನದ ಬಡ್ಡಿಗೆ ಸಾಲ ಪಡೆದು ಕಂತು ಕಟ್ಟಲು ಹೈರಾಣಾಗುತ್ತಿದ್ದಾರೆ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೂ ಕಾರಣವಾಗುತ್ತದೆ. ಸಭೆ ಅಥವಾ ಅಭಿಯಾನದ ಮೂಲಕ ಯೋಜನೆ ಬಗ್ಗೆ ಅರಿವು ಮೂಡಿಸುವ ಕೆಲಸದಿಂದ ದೂರವುಳಿದಿದ್ದಾರೆ. ನಗರಸಭಾ ಅಧಿಕಾರಿಗಳು ಯಾವುದೋ ಮರ್ಜಿಗೆ ಒಳಗಾಗಿ ಅಥವಾ ತಮ್ಮ ವೈಯಕ್ತಿಕ ಲಾಭಕ್ಕಾಗಿ ಕೆಲವರಿಗೆ ಮಾತ್ರ ಸಾಲ ಮಂಜೂರಾತಿಗೆ ಆಸಕ್ತಿ ವಹಿಸುತ್ತಿದ್ದಾರೆ ಎಂಬ ಆರೋಪವೂ ಇದೆ. ಶ್ರೀಕಂಠೇಶ್ವರ ದೇವಾಲಯದ ಬಳಿ ಹೂವಿನ ವ್ಯಾಪಾರ ಮಾಡುವ ಸಿದ್ದಮ್ಮ ಅರ್ಜಿ ಸಲ್ಲಿಸಿ 6 ತಿಂಗಳಾದರೂ ಸಾಲ ದೊರೆಯದಿರುವುದು ಇದಕ್ಕೊಂದು ಉದಾಹರಣೆ. ಅಧಿಕಾರಿಗಳು ಬಂದು ಪರಿಶೀಲನೆ ಮಾಡಿಕೊಂಡು ಹೋದರೂ ಸಹ ನನಗೆ ಸಾಲ ದೊರೆತಿಲ್ಲ. ಈ ಬಗ್ಗೆ ವಿಚಾರಿಸಿದರೆ ಬ್ಯಾಂಕ್‌ನಲ್ಲಿ ಹೋಗಿ ವಿಚಾರಿಸಿ ಎನ್ನುತ್ತಾರೆ ಎಂದು ಅವರು ಅಳಲು ತೋಡಿಕೊಂಡಿದ್ದಾರೆ.

ಬಡ ವ್ಯಾಪಾರಿಗಳು ಆರ್ಥಿಕ ಸ್ವಾವಲಂಬನೆಯಿಂದ ಉತ್ತಮ ಜೀವನ ಕಟ್ಟಿಕೊಳ್ಳಲು ಈ ಯೋಜನೆ ಪೂರಕವಾಗಿದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಕೆಲವರ ಲಂಚಬಾಕತನದಿಂದಾಗಿ ಅರ್ಹ ಫಲಾನುಭವಿಗಳಿಗೆ ಈ ಯೋಜನೆಯ ಫಲ ದೊರಕುತ್ತಿಲ್ಲ. ಈ ಬಗ್ಗೆ ಸಂಬಂಧಪಟ್ಟವರು ಕ್ರಮವಹಿಸಿ ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸಬೇಕು. ಯೋಜನೆ ಬಗ್ಗೆ ಹೆಚ್ಚು ಪ್ರಚಾರ ಮಾಡಿ ಜನರಲ್ಲಿ ಅರಿವು ಮೂಡಿಸಬೇಕು.

-ಉಮೇಶ್ ಮೋದಿ,
ನಂಜನಗೂಡು ನಿವಾಸಿ



ಕೋವಿಡ್‌ನಿಂದ ಆದಾಯದ ಮೂಲವನ್ನೇ ಕಳೆದುಕೊಂಡು ಕಂಗಾಲಾಗಿದ್ದ ಬೀದಿಬದಿ ವ್ಯಾಪಾರಿಗಳಿಗಾಗಿ 2020ರ ಜೂನ್ 1ರಿಂದ 2022ರ ಮಾರ್ಚ್‌ವರೆಗೆ ಪಿಎಂ ಸ್ವನಿಧಿ ಕಿರುಸಾಲ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಇದರಿಂದ ಲಕ್ಷಾಂತರ ವ್ಯಾಪಾರಿಗಳ ಆರ್ಥಿಕ ಸ್ಥಿತಿ ಸುಧಾರಿಸಿದ್ದರಿಂದ 2024ರ ಡಿಸೆಂಬರ್‌ವರೆಗೆ ಯೋಜನೆ ವಿಸ್ತರಿಸಲಾಗಿದೆ.

# ರಾಷ್ಟ್ರೀಯ ವಯೋವೃದ್ಧರ ದಿನಾಚರಣೆ



ಮೈಸೂರು, ನ.5(ಎಸ್‌ಬಿಡಿ)– ರಾಷ್ಟ್ರೀಯ ವಯೋವೃದ್ಧರ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮೈಸೂರಿನ ಮೇಟಗಳ್ಳಿ ಬಾಪೂಜಿ ಆನಂದ ಆಶ್ರಮದಲ್ಲಿ ಇತ್ತೀಚೆಗೆ ವಯೋವೃದ್ಧರ ಆರೈಕೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ಉಪಶಾಮಕ ಆರೈಕೆಯು ವೃದ್ಧರ ನೋವು ಮತ್ತು ರೋಗಲಕ್ಷಣಗಳ ಪರಿಹಾರದ ಜೊತೆಗೆ ಆಧ್ಯಾತ್ಮಿಕ ಮತ್ತು ಮಾನಸಿಕ ಬೆಂಬಲ ನೀಡುತ್ತದೆ. ಇದರಿಂದ ಮಾರಣಾಂತಿಕ ಅನಾರೋಗ್ಯದಿಂದ ಬಳಲುತ್ತಿರುವವರು ಹಾಗೂ ಅವರ ಕುಟುಂಬಗಳ ಜೀವನದ ಗುಣಮಟ್ಟ ಸುಧಾರಿಸಲು ಸಾಧ್ಯವಿದೆ ಎಂದು ಅಭಿಪ್ರಾಯಿಸಿದರು. ಕ್ಯಾನ್ಸರ್ ರೋಗದಿಂದ ಹಾಗೂ ಅದಕ್ಕಾಗಿ ಚಿಕಿತ್ಸೆ ಪಡೆದ ನಂತರ ರೋಗಿಗಳು ಮಾನಸಿಕ ಯಾತನೆ ಅನುಭವಿಸುವುದು ಸಹಜ. ಇಂತಹ ಸಂದರ್ಭದಲ್ಲಿ ಚಿಕಿತ್ಸೆಯೊಂದಿಗೆ ವಿಶೇಷ ಆರೈಕೆಯ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಉಪಶಾಮಕ ಆರೈಕೆ ಮತ್ತು ಪುನರ್ವಸತಿ ಕಾರ್ಯಕ್ರಮ ವಯೋವೃದ್ಧ ರೋಗಿಗಳಿಗೆ ಪ್ರಯೋಜನಕಾರಿ. ಆರೋಗ್ಯ ಇಲಾಖೆಯು ವೃದ್ಧರು ದೈಹಿಕ ಮತ್ತು ಮಾನಸಿಕ ಶಕ್ತಿ ಜೊತೆಗೆ ಅವರ ಜೀವನ ಗುಣಮಟ್ಟ ಸುಧಾರಿಸುವ ಸಹಾಯ ಮಾಡಲಿದೆ ಎಂದು ಹಿರಿಯ ನಾಗರಿಕರಲ್ಲಿ ವಿಶ್ವಾಸ ತುಂಬಿದರು.

ಕಾರ್ಯಕ್ರಮದಲ್ಲಿ ಬಾಪೂಜಿ ಆನಂದ ಆಶ್ರಮ ಸಂಸ್ಥಾಪಕ ಅಧ್ಯಕ್ಷರು, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಜಿಲ್ಲಾ ಮಲೇರಿಯಾ ನಿಯಂತ್ರಣಾ ಅಧಿಕಾರಿಗಳು, ಜಿಲ್ಲಾ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಹಾಗೂ ಆರೋಗ್ಯ ಸಿಬ್ಬಂದಿ ಭಾಗವಹಿಸಿದ್ದರು.

# ಸಿಡಿಲು ಬಡಿದು ಎರಡು ಹಸು ಸಾವು



ನಂಜನಗೂಡು, ನ.5–ಸಿಡಿಲು ಬಡಿದು ಎರಡು ಹಸುಗಳು ಮೃತಪಟ್ಟಿರುವ ಘಟನೆ ನಂಜನಗೂಡು ತಾಲೂಕಿನ ಹುಣಸನಾಳು ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಗ್ರಾಮದ ರೈತ ಚನ್ನಶೆಟ್ಟಿ ಅವರಿಗೆ ಸೇರಿದ ಹಸುಗಳು ಮೃತಪಟ್ಟಿದ್ದು, ಅದೃಷ್ಟವಶಾತ್ ಸಮೀಪದಲ್ಲೇ ಇದ್ದ ಚನ್ನಶೆಟ್ಟಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ರೈತ ಚನ್ನಶೆಟ್ಟಿ ಜಮೀನಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದಾಗ ಮಳೆ ಪ್ರಾರಂಭವಾಗಿದೆ. ಇದರಿಂದ ಹಸುಗಳನ್ನು ಹುಣಸೆಮರದ ಕೆಳಗೆ ಹೊಡೆದುಕೊಂಡು ಹೋಗುತ್ತಿದ್ದಾಗ ಸಿಡಿಲು ಬಡಿದು ಹಸುಗಳು ಸ್ಥಳದಲ್ಲೇ ಮೃತಪಟ್ಟಿವೆ. ಇದರಲ್ಲಿ ಒಂದು ತೆನೆ ಹಸು. ಹಸುಗಳನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಚನ್ನಶೆಟ್ಟಿ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

# ಮೈಸೂರಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಆಕರ್ಷಕ ಪಥ ಸಂಚಲನ





ಮೈಸೂರು, ನ5(ಎಸ್‌ಪಿಎನ್)– ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಸ್ಥಾಪನಾ ದಿನದ ಅಂಗವಾಗಿ ಭಾನುವಾರ ಮೈಸೂರು ನಗರದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಬೃಹತ್ ಪಥ ಸಂಚಲನ ನಡೆಸಿದರು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಗಣವೇಷಧಾರಿಗಳಾಗಿ ಸಮಾವೇಶಗೊಂಡಿದ್ದ ಸಾವಿರಕ್ಕೂ ಹೆಚ್ಚು ಆರ್‌ಎಸ್‌ಎಸ್ ಕಾರ್ಯಕರ್ತರು, ಜಯಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ, ಗಾಂಧಿ ಚೌಕ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಹಾದು ಮಹಾರಾಜ ಪ್ರೌಢಶಾಲಾ ಆವರಣದಲ್ಲಿ ಮುಕ್ತಾಯಗೊಂಡಿತು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ತೆರೆದ ಜೀಪ್‌ನಲ್ಲಿ ಭಗವಾಧ್ವಜಕ್ಕೆ ಸ್ಥಾಪಿಸಿ, ಸದಾ ವತ್ಸಲೆ ಮಾತೃಭೂಮಿ ಹಾಡಿನ ಮೂಲಕ ಗೌರವ ಸೂಚಿಸಿ, ಆರ್‌ಎಸ್‌ಎಸ್ ಸಂಸ್ಥಾಪಕ ಡಾ.ಕೇಶವ್ ಬಲಿರಾಂ ಹೆಡಗೆವಾರ್ ಮತ್ತು ಮಾಧವ ಸದಾಶಿವ ಗೋಲ್ವಾಳ್ಕರ್(ಗುರೂಜಿ) ಅವರ ಭಾವ ಚಿತ್ರದೊಂದಿಗೆ ಆಕರ್ಷಕ ಬ್ಯಾಂಡ್‌ಸೆಟ್ ಮೂಲಕ ಪಥ ಸಂಚಲನ ಆರಂಭವಾಯಿತು. ಈ ವೇಳೆ ನಾರಿಮಣಿಯರು ಪಥಸಂಚಲನದ ಗಣವೇಷಧಾರಿಗಳಿಗೆ ಹೂಮಳೆ ಸುರಿದು ಹುರಿದುಂಬಿಸಿದರು.

ಈ ವೇಳೆ ಗಣವೇಷಧಾರಿ ಬಾಲಕನೋರ್ವ ಬಿಸಿಲ ಝಳಕ್ಕೆ ಸುಸ್ತಾಗಿ ಪ್ರಜ್ಞೆ ತಪ್ಪಿದರು. ಇದನ್ನು ಕಂಡ ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರು ಬಾಲಕನನ್ನು ಪಥ ಸಂಚಲನದಿಂದ ಪಕ್ಕಕ್ಕೆ ಕರೆತಂದು ನೀರು ಕುಡಿಸಿ ಹಾರೈಸಿದರಲ್ಲದೆ, ಮಾರ್ಗದುದ್ದಕ್ಕೂ ಕಾರ್ಯಕರ್ತರು ವಿವಿಧ ಘೋಷಣೆಗಳನ್ನು ಕೂಗಿ, 'ನಾವೆಲ್ಲ ಹಿಂದೂ ನಾವೆಲ್ಲ ಒಂದು' ಘೋಷಣೆಯೊಂದಿಗೆ ಹೆಜ್ಜೆ ಹಾಕಿದರು. ಪಥ ಸಂಚಲನದಲ್ಲಿ ಅಂಗವಿಕಲ ಮಣಿ ಎಂಬುವರು ಗಣವೇಷಧಾರಿಯಾಗಿ ಸಾರ್ವಜನಿಕರ ಗಮನಸೆಳೆದರು. ನಂತರ ಮಹಾರಾಜ ಪ್ರೌಢಶಾಲಾ ಆವರಣದಲ್ಲಿ ಜಮಾಯಿಸಿ ಭಗವಾಧ್ವಜಕ್ಕೆ ಗೌರವ ಸಲ್ಲಿಸಿ, ಪಥ ಸಂಚಲನ ಮುಕ್ತಾಯಗೊಳಿಸಿದರು.

ಪಥ ಸಂಚಲನ ಮುಗಿದ ನಂತರ ಶಾಲಾ ಆವರಣದಲ್ಲಿ ಗಣವೇಷಧಾರಿಗಳಿಗೆ ಬನ್, ಬಾದಾಮಿ ಹಾಲು ಪೂರೈಸಿ, ಎಲ್ಲರೂ ಬಾದಾಮಿ ಹಾಲು ಕುಡಿದ ನಂತರ ಪೇಪರ್ ಲೋಟಗಳನ್ನು ಒಂದೆಡೆ ಪ್ಲಾಸ್ಟಿಕ್ ಕವರ್‌ನಲ್ಲಿ ಶೇಖರಿಸಿ, ಶಾಲಾ ಆವರಣದ ಸ್ವಚ್ಛತೆಗೆ ಕಾರ್ಯಕರ್ತರು ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, ಎಲ್ಲರ ಗಮನ ಸೆಳೆಯಿತು.

ಆರ್‌ಎಸ್‌ಎಸ್ ಹಿರಿಯ ಮುಖಂಡ ಡಾ. ವಾಮನರಾವ್ ಬಾಪಟ್, ಮಾ.ವೆಂಕಟರಾಮು, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬಿಜೆಪಿ ಮುಖಂಡ ಮೈ.ವಿ. ರವಿಶಂಕರ್, ಜಿಲ್ಲಾ ಹಿಂದುಳಿದ ವರ್ಗಗಳ ಅಧ್ಯಕ್ಷ ಜೋಗಿಮಂಜು, ಬಿಜೆಪಿ ಮುಖಂಡ ಜಯಪ್ರಕಾಶ್, ಎಂ.ಎಸ್.ಸತ್ಯಾನಂದ ವಿಟ್ಟು ಸೇರಿದಂತೆ ಹಲವು ಆರ್‌ಎಸ್‌ಎಸ್ ಕಾರ್ಯಕರ್ತರು ಪಥಸಂಚಲನದಲ್ಲಿ ಭಾಗಿಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

# ವಿಶ್ವಕಪ್ ಕ್ರಿಕೆಟ್ ಫೈನಲ್ ದಿನ ಏರ್ ಇಂಡಿಯಾ ವಿಮಾನ ಹಾರಾಡುವಂತಿಲ್ಲ

## ಖಲಿಸ್ತಾನಿ ಉಗ್ರನಿಂದ ವಿಮಾನ ಸ್ಫೋಟಿಸುವ ಬೆದರಿಕೆ

ನವದೆಹಲಿ, ನ.5– ವಿಶ್ವಕಪ್ ಕ್ರಿಕೆಟ್ ಫೈನಲ್ ದಿನ ಏರ್ ಇಂಡಿಯಾ ವಿಮಾನ ಹಾರಾಡುವಂತಿಲ್ಲ.. ಒಂದು ವೇಳೆ ಅದರಲ್ಲಿ ಪ್ರಯಾಣಿಸಿದರೆ ಅವರ ಜೀವಕ್ಕೆ ಅಪಾಯ ಎದುರಾಗಬಹುದು ಎಂದು ನಿಷೇಧಿತ ಸಿಖ್ಸ್ ಫಾರ್ ಜಸ್ಟಿಸ್ ಸಂಸ್ಥಾಪಕ, ನಿಯೋಜಿತ ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನುನ್ ಎಚ್ಚರಿಕೆ ನೀಡಿದ್ದಾನೆ.

ನಿಷೇಧಿತ ಸಿಖ್ಸ್ ಫಾರ್ ಜಸ್ಟಿಸ್ ಸಂಸ್ಥಾಪಕ ಗುರುಪತ್ವಂತ್ ಸಿಂಗ್ ಪನ್ನುನ್ ಹೊಸ ವೀಡಿಯೊವನ್ನು ಬಿಡುಗಡೆ ಮಾಡಿದ್ದು, ವಿಡಿಯೋದಲ್ಲಿ ನವೆಂಬರ್ 19ರ ನಂತರ ಸಿಖ್ಖರು ತಮ್ಮ ಜೀವಕ್ಕೆ ಅಪಾಯವನ್ನುಂಟುಮಾಡುವ ಕಾರಣ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸಬೇಡಿ. ನವೆಂಬರ್ 19ರಂದು ಏರ್ ಇಂಡಿಯಾ ಕಾರ್ಯಾಚರಣೆಗೆ ಅವಕಾಶ ನೀಡುವುದಿಲ್ಲ ಎಂದು ಆತ ಎಚ್ಚರಿಸಿದ್ದಾನೆ.

ನಾವು ಸಿಖ್ ಜನರನ್ನು ಏರ್ ಇಂಡಿಯಾ ಮೂಲಕ ಪ್ರಯಾಣಿಸಬೇಡಿ ಎಂದು ಕೇಳುತ್ತಿದ್ದೇವೆ. ನವೆಂಬರ್ 19 ರಿಂದ ಜಾಗತಿಕ ದಿಗ್ಬಂಧನ ನಡೆಯಲಿದೆ. ಏರ್ ಇಂಡಿಯಾಗೆ ಕಾರ್ಯನಿರ್ವಹಿಸಲು ನಾವು ಅನುಮತಿಸುವುದಿಲ್ಲ. ಅಂದು ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮುಚ್ಚಲಾಗುವುದು ಮತ್ತು ಅದರ ಹೆಸರನ್ನು ಬದಲಾಯಿಸಲಾಗುವುದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋದಲ್ಲಿ ಪನ್ನುನ್ ಎಚ್ಚರಿಸಿದ್ದಾನೆ.

ಪ್ರಸ್ತುತ ನಡೆಯುತ್ತಿರುವ ವಿಶ್ವಕಪ್ ಕ್ರಿಕೆಟ್‌ನ ಅಂತಿಮ ಪಂದ್ಯ ಇದೇ ದಿನ ನಡೆಯಲಿದೆ ಎಂದು ಆತ ಒತ್ತಿ ಹೇಳಿದ್ದು, ನವೆಂಬರ್‌ನಲ್ಲಿ ಅದೇ ದಿನ ವಿಶ್ವ ಭಯೋತ್ಪಾದಕ ಕಪ್‌ನ ಅಂತಿಮ ಪಂದ್ಯ ನಡೆಯಲಿದೆ. ಯಾವಾಗ ಪಂಜಾಬ್ ವಿಮೋಚನೆಗೊಳ್ಳುತ್ತದೆಯೋ ಆಗ ದೆಹಲಿಯ ಇಂದಿರಾಗಾಂಧಿ ವಿಮಾನ ನಿಲ್ದಾಣದ ಹೆಸರು ಶಾಹಿದ್ ಬಿಯಾಂತ್ ಸಿಂಗ್, ಶಾಹಿದ್ ಸತ್ವಂತ್ ಸಿಂಗ್ ಖಲಿಸ್ತಾನ್ ವಿಮಾನ ನಿಲ್ದಾಣ ಎಂದಾಗುತ್ತದೆ ಎಂದು ಹೇಳಿದ್ದಾನೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**MEDICAL SHOP FOR SALE**
Prime location
Contact number
9980143666

**HOME APPLIANCES SERVICE**
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

**ಬೇಕಾಗಿದ್ದಾರೆ**
ಹೆಲ್ಪರ್ ಕೆಲಸಕ್ಕೆ ಸಂಬಳ: 12000/- ರೂಂ ಸೌಲಭ್ಯವಿರುತ್ತದೆ, ವಯಸ್ಸು 18–22, ಮೊ:
9606871188

**ಉಚಿತ ಮದ್ಯವರ್ಜನ ಶಿಬಿರ**
ಮೈಸೂರಿನ ಶ್ರೀರಾಂಪುರದಲ್ಲಿರುವ ಚೈತನ್ಯ ಫೌಂಡೇಷನ್‌ವತಿಯಿಂದ ನ. 10 ರಿಂದ 30 ರವರೆಗೆ 21 ದಿನಗಳ ಕಾಲ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿಯೊಂದಿಗೆ ವೈದ್ಯರಿಂದ ಚಿಕಿತ್ಸಾ ಸೌಲಭ್ಯ, ಯೋಗ, ಧ್ಯಾನದೊಂದಿಗೆ ಆಪ್ತಸಮಾಲೋಚನೆ ಸಿಗಲಿದೆ. ಹೆಚ್ಚಿನ ಮಾಹಿತಿಗೆ
9164469570, 6361744190

**HOUSE FOR RENT**
(Vegetarians Only) 2BHK House First Floor available for Rent at Krishnamurthipuram, Mysore Near Krishnamurthipuram Post Office. Contact:
9448939404
9353561720

**FOR RENT OR LEASE**
15000 sq.ft., 60x220
with Bore, Bannur Main Road, Opp. Vidya Vikas College, near Devegowda Circle.
Call: 98809 29323

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**WANTED SALES GIRLS**
for a showroom
Salary 15000 - 20000
Ph: 9380142144

**ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

**ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)**
BE, MBA, MTech, MBBS, MD, MS ಎಲ್ಲಾ Degree ಯ INDIA / USA / UK ಹಾಗು ಎಲ್ಲಾ ದೇಶದ ವಧು–ವರರ ಮಾಹಿತಿ ಮತ್ತು ಉಚಿತ ನೋಂದಣಿಗೆ ಸಂಪರ್ಕಿಸಿ. Mobile:
9663199511 / 8088776211
ಕಂಪ್ಯೂಟರ್ ಗೊತ್ತಿರುವ ಮಹಿಳೆ ಕೆಲಸಕ್ಕೆ ಬೇಕಾಗಿದ್ದಾರೆ.

**SITE FOR SALE**
30x40 North Facing Site # 294, at Kalyani Layout Vijayanagar 4th Stage
9686779810

**HOUSE FOR SALE**
30X40 Single Floor W/N Opposite Theju Corner Vijayanagar 4th Stage
9845809369

**ಬಾಡಿಗೆಗೆ**
ಕಛೇರಿ, ವಾಣಿಜ್ಯ, ಬ್ಯಾಂಕ್ ನೆಲ ಮಳಿಗೆ 1000Sqft. ಮೊದಲ ಮಹಡಿ 2000Sqft. ನಿರ್ಮಲ ಆಸ್ಪತ್ರೆ (Old) ಹತ್ತಿರ ಟಿ.ನರಸೀಪುರ ಮೇನ್ ರಸ್ತೆ, ಗಿರಿದರ್ಶಿನಿ ಬಡಾವಣೆ, ಆಲನಹಳ್ಳಿ ಮೈಸೂರು–28
9964346133
8310856790

**100% TEAK WOOD FACTORY FINISH DOORS @ DEPOT RATES**

10 YEARS WARRANTY
www.ssbuildmart.com
9901291267
9845426862

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

**ಬೋಳು ತಲೆಯ ಸಮಸ್ಯೆಯೇ?**

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

**ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್**
ಮೊ.: 9731839596
ಇವರು ಕುಟ್ಟಿಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

**ಮನೆ ಮಾರಾಟಕ್ಕಿದೆ**
40x30 ಅಡಿಯುಳ್ಳ N/F 3 ಅಂತಸ್ತಿನ ಮನೆ (ಇದರಲ್ಲಿ 1BHK-3 & 2BHK-2 ಮನೆಗಳು) ಮಾರಾಟಕ್ಕಿದೆ
9008255039
8618234832

**WANTED**
2 BHK HOUSE FOR RENT IN AROUND S.S.PURAM, JAYANAGAR, K.M.PURAM
9591624825

**SITE FOR SALE**
Alanahalli Corporation Site 35x30 2500/-psq.ft
9945033366

**DTCP SITES FOR SALE**
DTCP Sites Rs. 699 per sq.ft., Near Jayapura, H.D. Kote Road, Mysore.
9590491194, 9606783264

**ಉತ್ತಮ ಅವಕಾಶ**
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

**SITE FOR SALE**
30x40 S/F
Muda Approved
Sri Sai Chamundeshwari Layout, Raghavendraswamy Temple Road Chikkalli, T.Narasipura Road, Mysore
9480084847

**ಬರವಣಿಗೆಯ ಕೆಲಸ**
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

**LOST**
It is notified for information of public that Original Sale Deed document no. 1878 dated 22/11/2000 of site khata no & property address #2462/A, A main road, Block no 21, KMRP Ward, Gokula badavane, Hunsur town- 571105 has been lost or misplaced. FIR no. 149/2023 has been registered. Finder please contact the owner Malini B G
9380264638

**ಬೇಕಾಗಿದ್ದಾರೆ**
ಟೆಲಿ–ಕಾಲಿಂಗ್ ಮಾಡಿ ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
9916913984


V-GUARD
10 ವರ್ಷಗಳ ವ್ಯಾರಂಟಿ
Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

**ಸೈಟುಗಳು ಬೇಕಾಗಿದೆ**
ಎಲ್ಲಾ ಅಳತೆಯ ಮುಡಾ (MUDA) ಸೈಟುಗಳು ದಟ್ಟಗಳ್ಳಿ (ಕನಕದಾಸನಗರ) ದೇವನೂರು, ಜೆ.ಪಿ.ನಗರ, ಪೊಲೀಸ್ ಬಡಾವಣೆ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ಹಾಗೂ ಕುವೆಂಪುನಗರದಲ್ಲಿ ಬೇಕಾಗಿದೆ.
ಗಂಜಾಂ ಪ್ರಾಪರ್ಟೀಸ್
ಮಾಲೀಕರು ಸಂಪರ್ಕಿಸಿ:
7411501819

**SITE FOR SALE**
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

**HOUSE FOR LEASE**
Newly Built 2BHK Independent House, Fully Furnished with Solar @ Lalithadri Nagar, Near Ring Road, Behind Indian Oil Petrol Bunk
9964414484

**ಎಸ್.ಆರ್. ಎಂಟರ್‌ಪ್ರೈಸಸ್**
ITI, Diploma, ಎಲೆಕ್ಟ್ರಿಕಲ್ಸ್, Office Boy, Helpers, Office Asst. Computer Data Entry, B.Com., Accountant ಹಾಗೂ ಅಡುಗೆ ಕೆಲಸಕ್ಕೆ ತಕ್ಷಣ ಮಹಿಳೆಯರು, BE, ಎಲ್ಲಾ ವಿದ್ಯಾವಂತರಿಗೆ ಉದ್ಯೋಗಾವಕಾಶಕ್ಕಾಗಿ ನೇರ ಸಂಪರ್ಕಿಸಿ: ಯೂನಿಯನ್ ಬ್ಯಾಂಕ್ ಮೇಲೆ, ಹೂಟಗಳ್ಳಿ ಸಿಗ್ನಲ್ ಹಿಂಭಾಗ, ಮೈಸೂರು–18
Mob: 8951241381

**FARM FOR SALE**
10.12 ಎಕರೆ ಫಲವತ್ತಾದ ಭೂಮಿ, ತೆಂಗು, ಫಲಕೊಡುವ ಹಣ್ಣಿನ ಮರಗಳು, ಗಿಡಗಳು, ಮನೆ 3 ಬೋರ್‌ವೆಲ್, ಸುತ್ತಲು ಬೇಲಿ, ಬಸ್ ಸೌಲಭ್ಯ ಮೈಸೂರಿನಿಂದ 37 ಕಿ.ಮೀ ನಂಜನಗೂಡು ತಾ॥ ಹುಲ್ಲಹಳ್ಳಿ ಬಳಿ ಟಾರ್ ರಸ್ತೆ ಅಪ್ರೂವಡ್ ಸಂಪರ್ಕಿಸಿ
7338382615

**ಬೇಕಾಗಿದ್ದಾರೆ**
ಟಾಟಾ ಏಸ್ ಗೂಡ್ ಗಾಡಿಗೆ Driver ಮತ್ತು Helperಗಳು ಬೇಕಾಗಿದ್ದಾರೆ. ಸಂಬಳ: 12000 ರಿಂದ 15000 ವಸತಿ ಸೌಲಭ್ಯ ಇದೆ
8884179981

**ಉದ್ಯೋಗ ಅವಕಾಶ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15,200/- to 86,000/-
9740733021, 9535028750

**ಕೇರಳ ಶ್ರೀ ಆದಿಶಕ್ತಿ ಜ್ಯೋತಿಷ್ಯರು ಪಂಡಿತ್ ಎಸ್ ಶಿವಪ್ರಸಾದ್ ತಂತ್ರಿ**
ಮೊ: 9686525894
ಸ್ತ್ರೀ ಪುರುಷ ವಿಚಾರ ನೀವು ಹಲವಾರು ಜ್ಯೋತಿಷ್ಯರಲ್ಲಿ ಕೇಳಿ ನಿರಾಶರಾಗಿರುಬಹುದು. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ, ನಷ್ಟ ಸಾಲ ಬಾಧೆ, ತೊಂದರೆ, ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿದ್ದರು 2 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ ಖಾಯಂ ಮನೆಯ ವಿಳಾಸ # LIG, 101 ಬ್ಯಾಂಕ್ ಆಫ್ ಬರೋಡ ಎದುರು, ಅಕ್ಷಯ ಭಂಡಾರ ಹತ್ತಿರ, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು

**ಬೇಕಾಗಿದ್ದಾರೆ**
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಲೀನಿಂಗ್ ಮತ್ತು ಪ್ಯಾಕಿಂಗ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್, ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

**ನೇಮಕಾತಿ**
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–25
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
8867064586

**ಕಳೆದಿದೆ**
ಅಂಕಯ್ಯ, ನಂ. 610, 2ನೇ ಕ್ರಾಸ್, 'ಬಿ' ಲೇಔಟ್, ಬನ್ನಿಮಂಟಪ, ಮೈಸೂರು. ದಿನಾಂಕ 19–10–2023 ರಂದು ಮಧ್ಯಾಹ್ನ 2 ಗಂಟೆಗೆ ಈ ಮೇಲ್ಕಂಡ ಸ್ವತ್ತಿನ 25x30 ಅಳತೆ ನಿವೇಶನದ ದಾಖಲಾತಿ ಪತ್ರಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಕಟ್ಟಡದ ನಕ್ಷೆ, ಕಂದಾಯ ಪಾವತಿ ಮಾಡಿರುವ ರಶೀದಿಗಳು, ಕ್ರಯಪತ್ರ, ಇಸಿ ಮತ್ತು ಇತರೆ ದಾಖಲಾತಿಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9611135797

**ಬೇಕಾಗಿದ್ದಾರೆ**
ಹುದ್ದೆ: ಲೇಡಿ ಆಡಿಟರ್ ಅಸಿಸ್ಟೆಂಟ್, ವಿದ್ಯಾರ್ಹತೆ: ಪಿ.ಯು.ಸಿ. ಕಾಮರ್ಸ್/ಬಿ.ಕಾಂ ಮತ್ತು ಕಂಪ್ಯೂಟರ್ ಹಾಗೂ ಟ್ಯಾಲಿ ಸಂಪರ್ಕಿಸಿ: ಡಿ.ಕೆ.ಕೃಷ್ಣೇಗೌಡ, ಆಡಿಟರ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್, ಶ್ರೀರಾಮ ಕಾಂಪ್ಲೆಕ್ಸ್, ಸೂರ್ಯ ಬೇಕರಿ ಸರ್ಕಲ್, ಹೆಬ್ಬಾಳ್, ಮೈಸೂರು–16
9742168396

**ಬಣ್ಣದ ಕೆಲಸ & ಟೈಲ್ಸ್ ಕೆಲಸ ಮಾಡಿಕೊಡಲಾಗುವುದು**
ತಾರಸಿ ಲೀಕೆಜ್ ಸರಿಪಡಿಸಲಾಗುವುದು
8971781855

**ಬೇಕಾಗಿದ್ದಾರೆ**
1) ಅಕೌಂಟ್ಸ್ ಎಕ್ಸಿಕ್ಯೂಟಿವ್ (ಅನುಭವ ಇರುವವರಿಗೆ ಮಾತ್ರ)
ದಿ ಕೋರಮ್ ಹೋಟೆಲ್
#2257/1, ವಿನೋಬಾ ರಸ್ತೆ, ಕಲಾಮಂದಿರದ ಹತ್ತಿರ, ಮೈಸೂರು.
9620274629, 9620274630

**Wanted Marketing Executives**
Marketing Executives for a Paper Packaging unit located at Bogadi. Persons with two wheeler will be preferred. Salary: 10K + petrol + Incentive + yearly bonus. Contact:
Mob: 9686616899

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಸಂಪು ಟ್ಯಾಂಕ್ ಕ್ಲೀನಿಂಗ್**
ಸಂಪರ್ಕಿಸಿ:
8861612486

**ಸೋಲಾರ್ ವಾಟರ್ ಹೀಟರ್ Solar Water Heater**

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

**ಶಾದಿಗುರೂಜಿ.ಕಾಂ**
ವಧು–ವರರನ್ನು ಹುಡುಕಲು ಸಹಾಯಬೇಕೇ? ನಮಗೆ ಕರೆ ಮಾಡಿ ಫೋಟೋ ಬಯೋಡೇಟಾ ಮತ್ತು ಜಾತಕವನ್ನು ವಾಟ್ಸ್‌ಪ್ ಮಾಡಿರಿ
6361740552

**ಫ್ಯಾಷನ್ ಶೋ–2023**
17–12–2023 ಮೈಸೂರಿನಲ್ಲಿ ಮಕ್ಕಳು/ಮಹಿಳೆಯರು ಭಾಗವಹಿಸುವವರಿಗೆ ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರ ನೀಡುತ್ತೇವೆ. ಪ್ರವೇಶ ಶುಲ್ಕ 500/–
ಡಾ॥ ಕಸ್ತೂರಿಚಂದ್ರು
8867688676

**ಕೊಳ್ಳೇಗಾಲದ ಜ್ಯೋತಿಷ್ಯರು**
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

**ಕೊಳ್ಳೇಗಾಲದ ಜ್ಯೋತಿಷ್ಯರು**
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತಪ್ಪವರ ತನಗೆ ತತ್ತು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

**ಭೋಗ್ಯಕ್ಕೆ ಬೇಕಾಗಿದೆ**
ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಸುತ್ತಮುತ್ತ 20 ರಿಂದ 50 ಎಕರೆ ಜಮೀನು ಭೋಗ್ಯಕ್ಕೆ ಬೇಕಾಗಿದೆ.
7676602704, 9739999499

**LAND FOR SALE**
4.24 Acres, Kallur Naganahalli, Mysore Taluk, Yelwala Hobli. Single owner.
Contact:
9538704552, 9513214652

**ಹೋಂ ನರ್ಸಿಂಗ್ ಕೆಲಸ**
ಮೈಸೂರಿನ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ, ಊಟ ವಸತಿಯೊಂದಿಗೆ ಸಂಬಳ 12,000 ರಿಂದ 18,000 ಇರುತ್ತದೆ. (ಮೊದಲು ಬಂದವರಿಗೆ ಆದ್ಯತೆ)
9035113222

**ಬೇಕಾಗಿದ್ದಾರೆ**
ಮೈಸೂರು ನಗರದಲ್ಲಿ ಶಾಲೆಗೆ ವಾಚ್‌ಮೆನ್ ಕೆಲಸ ಮಾಡಲು ಕುಟುಂಬ ಬೇಕಾಗಿದೆ. ಮತ್ತು ಕೇಬಲ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
7676522224
9483508822

**ಕಸ್ತೂರಿ ಮ್ಯಾಟ್ರಿಮೊನಿ ಮೈಸೂರು**
ಮೊದಲನೇ ಹಾಗೂ ಎರಡನೇ ಮದುವೆಯಾಗುವ ವಧು–ವರರು ಫೋಟೋ ಹಾಗೂ ವಿವರ ವಾಟ್ಸಪ್ ಮಾಡಿ. ಉಚಿತ ನೋಂದಣಿ:
8867688676

**ಬೇಕಾಗಿದ್ದಾರೆ**
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ /ಯುವತಿಯರು, ಮಹಿಳೆಯರು, ವಿಧವೆ /ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ESI, PF ಸೌಲಭ್ಯ ಇರುತ್ತದೆ) ಸಂಬಳ 15000/–
6366141518 / 9845010281


**Star Solar** Renewable Energy
JUST Easy EMI 19,499/- 200 Ltr
5.15 Years Guaranty
All Companies Old Solar Service will be Done.
Old system Exchange offer available
Manufacturing : Belawadi Industrial Sub, Mysore
9945616293 / 9449966293

**ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ**
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡ್ಸ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂಧ್ರಶೈಲಿ ಸಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

**ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು**
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ., ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

**ನಗರದ ಅಂಗಡಿಯೊಂದಕ್ಕೆ**
ಕೌಂಟರ್ ಸೇಲ್, ಸ್ಟೋರ್ ಕೀಪರ್, ಅಸಿಸ್ಟೆಂಟ್ ಅಕೌಂಟೆಂಟ್ ಡ್ರೈವರ್, ಬಿಲ್ಲಿಂಗ್ ಅಂಡ್ ಕ್ಯಾಶ್ ತಿಂಡಿ ತಯಾರಿಸಲು ಹೆಲ್ಪರ್ಸ್ ಚಾಟ್ಸ್ ಮಾಡಲು ಹೆಲ್ಪರ್ ಬೇಕಾಗಿದ್ದಾರೆ.
9606116663/4

**ಶ್ರೀ ಗಣೇಶ್ ಗೋಲ್ಡ್ ಲೋನ್**
ಸರ್ಕಾರದಿಂದ ನೋಂದಾಯಿತ ಸಂಸ್ಥೆ ನಮ್ಮಲ್ಲಿ ಎಲ್ಲಾ ವಿಧವಾದ ಚಿನ್ನಾಭರಣಗಳ ಮೇಲೆ ತಿಂಗಳಿಗೆ 1% ಬಡ್ಡಿದರಲ್ಲಿ ಲೋನ್ ಕೊಡಲಾಗುತ್ತದೆ. ಆಸಕ್ತರು ಸಂಪರ್ಕಿಸಿ: ವಿಳಾಸ: ಪೊಲೀಸ್ ಬೂತ್ ಸರ್ಕಲ್, ಜೆ.ಪಿ.ನಗರ, ಮೈಸೂರು
9743660797

**ಸಂಪು ಟ್ಯಾಂಕ್ ಕ್ಲೀನಿಂಗ್**
9108566022

**HEALTH INSURANCE**
* Cashless, Tax Benefits
* Family, Senior Citizens
* Port Existing Policy to low Premium
* Pregnancy / Maternity Insurance for Couples.
9110861343
Join as Agent (No Exams)

**ಕುಕ್ ಬೇಕಾಗಿದ್ದಾರೆ**
ಕೋಲಾರದಲ್ಲಿ 250 ಜನರಿರುವ ಇಂಜಿನಿಯರಿಂಗ್ ಕಾಲೇಜು ಹಾಸ್ಟೆಲ್‌ಗೆ ಕುಕ್ ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ
9380394364

**ಬೇಕಾಗಿದ್ದಾರೆ**
ಚಟ್ಟನಹಳ್ಳಿ ಗ್ರಾಮದಲ್ಲಿ ತೋಟ ನೋಡಿಕೊಳ್ಳುವರು ದಂಪತಿ
9986599365

**FOR SALE**
1) 30@40 30@50 sites 16 lakhs KOTE ROAD
2) 30@40 T Narasipura road saptamatruke layout attch
3) 30@40 east site Preethi layout Srirampura
4) 40@60 N ring road facing uttanahalli near COMMERCIAL
5) BOGADI road 20x30, 30x40 trenz apartments near
6) 20@30 g+1 house SRIRAMPURA and DATTAGALLI
Prakruthi Properties
9538690359, 9035990359

**ಕಾರ್ಯಸಿದ್ಧಿ ಹನುಮಾನ್ ಜ್ಯೋತಿಷ್ಯ**
ದಾಂಪತ್ಯ ಕಲಹ, ವ್ಯಾಪಾರದಲ್ಲಿ ತೊಂದರೆ ಆರೋಗ್ಯದಲ್ಲಿ, ಉದ್ಯೋಗದಲ್ಲಿ ತೊಂದರೆ ವಿದೇಶ ಪಯಣ ಇನ್ನೂ ನಿಮ್ಮ ಅನೇಕ ಸಮಸ್ಯೆಗಳಿಗೆ ಗುರುಜೀಯವರನ್ನು ಸಂಪರ್ಕಿಸಿ ಪರಿಹಾರವನ್ನು ಕಂಡುಕೊಳ್ಳಿ
ಪಂಡಿತ ಹನುಮಂತರಾವ್
9686487402

**ನೇರನೇಮಕಾತಿ**
ಕಂಪನಿಗೆ ಯುವಕರು Age (18-23) 10th, PUC, ಮೇಲ್ಪಟ್ಟಿರುವ Earn (8500+ ರಿಂದ 16500/-) pm Only FRIESHERS * NO FEE* ಪರಸ್ಥಳವರಿಗೆ ಮಾತ್ರ ವಸತಿ ವಿವರಗಳಿಗಾಗಿ ಮುದ್ದಾಗಿ ಸಂರ್ಕಿಸಿ: IMPULSE MYSORE MEETUS (11AM-3PM)
ಕಾವ್ಯ: 9342238667
9342827788

**HOUSE FOR SALE**
Rs. 89 Lakh or Lease 20 Lakh East Face 20x33 New 3 BHK Duplex House Srirampura Tollgate
9972515099

**SADVIKA PRE & PRIMARY SCHOOL**
Vijayanagar 4th Stage, Basavanapura, Mysore-570018
TEACHERS REQUIRES
NST, PUC, DEd, BA, B.Ed, MA, ಆದ ಶಿಕ್ಷಕಿಯರು ಬೇಕಾಗಿದ್ದಾರೆ
L.E.MANJUNATHA
Secratary
9986567404

**ಸಂಜೀವಿನಿ ಆರ್ಗ್ಯಾನಿಕ್ಸ್**
BUSINESS OPPORTUNITY
Are you planning for Start a Business & Be a Independent in your Life here is an Opportunity to get a suggetion as per need. Int. can contact for an Appointment
SANJEEVINI ORGANICS
JP NAGAR, MYSORE
7406910389

**ಬೇಕಾಗಿದ್ದಾರೆ**
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ Diploma E&E, & Mech, ITI, 8th to 2nd PUC ವರೆಗೆ ಮತ್ತು ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಊಟ ವಸತಿ ESI & PF ಸೌಲಭ್ಯವಿರುತ್ತದೆ. ಸಂಬಳ 11400 to 18000 ಇರುತ್ತದೆ.
8951869646
9902645646

**WANTED**
Sales Girls/Boys
Full Time / Part Time
For a Inner-wear Showroom
Contact in Person
JAVERS
#109, Mezzanine Floor, D. Devaraj Urs Road, Next to Raghavendra Bakery, Mysore

**ಮೈಸೂರು ಮಿತ್ರ ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ಮಂಡ್ಯ ಕೇಂದ್ರ ಬಿಂದುವಾದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆ..!

**• ಗರಿಗೆದರಿದ ರಾಜಕೀಯ ಚಟುವಟಿಕೆ • ಮೂರು ಪಕ್ಷಗಳಲ್ಲೂ ಮಂಡ್ಯದವರೇ ಪ್ರಬಲ ಟಿಕೆಟ್ ಆಕಾಂಕ್ಷಿಗಳು**

• ಎಂ.ಕೆ.ಮೋಹನ್‌ರಾಜ್

ಮಂಡ್ಯ, ನ.5– ಇನ್ನೂ 8 ತಿಂಗಳಿರುವಾಗಲೇ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಸಂಬಂಧ ರಾಜಕೀಯ ಚಟುವಟಿಕೆಗಳು ಗರಿಗೆದರಲಾರಂಭಿಸಿವೆ. ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲಾ ವ್ಯಾಪ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರ ಒಳಪಟ್ಟರೂ, ಮೂರು ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಮಂಡ್ಯ ಜಿಲ್ಲೆಯವರೇ ಪ್ರಬಲ ಆಕಾಂಕ್ಷಿಗಳಾಗಿರುವುದರಿಂದ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆ ಕೇಂದ್ರ ಬಿಂದುವಾಗಿ ಗಮನ ಸೆಳೆಯುತ್ತಿದೆ.

ವರ್ಷದ ಹಿಂದೆ (2022ರ ಜೂ.13) ನಡೆದ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಕೂಡ ಮಂಡ್ಯ ಕೇಂದ್ರಿತವಾಗಿತ್ತು. ಆ ಚುನಾವಣೆಯಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಪರಾಭವಗೊಂಡ ಜೆಡಿಎಸ್ ಹುರಿಯಾಳು ಹೆಚ್.ಕೆ.ರಾಮು, ರೈತ ಸಂಘ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್.ಗೌಡ ಮೂವರು ಮಂಡ್ಯ ಜಿಲ್ಲೆಯವರಾಗಿದ್ದರು.

ಇದೀಗ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಗಳಾಗಿರುವವರು ಮಂಡ್ಯದವರೇ. ಈ ಮೂವರು ಕ್ಷೇತ್ರ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಶಾಲಾ ಕಾಲೇಜುಗಳಿಗೆ ಎಡತಾಕುತ್ತಾ ಮತದಾರರ ನೋಂದಣಿ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ. ಶಿಕ್ಷಕರು ಮತ್ತು ಉಪನ್ಯಾಸಕರ ಸಭೆಗಳನ್ನು ನಡೆಸುತ್ತಾ ಸಮಾಲೋಚನೆ ನಡೆಸುತ್ತಿದ್ದಾರೆ. ಹೀಗಾಗಿ ಚುನಾವಣೆಗೆ ಇನ್ನೂ 8 ತಿಂಗಳಿರುವಾಗಲೇ ಚುನಾವಣಾ ಕಾವೇರುತ್ತಿದೆ.

ಕ್ಷೇತ್ರಕ್ಕೆ ಈವರೆಗೆ ನಡೆದಿರುವ ಐದೂ ಚುನಾವಣೆಯಲ್ಲಿ ಗೆದ್ದಿರುವುದು ಕೂಡ ಮಂಡ್ಯ ಜಿಲ್ಲೆಯವರೇ ಆಗಿರುವುದು ಮತ್ತೊಂದು ವಿಶೇಷ. ಅಚ್ಚರಿ ಎಂದರೆ ಐದು ಅವಧಿಗಳನ್ನು ಇಬ್ಬರೇ ಪ್ರತಿನಿಧಿಸಿದ್ದಾರೆ. ಕ್ಷೇತ್ರ ರಚನೆಯಾದ ಬಳಿಕ ನಡೆದ ಮೊದಲ ಚುನಾವಣೆಯಲ್ಲಿ(1994) ನಿತ್ಯಸಚಿವ ಕೆ.ವಿ.ಶಂಕರಗೌಡರ ಪುತ್ರ ಕೆ.ಎಸ್.ಸಚ್ಚಿದಾನಂದ ಜನತಾದಳ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆದ್ದು ವಿಧಾನಪರಿಷತ್ ಪ್ರವೇಶಿಸಿದ್ದರು.

ಬಳಿಕ 2000, 2006, 2012 ಮತ್ತು 2018ರ ಚುನಾವಣೆಗಳಲ್ಲಿ ಮರಿತಿಬ್ಬೇಗೌಡರು ಗೆಲುವು ಸಾಧಿಸಿದ್ದಾರೆ. ಕ್ಷೇತ್ರವನ್ನು ಸತತ 4 ಬಾರಿ ಪ್ರತಿನಿಧಿಸಿರುವ ಹೆಗ್ಗಳಿಕೆ ಮರಿತಿಬ್ಬೇಗೌಡ ಅವರದು. ಮೊದಲ ಚುನಾವಣೆಯನ್ನು ಕಾಂಗ್ರೆಸ್‌ನಿಂದ ಗೆದ್ದಿದ್ದ ಮರಿತಿಬ್ಬೇಗೌಡ, ಎರಡನೇ ಬಾರಿಗೆ ಪಕ್ಷೇತರ ಹಾಗೂ ಕಳೆದ 2 ಅವಧಿಗಳಿಂದ ಜೆಡಿಎಸ್‌ನಿಂದ ಸ್ಪರ್ಧಿಸಿ ಜಯಭೇರಿ ಬಾರಿಸಿದ್ದಾರೆ.

ಇದೀಗ 5ನೇ ಅವಧಿಗೂ ಸ್ಪರ್ಧಿಸಲು ನಿರ್ಧರಿಸಿರುವ ಮರಿತಿಬ್ಬೇಗೌಡ ಈ ಬಾರಿ ಜೆಡಿಎಸ್ ತೊರೆದು ಕಾಂಗ್ರೆಸ್ ಹುರಿಯಾಳಾಗಿ ಕಣಕ್ಕಿಳಿಯುವ ತಯಾರಿ ನಡೆಸಿದ್ದಾರೆ. ಈಗಾಗಲೇ ಮರಿತಿಬ್ಬೇಗೌಡರಿಗೆ ಕಾಂಗ್ರೆಸ್‌ನಿಂದಲೂ ಒಂದು ಹಂತಕ್ಕೆ ಗ್ರೀನ್ ಸಿಗ್ನಲ್ ದೊರೆತಿದೆ. ಹೀಗಾಗಿ ಎಲ್ಲಾ ಶಾಲಾ–ಕಾಲೇಜುಗಳಿಗೆ ಭೇಟಿ ನೀಡುತ್ತಾ ಶಿಕ್ಷಕರು, ಉಪನ್ಯಾಸಕರನ್ನು ಮತದಾರರ ಪಟ್ಟಿಗೆ ಹೆಸರು ಸೇರಿಸುವಂತೆ ಪ್ರೇರೇಪಿಸಿದ್ದಾರೆ.

### ಮರಿತಿಬ್ಬೇಗೌಡ



ಕ್ಷೇತ್ರವನ್ನು ಸತತ 4 ಬಾರಿ ಪ್ರತಿನಿಧಿಸಿದ ಹೆಗ್ಗಳಿಕೆ ಹೊಂದಿರುವ ಮರಿತಿಬ್ಬೇಗೌಡರು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಅಂಚೆದೊಡ್ಡಿ ಗ್ರಾಮದವರು. 2015ರಿಂದ 2018ರವರೆಗೆ 3 ವರ್ಷಗಳ ಕಾಲ ವಿಧಾನ ಪರಿಷತ್ ಉಪ ಸಭಾಪತಿಯೂ ಆಗಿದ್ದರು. ಇತಿಹಾಸ ವಿಷಯದಲ್ಲಿ ಎಂಎ ಪದವಿ ಪಡೆದಿದ್ದಾರೆ. ವಿದ್ಯಾರ್ಥಿ ದಿಸೆಯಲ್ಲೇ ನಾಯಕತ್ವ ಗುಣ ಬೆಳೆಸಿಕೊಂಡಿದ್ದ ಇವರು ವಿಧಾನ ಪರಿಷತ್ ಸದಸ್ಯರಾಗುವ ಮುನ್ನ ತಲಾ 3 ಬಾರಿ ಮೈಸೂರು ವಿವಿ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿದ್ದರು.

### ಕೆ.ಟಿ.ಶ್ರೀಕಂಠೇಗೌಡ



ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡರು ಮದ್ದೂರು ತಾಲೂಕು ಕೊಪ್ಪ ಗ್ರಾಮದವರು. 2004, 2016ರ'ಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದಿಂದ ಕೆ'ಟಿಎಸ್' ಗೆಲುವು ಸಾಧಿಸಿದ್ದರು. ಈ ಕ್ಷೇತ್ರವನ್ನು ಜೆಡಿಎಸ್‌ನಿಂದ ಗೆದ್ದ ಮೊದಲ ಅಭ್ಯರ್ಥಿ ಎಂಬ ಹೆಗ್ಗಳಿಕೆ ಇವರದು. ಆದರೆ, 2022ರ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ತಮ್ಮ ಆಪ್ತ ಹೆಚ್.ಕೆ.ರಾಮು ಅವರಿಗೆ ಅವಕಾಶ ಮಾಡಿಕೊಟ್ಟು, ತಾವು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಶಿಕ್ಷಕರು, ಪದವೀಧರರ ಒಡನಾಟ ಹೊಂದಿರುವ ಇವರು 2022ರಲ್ಲಿ ರಾಜ್ಯ ಸರ್ಕಾರ, ವಿಧಾನ ಪರಿಷತ್ತಿನಿಂದ "ಅತ್ಯುತ್ತಮ ಶಾಸಕ" ಪ್ರಶಸ್ತಿ ಪಡೆದಿದ್ದಾರೆ.

### ಡಾ.ಈ.ಸಿ.ನಿಂಗರಾಜ್‌ಗೌಡ



ಪಾಂಡವಪುರ ತಾಲೂಕು ಈರೇಗೌಡನಕೊಪ್ಪಲು ಗ್ರಾಮದ ಡಾ.ಈ.ಸಿ.ನಿಂಗರಾಜ್‌ಗೌಡ ಬಿಎಸ್ಸಿ, ಎಂಎ, ಎಂಫಿಲ್ ಸೇರಿದಂತೆ 9 ಪದವಿಗಳನ್ನು ಪಡೆದಿದ್ದಾರೆ. ಪತ್ರಿಕೋದ್ಯಮ ವಿಷಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಪೂರ್ಣ ವಿಕಾಸ ಸೇವಾ ಟ್ರಸ್ಟ್, ಮೈಸೂರು ಗ್ರಂಥಪಾಲಕರ ಮತ್ತು ಮಾಹಿತಿ ವಿಜ್ಞಾನಗಳ ಸಂಘ, ಮಂಡ್ಯದ ಕಲಾತಪಸ್ವಿ–ಕರ್ನಾಟಕ ಟ್ರಸ್ಟ್‌ನ ಅಧ್ಯಕ್ಷರಾಗಿದ್ದಾರೆ. ಚುನಾವಣೆಗಾಗಿಯೇ ರಾಜ್ಯ ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

### ಆಕಾಂಕ್ಷಿಗಳಿವರು...

ಕಾಂಗ್ರೆಸ್‌ನಿಂದ ಹಾಲಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಪ್ರಬಲ ಆಕಾಂಕ್ಷಿಯಾಗಿದ್ದರೆ, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಸಹ ಕಾಂಗ್ರೆಸ್ ಟಿಕೆಟ್‌ಗಾಗಿ ಲಾಬಿ ನಡೆಸುತ್ತಿದ್ದಾರೆ. ಜೆಡಿಎಸ್‌ನಿಂದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡರ ಹೆಸರು ಬಹುತೇಕ ಅಂತಿಮಗೊಂಡಿದೆ. ಬಿಜೆಪಿಯಿಂದ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ನಿರಂಜನಮೂರ್ತಿ, ಕೀಲಾರ ಶಿವಮೂರ್ತಿ ಟಿಕೆಟ್ ಕೇಳಿದ್ದು, ಕಳೆದ ಬಾರಿ ದಕ್ಷಿಣ ಪದವೀಧರ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿದ್ದ ವಿನಯ್ ಎಂಬುವರು ಸಹ ಟಿಕೆಟ್ ಕೇಳುತ್ತಿದ್ದಾರೆ. ಡಾ.ಈ.ಸಿ.ನಿಂಗರಾಜ್‌ಗೌಡ ಅವರ ಹೆಸರು ಮುಂಚೂಣಿಯಲ್ಲಿದೆ.

## ಗಣಪತಿ ಪೆಂಡಾಲ್‌ನಲ್ಲಿ ಅನ್ನ ಸಂತರ್ಪಣೆ



ಪಾಂಡವಪುರ, ನ.5– ಪಟ್ಟಣದ ಹಳೇ ಬಸ್ ನಿಲ್ದಾಣದ ಗಣಪತಿ ಪೆಂಡಾಲ್‌ನಲ್ಲಿ ಶ್ರೀಸಿದ್ಧಿವಿನಾಯಕ ಸೇವಾ ಸಮಿತಿಯಿಂದ ಪ್ರತಿಷ್ಠಾಪಿಸಿರುವ ಶ್ರೀಗಣೇಶೋತ್ಸವ ಅಂಗವಾಗಿ ಗಣ ಹೋಮ ಹಾಗೂ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಗಣಪತಿಗೆ ಪೂಜೆ ಸಲ್ಲಿಸಿದರು. ಬಳಿಕ ಶ್ರೀ ಸಿದ್ಧಿವಿನಾಯಕ ಸೇವಾ ಸಮಿತಿ ಪದಾಧಿಕಾರಿಗಳು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಅಭಿನಂದಿಸಿದರು. ಇದೇ ವೇಳೆ ಗಣ ಹೋಮ ನಡೆಯಿತು. ಭಕ್ತರಾದ ಮನುಜಾ ಮತ್ತು ಪ್ರಭಾಕರ್ ದಂಪತಿ ಹೋಮವನ್ನು ಯಶಸ್ವಿಯಾಗಿ ನಡೆಸಿದರು. ಬಳಿಕ ಅನ್ನಸಂತರ್ಪಣೆ ನಡೆಯಿತು. ಅನ್ನ ಸಂತರ್ಪಣೆಯಲ್ಲಿ ಪಟ್ಟಣ ಸೇರಿದಂತೆ ಸುತ್ತಮುತ್ತಲ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಈ ವೇಳೆ ಸಿದ್ಧಿ ವಿನಾಯಕ ಸೇವಾ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ, ಪದಾಧಿಕಾರಿಗಳಾದ ಶಾಂತಿ ಪ್ರಸಾದ್, ಪುರುಷೋತ್ತಮ್, ನಟರಾಜು, ಬಾಲಾಜಿ, ಮನು, ಮನೋಜ್, ದೇವೇಗೌಡ, ಅಶೋಕ್, ಫ್ರೆಂಚ್‌ರಾಕ್ಸ್ ಲಯನ್ಸ್ ಸಂಸ್ಥೆ ಅಧ್ಯಕ್ಷ ಟಿ.ಪಿ.ರೇವಣ್ಣ ಸೇರಿದಂತೆ ಸಮಿತಿ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.



## ನಾಳೆ ಬೆಂಗಳೂರು ಚಲೋ

ಮದ್ದೂರು, ನ.5– ಕನಿಷ್ಠ ವೇತನ ನಿಗದಿ, ಪಿಂಚಣಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನ.7ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಪಂ ನೌಕರರ ಸಂಘದ ತಾಲೂಕು ಅಧ್ಯಕ್ಷ ಕೆ.ಪಿ.ಮಂಜು, ಪ್ರಧಾನ ಕಾರ್ಯದರ್ಶಿ ಜಿ.ಆರ್.ರಾಮು ತಿಳಿಸಿದ್ದಾರೆ.

ಎಲ್ಲಾ ನೌಕರರ ಜಿಪಂ ಅನುಮೋದನೆಗಾಗಿ, ಗ್ರೇಡ್–2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕರ ಹುದ್ದೆಗಳಿಗೆ ಸೇವೆಯೊಳಗಿನ ನೇರ ನೇಮಕಾತಿಗೆ ವಯೋಮಿತಿ ಕೈ ಬಿಡಲು ಒತ್ತಾಯಿಸಿ ಬೆಂಗಳೂರು ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನವದವರೆಗೆ ಬೃಹತ್ ಮೆರವಣಿಗೆ ಹಮ್ಮಿಕೊಂಡಿದ್ದು ಗ್ರಾಪಂ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

## ಚಂದ್ರೇಗೌಡ ನಿಧನ



ಕೆ.ಆರ್.ಪೇಟೆ, ನ.5– ತಾಲೂಕಿನ ಗುಡುಗನಹಳ್ಳಿ ಗ್ರಾಮದ ಕುರುಬ ಸಮಾಜದ ಹಿರಿಯ ಮುಖಂಡ ಚಂದ್ರೇಗೌಡ (68) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರ ಪತ್ನಿ ಮಹದೇವಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಗಣೇಶೋತ್ಸವಗಳನ್ನು ಪಕ್ಷಾತೀತವಾಗಿ ಯಶಸ್ವಿಗೊಳಿಸಬೇಕು: ಮಂಜು



ಕೆ.ಆರ್.ಪೇಟೆ, ನ.5– ನಮ್ಮಲ್ಲಿ ಹಲವು ಗಣೇಶೋತ್ಸವ ಸಂಘಗಳಿದ್ದು, ನೂರಾರು ಯುವಕರ ಸಂಘ ಸಂಸ್ಥೆಗಳು ಆರಂಭ ಶೂರತ್ವ ತೋರಿಸಿ ಒಂದೆರಡು ವರ್ಷಗಳ ನಂತರ ಸಂಘದ ಪದಾಧಿಕಾರಿಗಳ ನಡುವೆ ಒಮ್ಮತವಿಲ್ಲದೇ ಕೆಲವೇ ವರ್ಷದಲ್ಲಿ ಸಂಘದ ಚಟುವಟಿಕೆಗಳನ್ನು ನಿಲ್ಲಿಸಿರುವ ನಿದರ್ಶನ ಸಾಕಷ್ಟಿವೆ. ಆದರೆ ಸಂತೇಬಾಚಹಳ್ಳಿ ಗೆಳೆಯರ ಬಳಗ ಸತತ 65 ವರ್ಷಗಳಿಂದ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿರುವುದು ಉತ್ತಮ ಬೆಳವಣಿಗೆ. ಇದಕ್ಕೆ ಪಕ್ಷಾತೀತವಾಗಿ ಎಲ್ಲರೂ ಒಗ್ಗೂಡಿ ಶ್ರಮಿಸುತ್ತಿರುವುದೇ ಕಾರಣ ಎಂದು ಶಾಸಕ ಹೆಚ್.ಟಿ.ಮಂಜು ಶ್ಲಾಘಿಸಿದರು.

ತಾಲೂಕಿನ ಸಂತೇಬಾಚಹಳ್ಳಿ ಗ್ರಾಮದಲ್ಲಿ ಬಿ.ಶಿವಪ್ಪನವರ ಸಾರಥ್ಯದಲ್ಲಿ 65ನೇ ವರ್ಷದ ಅದ್ಧೂರಿ ಗಣೇಶೋತ್ಸವದಲ್ಲಿ ಮಾತನಾಡಿದ ಅವರು, ಸಂಘದ ಸಂಸ್ಥಾಪಕ ಅಧ್ಯಕ್ಷ ಬಿ.ಶಿವಪ್ಪನವರ ಮಾರ್ಗದರ್ಶನದಲ್ಲಿ ಉತ್ಸವ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದ್ದು, ಇಲ್ಲಿನ ಗಣೇಶೋತ್ಸವವನ್ನು ವೀಕ್ಷಿಸಲು ನೆರೆಯ ಚನ್ನರಾಯಪಟ್ಟಣ, ನಾಗಮಂಗಲ ತಾಲೂಕುಗಳಿಂದಲೂ ಜನರ ದಂಡೇ ಆಗಮಿಸುತ್ತದೆ. ಮುಂದೆ ಈ ಸಂಘ 100 ವರ್ಷಗಳನ್ನು ಪೂರೈಸುವಂತಾಗಲಿ. ಈ ಸಂಘಕ್ಕೆ ನಮ್ಮ ಸಹಕಾರ ಯಾವಾಗಲೂ ಇರುತ್ತದೆ ಎಂದರು. ಸಂತೇಬಾಚಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ಗೂಡೇಹೊಸಹಳ್ಳಿ ಸಮೀಪದ ಹೇಮಾವತಿ ನದಿ ಮೂಲದಿಂದ ಹೋಬಳಿಯ ಕೆರೆ ಕಟ್ಟೆಗಳನ್ನು ತುಂಬಿಸಲು ಯೋಜಿಸಲಾಗಿರುವ ಏತ ನೀರಾವರಿ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಒತ್ತಡ ತರುತ್ತೇನೆ. ಜೊತೆಗೆ ಸಂತೇಬಾಚಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢಶಾಲೆಗಳ ಶಿಥಿಲಗೊಂಡಿರುವ ಕಟ್ಟಡಗಳ ದುರಸ್ತಿಗೆ ಹಾಗೂ ಹೊಸ ಕಟ್ಟಡಗಳನ್ನು ನಿರ್ಮಿಸಿಕೊಡಲು ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಬೇಡದಹಳ್ಳಿ ಶ್ರೀಪಂಚಭೂತೇಶ್ವರ ಮಠದ ಶ್ರೀ ರುದ್ರಮುನಿ ಸ್ವಾಮೀಜಿ ವಹಿಸಿದ್ದರು. ಈ ವೇಳೆ ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲುರವಿ, ಟಿಎಪಿಸಿಎಂಎಸ್ ಸಂಸ್ಥೆಯ ಅಧ್ಯಕ್ಷ ಬಿ.ಎಲ್.ದೇವರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಮ್ ಇತರರಿದ್ದರು.



ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಶಿಕಾರಿಪುರದ ಶಾಸಕ ಬಿ.ವೈ. ವಿಜಯೇಂದ್ರ ಅವರನ್ನು ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅವರು ನೆನಪಿನ ಕಾಣಿಕೆ ನೀಡಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮುಡಾ ಮಾಜಿ ಸದಸ್ಯೆ ಶ್ರೀಮತಿ ಲಕ್ಷ್ಮೀದೇವಿ, ಬಿಜೆಪಿ ಮುಖಂಡರಾದ ಜಿ.ಎಂ. ಪಂಚಾಕ್ಷರಿ, ಪಟೇಲ್ ಗಂಗಾಧರ್, ನಂಜುಂಡಸ್ವಾಮಿ, ಸೀಮೆಎಣ್ಣೆ ಪ್ರಕಾಶ್, ಹಳೇ ಊರು ರಾಜಣ್ಣ ಇನ್ನಿತರರಿದ್ದರು.

## ವರ್ಣರಂಜಿತ ದಸರಾ ದೀಪಾಲಂಕಾರಕ್ಕೆ ತೆರೆ



ಮೈಸೂರು, ನ.5(ಎಸ್‌ಬಿಡಿ)– ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾಗಿದ್ದ 'ವಿದ್ಯುತ್ ದೀಪಾಲಂಕಾರ'ಕ್ಕೆ ಭಾನುವಾರ ತೆರೆಬಿದ್ದಿದೆ. ಪಾರಂಪರಿಕ ಮೈಸೂರು ದಸರಾ ವೈಭವದಲ್ಲಿ ಜಗಮಗಿಸುವ ವಿದ್ಯುತ್ ದೀಪಾಲಂಕಾರ ಕಣ್ಮನ ಸೂರೆಗೊಂಡಿತು.

ದಸರಾ ಮಹೋತ್ಸವದ ಜೊತೆಗೆ ಅ.15ರಂದು ದಸರಾ ವಿದ್ಯುತ್ ದೀಪಾಲಂಕಾರಕ್ಕೂ ಚಾಲನೆ ದೊರೆತಿತ್ತು. ವಿಜಯದಶಮಿ ದಿನ ಮುಕ್ತಾಯವಾಗಬೇಕಿದ್ದ ದೀಪಾಲಂಕಾರವನ್ನು ಜನಾಪೇಕ್ಷೆ ಮೇರೆಗೆ ಈವರೆಗೆ ವಿಸ್ತರಿಸಲಾಗಿತ್ತು ನಗರದ ಪ್ರಮುಖ ವೃತ್ತಗಳು, ರಸ್ತೆಗಳು ವಿದ್ಯುತ್ ದೀಪಗಳಿಂದ ಕಂಗೊಳಿಸಿದವು. ಒಂದೊಂದು ವೃತ್ತ ಹಾಗೂ ಜಂಕ್ಷನ್‌ಗಳಲ್ಲೂ ವಿಶೇಷವಾದ ಪ್ರತಿಕೃತಿಗಳು ಮೆರುಗು ಹೆಚ್ಚಿಸಿದ್ದವು.

ದಸರಾ ಮಹೋತ್ಸವದ ದಿನಗಳು ಸೇರಿ ಒಟ್ಟು 22 ದಿನಗಳ ಕಾಲ ಅತ್ಯಾಕರ್ಷಕ ವಿದ್ಯುತ್ ದೀಪಾಲಂಕಾರವನ್ನು ಲಕ್ಷಾಂತರ ಮಂದಿ ಕಣ್ತುಂಬಿಕೊಂಡು ಸಂಭ್ರಮಿಸಿದರು. ದೀಪಾಲಂಕಾರ ನೋಡಲೆಂದೇ ನಿತ್ಯ ಹೊರ ಜಿಲ್ಲೆಗಳಿಂದಲೂ ಸಾವಿರಾರು ಮಂದಿ ಬರುತ್ತಿದ್ದರು. ಪ್ರವಾಸೋದ್ಯಮ ಇಲಾಖೆಯ 'ಅಂಬಾರಿ' ಡಬ್ಬಲ್ ಡೆಕ್ಕರ್ ಬಸ್ ಮೂಲಕವೂ ಸಹಸ್ರಾರು ಮಂದಿ ದೀಪಾಲಂಕಾರದ ಸೊಬಗು ಸವಿದರು. ಸಂಜೆಯಾಗುತ್ತಿದ್ದಂತೆ ವಾಹನದಟ್ಟಣೆ ಸಾಮಾನ್ಯವಾಗಿತ್ತು. ದೀಪಾಲಂಕಾರ ವ್ಯಾಪಾರಿಗಳಿಗೂ ಲಾಭ ತಂದುಕೊಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಸಹಕಾರಿಯಾಗಿತ್ತು.

ಕೊನೆಯ ದಿನವಾದ ಭಾನುವಾರವೂ ಸಾವಿರಾರು ಜನ ದೀಪಾಲಂಕಾರ ವೀಕ್ಷಿಸಿದರು. ವಿದ್ಯುತ್ ದೀಪಗಳಿಂದ ನಿರ್ಮಿಸಿದ್ದ ಪ್ರತಿಕೃತಿಗಳ ಮುಂದೆ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು. ಅದೆಷ್ಟೋ ಜನ ಕ್ಯಾಮರಾದಲ್ಲಿ ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಚೆಂದದ ಮೈಸೂರನ್ನು ಚಿತ್ರೀಕರಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡರು. ಹೀಗೆ ದಸರಾದಲ್ಲಿ ಜನ ಸಂಭ್ರಮವನ್ನು ಇಮ್ಮಡಿಗೊಳಿಸಿದ್ದ ದೀಪಾಲಂಕಾರಕ್ಕೆ ತೆರೆಬಿದ್ದಿದೆ. ವಿಶೇಷ ದೀಪಾಲಂಕಾರದಿಂದ ಬೆಳಗುತ್ತಿದ್ದ ಮೈಸೂರು ಸೊಬಗು ಕಾಣಲು ಮುಂದಿನ ದಸರೆವರೆಗೆ ಕಾಯಬೇಕಿದೆ.

### 1.50 ಲಕ್ಷ ಯೂನಿಟ್ ಖರ್ಚು

6 ದಸರಾ ದೀಪಾಲಂಕಾರ ಭಾನುವಾರ ಮುಕ್ತಾಯವಾಗಿದೆ. ನಿನ್ನೆವರೆಗೆ ಸುಮಾರು 1.50 ಲಕ್ಷ ಯೂನಿಟ್ ವಿದ್ಯುತ್ ಬಳಕೆಯಾಗಿರಬಹುದು ಎಂದು ಅಂದಾಜಿಸಲಾಗಿದೆ. ಸಂಪೂರ್ಣ ವರದಿ ನಂತರ ನಿಖರವಾದ ಅಂಕಿಅಂಶ ಲಭ್ಯವಾಗಲಿದೆ.

-ಸುನಿಲ್ ಕುಮಾರ್, ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್



**ತುತ್ತಿಗಾಗಿ ಕಸರತ್ತು...** ಜಗಮಗಿಸುವ ವಿದ್ಯುತ್ ದೀಪಾಲಂಕಾರದ ನಡುವೆ ಬಾಲಕಿಯೊಬ್ಬಳು ಉದ್ದವಾದ ಕೋಲು ಹಿಡಿದು ಸೈಕಲ್ ರಿಮ್ ಮೂಲಕ ಹಗ್ಗದ ಮೇಲೆ ಚಲಿಸಿ ಸಾಹಸ ಪ್ರದರ್ಶಿಸಿದಳು. ಕೆಳಗೆ ನಿಂತಿದ್ದ ಆಕೆಯ ತಾಯಿಯ ಕಣ್ಣುಗಳಲ್ಲಿ ಆತಂಕ ತುಂಬಿತ್ತು. ತುತ್ತಿಗಾಗಿ ಬಾಲಕಿ ಅಪಾಯಕಾರಿ ಕಸರತ್ತು ಮಾಡಿದ್ದನ್ನು ನೋಡಿ ಎಲ್ಲರೂ ಮರುಗಿದರು. ಕೆಲವರು ಕೈಲಾದಷ್ಟು ಸಹಾಯ ಮಾಡಿದರು. ಇಂತಹ ಮಕ್ಕಳು ವ್ಯವಸ್ಥೆಯ ಕಣ್ಣಿಗೆ ಬೀಳುವುದೇ ಇಲ್ಲ ಎಂದು ಒಂದಷ್ಟು ಮಂದಿ ಗೊಣಗಿದರು.

## ಪರಿಶಿಷ್ಟ ಪಂಗಡದವರಿಗೆ ವಿವಿಧ ಯೋಜನೆಗಳಿಗಾಗಿ ಅರ್ಜಿ ಆಹ್ವಾನ

ಮೈಸೂರು, ನ.5– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ 2023–24 ನೇ ಸಾಲಿನಲ್ಲಿ ವಿವಿಧ ಯೋಜನೆಗ ಳಾದ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ (ನೋಂದಾಯಿತ ಸ್ವ–ಸಹಾಯ ಮಹಿಳಾ ಸಂಘಗಳಿಗೆ), ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಗಳಿಗೆ (ಭೂ ರಹಿತ ಕೃಷಿ ಕಾರ್ಮಿಕ ಮಹಿಳೆಗೆ ಮಾತ್ರ). ಅರ್ಜಿ ಆಹ್ವಾನಿಸಲಾಗಿದೆ.

ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾನುಭವಿಯು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. ಈ ಹಿಂದೆ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವವರು ಹೊಸದಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಯನ್ನು https://suvidha.karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ನ.29 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಅಥವಾ ಕಚೇರಿ ದೂ.ಸಂ 0821–2430022 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.19, ಅನ್ನದಾತರ ಮಕ್ಕಳಿಗಾಗಿ ಉದ್ಯೋಗ ಮೇಳ

ಮೈಸೂರು, ನ.5(ಎಸ್‌ಪಿಎನ್)– ಒಕ್ಕಲಿಗ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್ ಸಹಯೋಗದೊಂದಿಗೆ ನ.19ರಂದು ಬೆಳಗ್ಗೆ 10ರಿಂದ ಸಂಜೆ 5ವರೆಗೆ ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದ ಶ್ರೀ ಲಕ್ಷ್ಮೀಕಾಂತ ದೇವಸ್ಥಾನ ಆವರಣದ ಬಿಜಿಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಭಾಭವನದಲ್ಲಿ ಅನ್ನದಾತರ ಮಕ್ಕಳಿಗಾಗಿ ಉದ್ಯೋಗ ಮೇಳವನ್ನು ಆಯೋಜಿಸಿದೆ.

ಈ ಮೇಳವನ್ನು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಮ್ಮುಖದಲ್ಲಿ ಬೆಂಗಳೂರಿನ ಕಿದ್ವಾಯಿ ಮೆಮೊರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕೋಲಾಜಿ ಮಾಜಿ ನಿರ್ದೇಶಕ ಡಾ.ಸಿ.ರಾಮಚಂದ್ರ ಉದ್ಘಾಟಿಸುವರು. ಆದಿಚುಂಚನಗಿರಿ ಮೈಸೂರು ಶಾಖಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರೇರಾ ಅಧ್ಯಕ್ಷ ಎಚ್.ಸಿ.ಕಿಶೋರ್‌ಚಂದ್ರ, ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಹಿರಿಯ ಪತ್ರಕರ್ತ ಚನ್ನೇಗೌಡ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದದ ಮುಖ್ಯ ಸಲಹೆಗಾರ ಅಭಿಜಿತ್, ಐಎಎಸ್ ಅಧಿಕಾರಿಗಳಾದ ಪ್ರದೀಪ್ ಪ್ರಭಾಕರ್, ಎನ್.ಮಂಜುಶ್ರೀ, ಎಸ್.ಎನ್.ಬಾಲಚಂದ್ರ, ಐಪಿಎಸ್ ಅಧಿಕಾರಿಗಳಾದ ಎನ್.ಯತೀಶ್, ಎಂ.ಮುತ್ತುರಾಜ್, ಪೃಥ್ವಿಕ್‌ಶಂಕರ್ ಉಪಸ್ಥಿತರಿರುವವರು ಎಂದು ಕಾರ್ಯಕಾರಿ ಸಮಿತಿ ಸದಸ್ಯ ನಂಜೇಗೌಡ ನಂಜುಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ 9686564192 ಸಂಪರ್ಕಿಸಬಹುದು.

## ನಿಸ್ವಾರ್ಥ ಸೇವಾ ಮನೋಭಾವದ ದಾನಿಗಳ ಸಂಖ್ಯೆ ಹೆಚ್ಚಾಗಲಿ

**ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆಶಯ**



ಮೈಸೂರು, ನ.5(ಎಸ್‌ಪಿಎನ್)– ಸ್ವಾರ್ಥವೇ ತುಂಬಿರುವ ಸಮಾಜದಲ್ಲಿ ನಿಸ್ವಾರ್ಥ ಸೇವಾ ಮನೋಭಾವವುಳ್ಳ ಇಂತಹ ದಾನಿಗಳ ಸಂಖ್ಯೆ ಹೆಚ್ಚಾಗಲಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆಶಯ ವ್ಯಕ್ತಪಡಿಸಿದರು.

ಹೊಸಮಠದ ನಟರಾಜ ಸಭಾ ಮಂಟಪದಲ್ಲಿ ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆ, ನಾರಾಯಣ ಸೇವಾಸಂಸ್ಥೆ, ಜೈನ್‌ಮಿಲನ್ ಚಾರಿಟೆಬಲ್ ಟ್ರಸ್ಟ್, ಬಳ್ಳಾರಿಯ ಗುರು ಪುಷ್ಕರ ಜೈನ ಸೇವಾ ಸಮಿತಿ ಸಹಯೋಗದೊಂದಿಗೆ ಮಾಡ್ಯುಲರ್ ಕೃತಕ ಅಂಗಗಳು, ಕೈ ಮತ್ತು ಕಾಲಿನ ಅಂಗಗಳ ಮಾಪನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಸಭಾಂಗಣದಲ್ಲಿ ಇರುವವರು ಯಾವುದೇ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಇವರಲ್ಲಿ ಯಾವುದೇ ಸ್ವಾರ್ಥತೆ, ಜಾತಿ, ಧರ್ಮ ಭೇದವಿಲ್ಲದೆ ನಿಸ್ವಾರ್ಥದಿಂದ ಕೆಲಸ ಮಾಡುತ್ತಿದ್ದಾರೆ. ಸುಮಾರು 60 ಲಕ್ಷ ರೂ.ಗಳ ಕೈ ಕಾಲುಗಳ ಕೃತಕ ಅಂಗಗಳನ್ನು ಅಳತೆ ತೆಗೆದುಕೊಂಡು ಸುಮಾರು 350ಕ್ಕೂ ಹೆಚ್ಚು ಜನರಿಗೆ ಅನುಕೂಲ ಮಾಡಿಕೊಡುತ್ತಿರುವುದು ಉತ್ತಮ ಸಂಗತಿ ಎಂದರು. ಹೂವಿನಿಂದ ನಾರು ಸ್ವರ್ಗ ಸೇರಿದಂತೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವವರ ಜೊತೆಗೆ ನನ್ನ ಸ್ವಂತ ಹಣದಿಂದ 50 ಸಾವಿರ ರೂ.ಗಳನ್ನು ನೀಡುತ್ತಿದ್ದೇನೆ. ಇದು ನನ್ನ ಅಳಿಲು ಸೇವೆ ಎಂದ ಶಾಸಕರು, ಇದಕ್ಕಾಗಿಯೇ ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರೂ ಸಹ ಎಲ್ಲರಿಗೂ ಸರ್ಕಾರವೇ ಅನುಕೂಲ ಮಾಡಲು ಸಾಧ್ಯವಿಲ್ಲ. ಇಂತಹ ಸ್ವಯಂ ಸೇವಾ ಸಂಸ್ಥೆಗಳು, ದಾನಿಗಳು ಮುಂದೆ ಬಂದು ಬಡವರಿಗೆ ಅನುಕೂಲ ಮಾಡಿಕೊಡಬೇಕು. ಈ ಅವಕಾಶವನ್ನು ಫಲಾನುಭವಿಗಳು ಸದುಪಯೋಗ ಪಡೆಯುವಂತೆ ಮನವಿ ಮಾಡಿದರು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಲಯನ್ ಹೇಮಂತ್‌ಕುಮಾರ್, ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಎಸ್‌ಬಿಎಂ ಮಂಜು, ಮಾಜಿ ಸದಸ್ಯ ಪಾರ್ಥಸಾರಥಿ, ಶಂಕರೇಗೌಡ, ದಿನೇಶ್‌ಗೌಡ, ಲಯನ್ ಸುರೇಶ್ ಗೋಲ್ಡ್ ಹಾಜರಿದ್ದರು.

## ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.5– 2023–24ನೇ ಸಾಲಿನ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಾದ ಸ್ವಯಂ ಉದ್ಯೋಗ ನೇರ ಸಾಲ, ಉದ್ಯೋಗಶೀಲತ ಯೋಜನೆ, ಉದ್ಯೋಗಶೀಲತಾ ಯೋಜನೆ (ಸರಕು ಮತ್ತು ಸಾಗಣೆ ನಾಲ್ಕು ಚಕ್ರದ ವಾಹನ) ಹಾಗೂ ಭೂ ಒಡೆತನ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಅರ್ಜಿಗಳನ್ನು ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್‌ಗಳಲ್ಲಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ನ.30 ಕೊನೆಯ ದಿನಾಂಕವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಮಡಿಕೇರಿಯಲ್ಲಿ ದರೋಡೆಗೆ ವಿಫಲ ಯತ್ನ

## ಮನೆಗೆ ನುಗ್ಗಿ ಒಂಟಿ ಮಹಿಳೆ ತಲೆಗೆ ರಾಡಿನಿಂದ ಹೊಡೆದು ಬಂಗಾರದ ಸರ ಕದಿಯಲು ಯತ್ನ

- ನಿವೃತ್ತ ಪೊಲೀಸ್ ಅಧಿಕಾರಿ ಮನೆಯಲ್ಲಿ ಘಟನೆ
- ಪತಿ ವಾಕಿಂಗ್‌ಗೆ ತೆರಳಿದ್ದ ವೇಳೆ ಅಟ್ಯಾಕ್



ಮಡಿಕೇರಿ, ನ.5– ಮನೆಯಲ್ಲಿ ಒಂಟಿ ಮಹಿಳೆ ಇದ್ದ ವೇಳೆ ಮನೆಗೆ ನುಗ್ಗಿ ದರೋಡೆಗೆ ವಿಫಲ ಯತ್ನ ನಡೆಸಿರುವ ಘಟನೆ ಭಾನುವಾರ ಸಂಜೆ ನಗರದ ಹೃದಯ ಭಾಗದಲ್ಲಿ ನಡೆದಿದ್ದು, ನಗರದ ನಿವಾಸಿಗಳು ಬೆಚ್ಚಿ ಬಿದ್ದಿದ್ದಾರೆ. ನಗರದ ಕಾಲೇಜು ರಸ್ತೆಯ ಐಡಿಬಿಐ ಬ್ಯಾಂಕ್ ಎದುರು ಈ ಘಟನೆ ನಡೆದಿದ್ದು, ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಘಟನೆ ಹಿನ್ನೆಲೆ:** ನಿವೃತ್ತ ಪೊಲೀಸ್ ಅಧಿಕಾರಿ ಎಂ.ಸಿ ಪ್ರಭಾಕರ್ ಪಟ್ಟಣದ ಐಡಿಬಿಐ ಬ್ಯಾಂಕ್ ಮುಂಭಾಗ ಸ್ವಂತ ಮನೆ ಮಾಡಿಕೊಂಡು ಪತ್ನಿ ಸಾಕಮ್ಮ ಅವರೊಂದಿಗೆ ವಾಸವಾಗಿದ್ದಾರೆ. ಎಂ.ಸಿ. ಪ್ರಭಾಕರ್ ಅವರು ಎಂದಿನಂತೆ ಸಂಜೆ ವೇಳೆ ವಾಯುವಿಹಾರಕ್ಕೆ ತೆರಳಿದ್ದರು. ಈ ವೇಳೆ ಮನೆಯಲ್ಲಿ ಅವರ ಪತ್ನಿ ಸಾಕಮ್ಮ ಮಾತ್ರ ಇದ್ದರು. ಮನೆಯ ಹಿಂಬಾಗಿಲಿನಿಂದ ಒಳ ನುಗ್ಗಿರುವ ದರೋಡೆಕೋರ ಸಾಕಮ್ಮ ಅವರ ತಲೆಯ ಭಾಗಕ್ಕೆ ಕಬ್ಬಿಣದ ಸಲಾಕೆಯಿಂದ ಹಲ್ಲೆ ನಡೆಸಿ, ಕುತ್ತಿಗೆಯಲ್ಲಿದ್ದ ಚಿನ್ನದ ತಾಳಿ ಚೈನ್ ಅನ್ನು ಕಸಿಯಲು ಪ್ರಯತ್ನ ನಡೆಸಿದ್ದಾನೆ.

ಈ ವೇಳೆ ಸಾಕಮ್ಮ ಜೋರಾಗಿ ಕಿರುಚಿಕೊಂಡಿದ್ದಾರೆ. ಇದರಿಂದ ಸಿಕ್ಕಿಬೀಳುವ ಆತಂಕದಿಂದ ದರೋಡೆಕೋರ ಕೂಡಲೇ ಸ್ಥಳದಿಂದ ಪರಾರಿಯಾಗಿದ್ದಾನೆ. ಚೈನ್ ತುಂಡಾಗಿ ಸಾಕಮ್ಮ ಅವರ ಕುತ್ತಿಗೆಯಲ್ಲೇ ಉಳಿದಿದ್ದು, ಸಾಕಮ್ಮ ಅವರ ಪತಿ ಎಂ.ಸಿ. ಪ್ರಭಾಕರ್ ಅವರು ವಾಯುವಿಹಾರ ಮುಗಿಸಿ ಮನೆಗೆ ಹಿಂದಿರುಗಿದಾಗ ಪತ್ನಿ ರಕ್ತದ ಮಡುವಿನಲ್ಲಿ ಬಿದ್ದಿದ್ದನ್ನು ಕಂಡು ಸ್ಥಳೀಯರಿಗೆ ಮಾಹಿತಿ ನೀಡಿದ್ದಾರೆ. ಪತ್ನಿಯನ್ನು ವಿಚಾರಿಸಿದಾಗ ದರೋಡೆ ಪ್ರಯತ್ನ ನಡೆದಿರುವುದು ತಿಳಿದು ಬಂದಿದೆ. ಬಳಿಕ ಸಾಕಮ್ಮ ಅವರನ್ನು ತುರ್ತು ವಾಹನದ ಮೂಲಕ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಘಟನಾ ಸ್ಥಳಕ್ಕೆ ನಗರ ಪೊಲೀಸ್ ಅಧಿಕಾರಿ ಲೋಕೇಶ್ ಮತ್ತು ಸಿಬ್ಬಂದಿಗಳು, ಶ್ವಾನದಳ, ಬೆರಳಚ್ಚು ತಜ್ಞರು ಜಿಲ್ಲಾ ಅಪರಾಧ ಪತ್ತೆ ದಳದ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು..

**ಸಿಸಿ ಕ್ಯಾಮರಾದಲ್ಲಿ ಸೆರೆ:** ದರೋಡೆಗೆ ವಿಫಲ ಯತ್ನ ನಡೆಸಿದ ಆರೋಪಿ ಕೃತ್ಯ ಎಸಗುವ ಮುನ್ನ ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ಓಡಾಟ ನಡೆಸಿರುವುದು ಮನೆಯ ಪಕ್ಕದಲ್ಲೇ ಇರುವ ಖಾಸಗಿ ಆಸ್ಪತ್ರೆ ಕಟ್ಟಡದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಇದೇ ಆಸ್ಪತ್ರೆ ಕಟ್ಟಡದ ಕೆಳ ಮಹಡಿಯ ಅಂಚಿನಲ್ಲಿರುವ ಸಿ.ಸಿ.ಕ್ಯಾಮರಾವನ್ನು ಗುರುತು ಪತ್ತೆಯಾಗದಂತೆ ಕೈಯಿಂದ ಹೊಡೆದು ಜಜ್ಜಿರುವುದು ಕೂಡ ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ. ಮನೆಯ ಪೂರ್ವಪರ ಮಾಹಿತಿ ತಿಳಿದುಕೊಂಡ ಕಳ್ಳ ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ.

# ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ

## ಕನ್ನಡ ರಾಜ್ಯೋತ್ಸವದಲ್ಲಿ ಶಾಸಕ ಡಾ. ಮಂಥರ್ ಗೌಡ ಅಭಿಪ್ರಾಯ



ಮೂರ್ನಾಡು,ನ.5– ಸಮಾಜದಲ್ಲಿ ಬದಲಾವಣೆಗಳು ಕಾಣಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಮಡಿಕೇರಿ ಶಾಸಕ ಡಾ. ಮಂಥರ್ ಗೌಡ ಹೇಳಿದರು.

ಮೂರ್ನಾಡು ವಿದ್ಯಾಸಂಸ್ಥೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಮತ್ತು ನೂತನ ಪ್ರಾಥಮಿಕ ಶಾಲಾ ಕಟ್ಟಡವನ್ನು ಉದ್ಘಾಟಿಸಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿದ್ಯಾಭ್ಯಾಸದಿಂದ ಉನ್ನತ ಸ್ಥಾನಮಾನಗಳನ್ನು ಗಳಿಸಬಹುದು ಎಂದರು.

ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಬಡಿದು ಕಲಿಸುವ ವ್ಯವಸ್ಥೆಯಿಲ್ಲ. ಹಾಗಾಗಿ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸ್ನೇಹಪರದಿಂದ ಇದ್ದು ಪಾಠ–ಪ್ರವಚನಗಳಿಗೆ ಆದ್ಯತೆ ನೀಡಬೇಕು. ವಿದ್ಯಾಸಂಸ್ಥೆಗಳು ವರ್ಷದಿಂದ ವರ್ಷಕ್ಕೆ ನವೀಕರಣಗೊಳ್ಳುವುದರೊಂದಿಗೆ, ಹೊಸ ಹೊಸ ಕೋರ್ಸ್‌ಗಳು ಸೇರ್ಪಡೆಗೊಂಡಾಗ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ಹೇಳಿದರು. ಈ ವಿದ್ಯಾಸಂಸ್ಥೆಗೆ ಅವಶ್ಯಕತೆ ಇರುವ ಶಿಕ್ಷಣ ಇಲಾಖೆಯ ಕೆಲಸ ಕಾರ್ಯಗಳಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಡಿಕೇರಿ ಸರಕಾರಿ ಮಹಿಳಾ ಪದವಿ ಕಾಲೇಜಿನ ಪ್ರಾಧ್ಯಾಪಕಿ ಡಾ.ಕೋರನ ಸರಸ್ವತಿ ಪ್ರಕಾಶ್ ಮಾತನಾಡಿ, ಪರಭಾಷಾ ವ್ಯಾಮೋಹದಲ್ಲಿ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಹರಸಾಹಸಪಡುತ್ತಿದೆ. ನಾವೆಲ್ಲರೂ ಕನ್ನಡ ಭಾಷೆ, ಸಂಸ್ಕೃತಿಯಲ್ಲಿ ಜೀವಿಸುವಂತಾಗಬೇಕು ಅಂತರ್ಜಾಲದ ಬಳಕೆಯಿಂದ ಓದುವ ಹವ್ಯಾಸವೇ ಕಡಿಮೆಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಊರಿನ ಪ್ರಗತಿಯ ಮೆಟ್ಟಿಲು ಅಲ್ಲಿನ ಶಿಕ್ಷಣ ಸಂಸ್ಥೆಗಳಾಗಿದ್ದು, ಅಲ್ಲಿನ ಇತಿಹಾಸ ಶಿಕ್ಷಣ ಸಂಸ್ಥೆಗಳೊಂದಿಗೆ ಮಿಳಿತಗೊಂಡಿರುತ್ತದೆ ಎಂದು ಹೇಳಿದರು.

ಮೂರ್ನಾಡು ವಿದ್ಯಾಸಂಸ್ಥೆಯ ಅಧ್ಯಕ್ಷ ಬಾಚೆಟ್ಟಿರಜಿ ಮಾದಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್‌ಕೆಜಿಯಿಂದ ಪದವಿ ತರಗತಿಗಳವರೆಗೆ ಒಂದೇ ಕ್ಯಾಂಪಸ್‌ನಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಲಾಗಿದ್ದು, ಇಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕ್ರೀಡಾ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಆದರೆ ಸರ್ಕಾರದಿಂದ ಯಾವುದೇ ರೀತಿಯ ಅನುದಾನಗಳು ಸಿಗುತ್ತಿಲ್ಲ. ವಿದ್ಯಾಸಂಸ್ಥೆಯನ್ನು ಮುನ್ನಡೆಸಲು ಸರ್ಕಾರದ ಸಹಾಯಹಸ್ತದ ಅವಶ್ಯಕತೆ ಇದೆ. ಶಾಸಕರು ಈ ನಿಟ್ಟಿನಲ್ಲಿ ಮುತುವರ್ಜಿ ವಹಿಸಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕ ಎನ್.ಸಿ. ನವೀನ್. ವಿದ್ಯಾರ್ಥಿಗಳಿಗೆ ಬರೆದ ಹಣಕಾಸು ನಿರ್ವಹಣೆಯ ಪುಸ್ತಕವನ್ನು ಶಾಸಕರು ಬಿಡುಗಡೆಗೊಳಿಸಿದರು. ವಿದ್ಯಾಸಂಸ್ಥೆಯಲ್ಲಿ ದೈಹಿಕ ಶಿಕ್ಷಕರಾಗಿ 26 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಅವರೆಮಾದಂಡ ಜಿ.ಗಣೇಶ್ ಅವರನ್ನು ಸನ್ಮಾನಿಸಲಾಯಿತು. ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವೇದಿಕೆಯಲ್ಲಿ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷ ಪುದಿಯೊಕ್ಕಡ ಸುಬ್ರಮಣಿ, ಕಾರ್ಯದರ್ಶಿ ಪೆಮ್ಮುಡಿಯಂಡ ವೇಣುಅಪ್ಪಣ್ಣ, ಖಜಾಂಚಿ ಬಡುವಂಡ ಸುಬ್ರಮಣಿ, ನಿರ್ದೇಶಕರುಗಳಾದ ಈರಮಂಡ ಸೋಮಣ್ಣ, ನಂದೇಟಿರ ರಾಜಾಮಾದಪ್ಪ, ಪಳಗಂಡ ವಿಠಲ್ ಪೂವಯ್ಯ, ಮೂಡೇರ ಹರೀಶ್ ಕಾಳಯ್ಯ, ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಬಿದ್ದಂಡ ರೇಖಾ ಚಿಣ್ಣಪ್ಪ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಪಿ.ಎಂ. ದೇವಕಿ, ಪ್ರೌಢಶಾಲಾ ಮುಖ್ಯ ಶಿಕ್ಷಕಿ ಎ.ಎಸ್.ರಶ್ಮಿ ಮತ್ತು ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ರೇಷ್ಮಾ ಉಪಸ್ಥಿತರಿದ್ದರು.

# ಅಡಿಕೆ ಕಳ್ಳರ ಹಾವಳಿ

## ಅಡಿಕೆ ಕದ್ದು ಪರಾರಿ

ಮಡಿಕೇರಿ, ನ.5– ಸಂಪಾಜೆ ಸಮೀಪ ಅರಂತೋಡು ಭಾಗದಲ್ಲಿ ಅಡಿಕೆ ಕಳ್ಳರ ಹಾವಳಿ ಹೆಚ್ಚಾಗಿದ್ದು, ಬೆಳೆಗಾರರು ಆತಂಕ ವ್ಯಕ್ತಪಡಿಸಿದ್ದಾರೆ. ಅಡ್ತಲೆ ನಿವಾಸಿ ಮೋಹನ್ ಪಂಜದಬೈಲು ಎಂಬವರ ತೋಟದಿಂದ ಅಡಿಕೆ ಕಳ್ಳತನವಾಗಿದೆ.

ತೋಟದಲ್ಲಿ ಇಂಟರ್ ಮಂಗಳ ಅಡಿಕೆ ಬೆಳೆಯಲಾಗಿದ್ದು, ಕೈಗೆಟುಕುವಷ್ಟು ಎತ್ತರದಲ್ಲಿ ಅಡಿಕೆ ಗೊನೆಗಳಿವೆ. ಇವುಗಳನ್ನು ಮಾತ್ರವಲ್ಲದೆ ಇತರ ಮರಗಳಿಂದ ಕೂಡ ಹಣ್ಣಾದ ಅಡಿಕೆಗಳನ್ನು ಕಳ್ಳತನ ಮಾಡಲಾಗಿದೆ. ಮೋಹನ್ ಅವರು ಪೊಲೀಸರಿಗೆ ದೂರು ನೀಡಿದ್ದು, ಕಳ್ಳರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅಡಿಕೆ ಬೆಳೆಗಾರರು ಕೂಡ ಒತ್ತಾಯಿಸಿದ್ದಾರೆ.

# ಚಾಲಕನ ನಿಯಂತ್ರಣ ತಪ್ಪಿ ಮನೆಯ ಅಂಗಳಕ್ಕೆ ಉರುಳಿ ಬಿದ್ದ ಕಾರು

## ಸಣ್ಣ–ಪುಟ್ಟ ಗಾಯಗಳಿಂದ ಮೂವರು ಪಾರು

ಮಡಿಕೇರಿ,ನ.5– ಹೋಂ ಸ್ಟೇ ಒಂದಕ್ಕೆ ಬಂದಿದ್ದ ಪ್ರವಾಸಿಗರ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಬೇರೊಂದು ಮನೆಯ ಅಂಗಳಕ್ಕೆ ಉರುಳಿ ಬಿದ್ದ ಘಟನೆ ಮಡಿಕೇರಿ–ಮೇಕೇರಿ ರಸ್ತೆಯ 1ನೇ ಮೈಲ್‌ನಲ್ಲಿ ನಡೆದಿದೆ.



ಕಾರಿನಲ್ಲಿದ್ದ 3 ಮಂದಿ ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶನಿವಾರ ರಾತ್ರಿ ತಮಿಳುನಾಡು ನೋಂದಣಿ ಹೊಂದಿದ ಕಾರಿನಲ್ಲಿ 3 ಮಂದಿ ಮೇಕೇರಿ ಬಳಿಯ 1ನೇ ಮೈಲ್‌ನಲ್ಲಿರುವ ಹೋಂ ಸ್ಟೇ ಒಂದಕ್ಕೆ ಆಗಮಿಸಿದ್ದರು. ಹೋಂ ಸ್ಟೇಗೆ ತೆರಳುವ ಏರು ರಸ್ತೆಯಲ್ಲಿ ಏಕಾಏಕಿ ಕಾರಿನ ಇಂಜಿನ್ ಬಂದ್ ಆಗಿದೆ. ಇದರಿಂದ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು, ರಸ್ತೆಯ ಪಕ್ಕದಲ್ಲೇ ಇರುವ ದಿ.ಸೈಯದ್ ಲತೀಫ್ ಎಂಬವರ ಮನೆಯ ಅಂಗಳಕ್ಕೆ ಉರುಳಿ ಬಿದ್ದಿದೆ. ಈ ವೇಳೆ ಕಾರು ಜಖಂ ಆಗಿದ್ದು, ಕಾರಿನಲ್ಲಿದ್ದ 3 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಹೈವೇ ಪೆಟ್ರೋಲ್ ಪೊಲೀಸ್ ಸಿಬ್ಬಂದಿಗಳು ಆಗಮಿಸಿ ಪರಿಶೀಲನೆ ನಡೆಸಿದರು.

# ನಕಲಿ ಫೇಸ್ಬುಕ್ ಖಾತೆ ಮೂಲಕ ಮಹಿಳೆಯರಿಂದ ಹಣ ಪಡೆದು ಮೋಸ ಮಾಡುತ್ತಿದ್ದವನ ಸೆರೆ

ಗೋಣಿಕೊಪ್ಪ, ನ.5– ನಕಲಿ ಫೇಸ್ಬುಕ್ ಖಾತೆ ತೆರೆದು ಮಹಿಳೆಯರಿಂದ ಹಣ ಪಡೆದು ಮೋಸ ಮಾಡುತ್ತಿದ್ದ ನಾಪೋಕ್ಲು ಮೂಲದ ವ್ಯಕ್ತಿ



ನೌಷದ್‌ನನ್ನು ಪೊನ್ನಂಪೇಟೆ ಪೊಲೀಸರು ಬಂಧಿಸಿದ್ದಾರೆ.

ಫೇಸ್ಬುಕ್‌ನಲ್ಲಿ ಹಲವು ನಕಲಿ ಖಾತೆಗಳನ್ನು ತೆರೆದು ಹುಡುಗಿಯರಿಗೆ ಸಂದೇಶಗಳನ್ನು ಕಳುಹಿಸಿ ಸ್ನೇಹ ಸಂಪಾದಿಸಿ ನಂತರ ಹಣ ಪಡೆದು ಮೋಸ ಮಾಡುತ್ತಿದ್ದ ಎನ್ನಲಾಗಿದೆ. ನೊಂದ ಮಹಿಳೆಯಿಂದ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ಆರೋಪಿಯನ್ನು ನಾಪೋಕ್ಲುವಿನ ಮನೆಯಲ್ಲಿ ಬಂಧಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

# ನಾಪೋಕ್ಲು ಪೊಲೀಸ್ ಠಾಣೆ ಪಿಎಸ್‌ಐ ಅಧಿಕಾರ ಸ್ವೀಕಾರ

ನಾಪೋಕ್ಲು, ನ.5– ಸ್ಥಳೀಯ ಪೊಲೀಸ್ ಠಾಣೆಗೆ ನೂತನ ಕ್ರೈಂ ಪಿಎಸ್‌ಐ ಆಗಿ ಬಿ .ಶ್ರೀಧರ ಅವರನ್ನು ವರ್ಗಾವಣೆ ಮಾಡಲಾಗಿದೆ.



ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು ಇದೀಗ ಪಿಎಸ್‌ಐ ಆಗಿ ಬಡ್ತಿ ಪಡೆದು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಖಾಲಿ ಇದ್ದ ಕ್ರೈಂ ಪಿಎಸ್‌ಐ ಹುದ್ದೆಗೆ ನೇಮಕಗೊಂಡು ಅಧಿಕಾರ ವಹಿಸಿಕೊಂಡಿದ್ದಾರೆ. ಶ್ರೀಧರ್ ಅವರು 1998 ರಿಂದ 2004 ರವರೆಗೆ ಇದೇ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿ ಬಳಿಕ ವಿರಾಜಪೇಟೆಯ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ನಂತರ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇವರು ದಕ್ಷಿಣ ಕನ್ನಡ ಜಿಲ್ಲೆಯ ಸಂಪಾಜೆ ಗ್ರಾಮದವರು.


# ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ

ಮಡಿಕೇರಿ, ನ.5– ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಶಾಲನಗರ ಗ್ರಾಮಾಂತರ ಠಾಣಾ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಕುಶಾಲನಗರ ನಿವಾಸಿಗಳಾದ ಗಣೇಶ್ (24) ಮತ್ತು ದೀಪು(24) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.

ಬಂಧಿತರಿಂದ 140 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಕುಶಾಲನಗರ ಸುಂದರ ನಗರದಿಂದ ಕುಡ್ಲೂರು ರಸ್ತೆಯಲ್ಲಿ ನಿಷೇಧಿತ ಮಾದಕ ವಸ್ತು ಮಾರಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಲಾಗಿದೆ ಮಡಿಕೇರಿ ಉಪ ವಿಭಾಗದ ಡಿವೈಎಸ್ಪಿ ಎಂ.ಜಗದೀಶ್, ಕುಶಾಲನಗರ ಗ್ರಾಮಾಂತರ ಠಾಣಾ ಪಿಎಸ್‌ಐ ಮೋಹನ್ ರಾಜು ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

# ಶತಾಯುಷಿ ಅಪ್ಪಾಜಿ ನಿಧನ

ಗೋಣಿಕೊಪ್ಪ, ನ.5– ಗೋಣಿಕೊಪ್ಪ ಪುರಸಭೆಯ ಮೊದಲ ಅಧ್ಯಕ್ಷ ಶತಾಯುಷಿ ಬುಟ್ಟಿಯಂಡ ಎ. ಅಪ್ಪಾಜಿ (102) ಭಾನುವಾರ ನಿಧನರಾದರು.



ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಬುಟ್ಟಂಗಾಲ ಗ್ರಾಮದಲ್ಲಿ ನೆರವೇರಿತು. ಗೋಣಿಕೊಪ್ಪದಲ್ಲಿ ಮೊದಲ ಬಾರಿಗೆ ಚಿತ್ರಮಂದಿರ ತೆರೆಯಲು ಇವರು ಕಾರಣಕರ್ತರಾಗಿದ್ದರು. ಸ್ಥಳೀಯ ಅಭಿವೃದ್ಧಿಯಲ್ಲಿ ಇವರು ತೊಡಗಿಕೊಂಡಿದ್ದರು. ಪ್ರಭಾ ಟಾಕೀಸ್ ತೆರೆಯುವ ಮೂಲಕ ಸಿನಿಮಾ ರಂಗಕ್ಕೆ ಬೆಂಬಲ ನೀಡಿದ್ದರು. ಇವರ ನಿಧನಕ್ಕೆ ಕಗ್ಗಟ್ನಾಡ್ ಹಿರಿಯ ನಾಗರಿಕ ವೇದಿಕೆ ಮೂಲಕ ಸಂತಾಪ ಸೂಚಿಸಲಾಯಿತು.

# ನೌಕರರಿಂದ ಸರ್ಕಾರಿ ಸೇವೆಗಳ ಉತ್ತಮ ಕಾರ್ಯ ನಿರ್ವಹಣೆ



ಚಾಮರಾಜನಗರ, ನ.5– ರಾಜ್ಯದಲ್ಲಿ ಸರ್ಕಾರಿ ಸೇವೆಗಳನ್ನು ನೌಕರರು ಉತ್ತಮವಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ಜೊತೆಗೆ ನೌಕರರ ಮಕ್ಕಳ ಹೆಚ್ಚಿನ ವಿದ್ಯಾಭಾಸಕ್ಕೆ ಸಂಘದ ವತಿಯಿಂದ ಅನುಕೂಲಗಳನ್ನು ಮಾಡಲಾಗುತ್ತಿದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಿಂದ 2020ನೇ ವರ್ಷದಿಂದ ನಗದು ಪ್ರತಿಭಾ ಪುರಸ್ಕಾರ 6000 ರಾಜ್ಯದ ಸರ್ಕಾರಿ ನೌಕರರ ಮಕ್ಕಳಿಗೆ ನೀಡುತ್ತಾ ಬಂದಿದ್ದೇವೆ ಎಂದು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ತಿಳಿಸಿದ್ದಾರೆ.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಭಾನುವಾರ ನಡೆದ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಜಿಲ್ಲಾ ಘಟಕದ ವತಿಯಿಂದ ಚಾಮರಾಜನಗರ ಜಿಲ್ಲೆಯ ನೂತನ ಶಾಸಕರು, ಸಚಿವರಿಗೆ ಹಾಗೂ ಸರ್ಕಾರಿ ನೌಕರರ ಪ್ರತಿಭಾವಂತ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪ್ರತಿಭಾ ಪುರಸ್ಕಾರವನ್ನು ನೀಡಿ ಅವರು ಮಾತನಾಡಿದರು. ಸಂಘಗಳು ಜಿಲ್ಲೆಯಲ್ಲಿ 138 ವಿದ್ಯಾರ್ಥಿಗಳು 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಅಂತಹ ಮಕ್ಕಳನ್ನು ಗುರುತಿಸುವುದು ನಮ್ಮೆಲ್ಲರ ಕರ್ತವ್ಯ. ಒಂದು ಸಂಘವನ್ನು ಬೆಳೆಸುವುದು ಬಹಳ ಕಷ್ಟದ ಕೆಲಸ ರಾಜ್ಯದಲ್ಲಿಯೇ ಕರ್ನಾಟಕ ಸರ್ಕಾರಿ ನೌಕರರ ಸಂಘವು ನೌಕರರಿಗೆ ಅನುಕೂಲಗಳನ್ನು ಮಾಡುತ್ತ ಬಂದಿದೆ. ವಿದ್ಯಾರ್ಥಿಗಳು ನಿಮಗೆ ಉತ್ತೇಜನ ನೀಡುವ ತಂದೆ, ತಾಯಿಯನ್ನು ಮರೆಯಬಾರದು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ 7ನೇ ವೇತನ ಆಯೋಗವನ್ನು ಕೊಡಿಸುವ ನಿಟ್ಟಿನಲ್ಲಿ ಸಂಘವು ಶ್ರಮಿಸುತ್ತಿದೆ. ಈ ಸಂಘವು 102 ವರ್ಷಗಳಿಂದ ನೌಕರರ ಅಭಿವೃದ್ಧಿಗೆ ಹೋರಾಟವನ್ನು ಮಾಡುತ್ತಲೇ ಬಂದಿದೆ. ಪ್ರತಿವರ್ಷವು ನೌಕರರು ನೀಡುವ 200 ರೂ. ನಾಲ್ಕು ವರ್ಷದಲ್ಲಿ 27 ಕೋಟಿ ರೂ. ಉಳಿಸಲು ಕಾರಣವಾಗಿದೆ. ಪ್ರತಿಯೊಬ್ಬ ಸದಸ್ಯರು ಸಂಘಟನೆಯನ್ನು ನಮ್ಮ ಕುಟುಂಬವೆಂದು ತಿಳಿಯಬೇಕು. ಶಿಕ್ಷಕ ಸಂಘ ಬೇರೆಯಲ್ಲ ಅದುವೇ ಸರ್ಕಾರಿ ಸಂಘದ ಒಂದು ಭಾಗ. ಎಲ್ಲರೂ ಜೊತೆಯಾಗಿ ಸಂಘದ ಕೆಲಸಗಳನ್ನು ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಕೊಳ್ಳೇಗಾಲ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಸರ್ಕಾರಿ ನೌಕರರು ರಾಜ್ಯದ ಸಮಗ್ರ ಅಭಿವೃದ್ಧಿಗೆ ಬಹಳಷ್ಟು ಶ್ರಮಿಸುತ್ತಿದ್ದಾರೆ. ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದಲ್ಲಿ ಪ್ರಮಾಣಿಕತೆಯನ್ನು, ಮೌಲ್ಯಗಳನ್ನು ಬಯಸುತ್ತಾರೆ. ಇವತ್ತಿನ ಸಮಾಜದಲ್ಲಿ ಜವಾಬ್ದಾರಿಯಾಗಿ ಸೇವೆಗಳನ್ನು ನೀಡುವುದು ಕಷ್ಟದ ಕೆಲಸ. ದೇಶದ ಅಭಿವೃದ್ಧಿ ಮಾಡಲು ಮೌಲ್ಯಗಳು, ಪ್ರಮಾಣಿಕವಾಗಿ ನಿರ್ವಹಿಸಬೇಕಾಗುತ್ತದೆ ಎಂದರು.

ಚಾಮರಾಜನಗರ ಜಿಲ್ಲಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಸರ್ಕಾರಿ ನೌಕರರ ಸಂಘವೆಂದರೆ ಎಲ್ಲರಿಗೂ ಸ್ಪಂದಿಸುವಂತೆ ಇರಬೇಕು. ಜಿಲ್ಲೆ ಸಂಘವು ನೌಕರರಿಗೆ ಅನುಕೂಲಗಳನ್ನು ಮಾಡುತ್ತಿದೆ. ಜೊತೆಗೆ ರಾಜ್ಯ ಸಂಘದ ಬೆಂಬಲ ನಮ್ಮ ಜಿಲ್ಲೆಗೆ ಹೆಚ್ಚಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಚಿದಂಬರ, ಕೇಂದ್ರ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ್, ಖಜಾಂಚಿ ಆರ್. ಶ್ರೀನಿವಾಸ್, ಅಧ್ಯಕ್ಷ ಮಲ್ಲಿಕಾರ್ಜುನ ಬಿ.ಬಳ್ಳಾರಿ, ಗೌರವಾಧ್ಯಕ್ಷ ಬಿ.ಹೆಚ್.ವೆಂಕಟೇಶಯ್ಯ, ಹಿರಿಯ ಉಪಾಧ್ಯಕ್ಷ ಎಂ.ವಿ. ರುದ್ರಪ್ಪ, ಬಸವರಾಜು, ಉಪಾಧ್ಯಕ್ಷ ಆರ್.ಮೋಹನ್ ಕುಮಾರ್, ಚಾಮರಾಜನಗರ ಜಿಲ್ಲಾ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಮಹದೇವಸ್ವಾಮಿ, ಖಜಾಂಚಿ ಎಸ್.ಮಹದೇವಯ್ಯ, ಗೌರವಾಧ್ಯಕ್ಷ ಹೆಚ್.ಎಸ್.ಶಿವಮೂರ್ತಿ, ಕಾರ್ಯಾಧ್ಯಕ್ಷ ಆರ್.ಸಿದ್ದರಾಜು, ಉಪಾಧ್ಯಕ್ಷ ಶೈಲೇಂದ್ರ, ಎಂ.ಸಿ.ಮಂಜುನಾಥ್, ಜಿ.ವಿನಯ್, ಸಿ.ಎಂ. ಶಿವಕುಮಾರ್, ಎಂ.ಆರ್.ಯೋಗೇಶ್, ಮಹೇಂದ್ರ ಕೆ.ಎಸ್, ಮಲ್ಲಿಕಾರ್ಜುನ.ಸಿ ಹಾಗೂ ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ, ಹನೂರು ಅಧ್ಯಕ್ಷರು ಸದಸ್ಯರು ಉಪಸ್ಥಿತರಿದ್ದರು.

ಶಾಸಕರಾದ ಎ.ಆರ್.ಕೃಷ್ಣಮೂರ್ತಿರವರು ಮತ್ತು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ 90% ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಮತ್ತು ಜಿಲ್ಲೆಯಿಂದ ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುವ ಸರ್ಕಾರಿ ನೌಕರರಾದ ಎ.ಎಂ. ಪ್ರಭಾಕರ್, ಮಂಜುನಾಥ್, ಪ್ರವೀಣ್ ಕುಮಾರ್, ಆರ್. ನಂದಿನಿ, ಶ್ವೇತಾದ್ರಿ, ಮಹಾಂತೇಶ್ ಹಾಗೂ ವೀಣಾ ಕೌಶಲ್ ಅವರನ್ನು ಗೌರವಿಸಲಾಯಿತು.

# ಚಾ.ನಗರದಲ್ಲಿ ವಿಜಯೇಂದ್ರ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ನ.5– ಶಾಸಕರಾದ ಬಿ.ವೈ ವಿಜಯೇಂದ್ರ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ವಿಜಯೇಂದ್ರ ಅಭಿಮಾನಿ ಬಳಗದ ಮೂಡ್ಲುಪುರ ನಂದೀಶ್ ಅವರ ನೇತೃತ್ವದಲ್ಲಿ ನಗರದ ಜೋಡಿರಸ್ತೆಯಲ್ಲಿರುವ ಮೂಡಲಧ್ವನಿ ವೃದ್ಧಾಶ್ರಮದಲ್ಲಿ ವೃದ್ಧರಿಂದ ಕೇಕ್ ಕತ್ತರಿಸುವ ಮೂಲಕ ವಿಜಯೇಂದ್ರ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ನಂತರ ವೃದ್ಧರಿಗೆ ಉಪಾಹಾರ ವ್ಯವಸ್ಥೆ ಮಾಡಲಾಯಿತು. ನಂತರ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಜಯೇಂದ್ರ ಅವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ವಿಶೇಷಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದ ನೇತೃತ್ವ ವಹಿಸಿದ ಮೂಡ್ಲುಪುರ ನಂದೀಶ್ ಮಾತನಾಡಿ, ಜನಪ್ರಿಯ ಶಾಸಕ ವಿಜಯೇಂದ್ರ ಅವರಿಗೆ ಶ್ರೀಚಾಮರಾಜೇಶ್ವರ, ಶ್ರೀಚಾಮುಂಡೇಶ್ವರಿ ಆರೋಗ್ಯ, ಆಯುಸ್ಸು ಕರುಣಿಸಲಿ. ಮುಂದಿನ ದಿನಗಳಲ್ಲಿ ರಾಜ್ಯ ಮುಖ್ಯಮಂತ್ರಿಯಾಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಶಿವರಾಜ್ ಸಿದ್ದಯ್ಯನಪುರ, ಶ್ರೀನಾಥ್, ಶಿವು, ಮಹೇಶ್ ಕುಮಾರ್, ನಾಗಮಲ್ಲೇಶ್, ಮಹದೇವಸ್ವಾಮಿ, ಮಹೇಶ್, ನಿರೇಶ್, ಸಚಿ, ಪ್ರಸಾದ್ ಡೈರಿ, ಜಯಂತ್, ಮೋಹನ್, ಮಲ್ಲು ಇತರರಿದ್ದರು.

# ಅಧಿಕಾರಿಗಳಿಲ್ಲದೆ ಗ್ರಾಪಂ ಅಭಿವೃದ್ಧಿ ಕಾರ್ಯಗಳು ಸ್ಥಗಿತ

## ರಸ್ತೆ, ಚರಂಡಿ, ಇ–ಸ್ವತ್ತು ಕೆಲಸಗಳಿಗೆ ಅಲೆದಾಡುತ್ತಿರುವ ಗ್ರಾಮಸ್ಥರು



ಕಳೆದ ಒಂದು ತಿಂಗಳಿಂದ ಪ್ರಭಾರ ಪಿಡಿಓ ಆಗಿ ಅಧಿಕಾರವನ್ನು ಸ್ವೀಕರಿಸಿದ್ದು, ಗ್ರಾಮ ಪಂಚಾಯತಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೇನೆ. ಚರಂಡಿ ಹೂಳನ್ನು ತೆಗೆಯುವ ಕೆಲಸವನ್ನು ಮಾಡಲಾಗುತ್ತಿದ್ದು, ಗುತ್ತಿಗೆದಾರ ಅಸಮರ್ಪಕವಾಗಿ ಮಾಡಿರುವ ಕಡೆಗಳಲ್ಲಿ ಮತ್ತೆ ಸ್ವಚ್ಛತೆ ಮಾಡಿಸುವ ಕೆಲಸ ಮಾಡಲಾಗುವುದು. ನರೇಗಾ ಯೋಜನೆಯಲ್ಲಿ ಕೆಲಸಗಳನ್ನು ಕೂಲಿ ಕಾರ್ಮಿಕರಿಗೆ ನೀಡುವ ಕಾರ್ಯವು ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು.

- ಬಸವಣ್ಣ, ಪ್ರಭಾರ ಪಿಡಿಓ, ಯಳಂದೂರು

ಯಳಂದೂರು, ನ.5– ಗ್ರಾಮಗಳು ಅಭಿವೃದ್ಧಿ ಹೊಂದಿದರೆ ದೇಶದ ಅಭಿವೃದ್ಧಿ ಎಂದು ಸರ್ಕಾರ ಆಗಾಗ ಹೇಳುತ್ತಿರುತ್ತದೆ. ಆದರೆ ಅಧಿಕಾರಿಗಳ ಕೊರತೆಯಿಂದ ಯಾವುದೇ ಅಭಿವೃದ್ಧಿ ಕಾರ್ಯಗಳಾಗದೆ ಗ್ರಾಮೀಣ ಭಾಗದ ಜನರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ತಾಲೂಕಿನ ದುಗ್ಗಹಟ್ಟಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಕಳೆದ ಹಲವು ತಿಂಗಳಿಂದ ಕಾಯಂ ಪಿಡಿಓ ಇಲ್ಲದೇ ಮೂಲಭೂತ ಸೌಲಭ್ಯ, ಜತೆಗೆ ನರೇಗಾ ಯೋಜನೆ ಕಾಮಗಾರಿಗಳು ನಡೆಯುತ್ತಿಲ್ಲ, ಇದರಿಂದ ಕೂಲಿ ಕಾರ್ಮಿಕರಿಗೆ ಕೂಲಿಯೂ ಇಲ್ಲ ಜೊತೆಗೆ ಪಂಚಾಯಿತಿ ಅಭಿವೃದ್ಧಿಯ ಕಾರ್ಯಗಳು ವಿಳಂಬವಾಗಿರುವ ಕಾರಣ ಜನರು ಸೌಲಭ್ಯಕ್ಕಾಗಿ ಪರದಾಡುತ್ತಿದ್ದಾರೆ.

ದುಗ್ಗಹಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಂದಹಳ್ಳಿ, ಮೆಲ್ಲಹಳ್ಳಿ, ವೈ.ಕೆ.ಮೋಳೆ ಸೇರಿರುವ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ, ಇ–ಸ್ವತ್ತು ಸೇರಿದಂತೆ ಹಲವು ಸಮಸ್ಯೆಗಳಿದ್ದು, ಇದರಿಂದ ಜನರು ಪಂಚಾಯಿತಿಗೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಾಕಷ್ಟು ಬಾರಿ ಮೇಲಾಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾರ್ಯದರ್ಶಿಯನ್ನು ಪ್ರಭಾರ ಪಿಡಿಓ ಆಗಿ ನೇಮಕ ಮಾಡಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಕೆಲಸ ಕಾರ್ಯಗಳು ಆಗುತ್ತಿಲ್ಲ.

**ರಸ್ತೆ ಮೇಲೆ ಹರಿಯುತ್ತಿರುವ ಚರಂಡಿ ನೀರು:** ತಾಲೂಕಿನ ದುಗ್ಗಹಟ್ಟಿ ಗ್ರಾಮದಲ್ಲಿ ಅನೈರ್ಮಲ್ಯ ತಾಂಡವವಾಡುತ್ತಿದ್ದು, ರಸ್ತೆ ಮೇಲೆ ಚರಂಡಿ ನೀರು ನಿರಂತರವಾಗಿ ಹರಿಯುತ್ತಿದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿ ನಾಗರಿಕರನ್ನು ಕಾಡುತ್ತಿದೆ. ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಈ ರೀತಿ ಪರಿಸ್ಥಿತಿ ನಿರ್ಮಾಣವಾಗಿರುವುದು ದೊಡ್ಡ ದುರಂತವಾಗಿದ್ದು, ಚರಂಡಿಯ ಅಕ್ಕಪಕ್ಕದಲ್ಲಿ ವಾಸ ಮಾಡುತ್ತಿರುವವರ ಪಾಡು ಹೇಳತೀರದಾಗಿದೆ. ತಮಗೆ ಬೇಕಾದ ಕಡೆ ಮಾತ್ರ ಚರಂಡಿಯನ್ನು ಸ್ವಚ್ಛತೆ ಮಾಡಿ ಹೋದರೆ ಸಾಕು, ಇನ್ನೂ ಉಳಿದ ಕಡೆಗಳಲ್ಲಿ ಮುಖ ಹಾಕುವುದೇ ಇಲ್ಲ. ಇದರಿಂದ ಚರಂಡಿ ನೀರು ನಿಂತಲ್ಲೇ ನಿಂತಿರುವುದರಿಂದ ಕಸವು ಸೇರಿ ಕೊಳೆಯುತ್ತಿದ್ದು, ದುರ್ವಾಸನೆ ಬೀರುತ್ತಿದೆ, ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಸುತ್ತಮುತ್ತಲಿನ ಮನೆಗಳ ವೃದ್ಧರು ಹಾಗೂ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುವ ಆತಂಕ ನಿರ್ಮಾಣವಾಗಿದೆ ಎಂದು ನಿವಾಸಿಗಳಾದ ಮಹೇಶ್, ಶಿವು, ರವಿ ಸೇರಿದಂತೆ ಹಲವರ ಆರೋಪವಾಗಿದೆ.



# ತೇಜಸ್ವಿನಿ ನಿಧನ

ಚಾಮರಾಜನಗರ, ನ.5– ನಗರದ ಹೌಸಿಂಗ್ ಬೋರ್ಡ್ ನಿವಾಸಿ ಹಾಗೂ ದಾಸಬಣಜಿಗರ ಸಂಘದ ಅಧ್ಯಕ್ಷ ಜಿವಿಎನ್ ಶ್ರೀನಿವಾಸಶೆಟ್ಟರ ಪುತ್ರಿ ತೇಜಸ್ವಿನಿ (44) ಶನಿವಾರ ರಾತ್ರಿ ಅನಾರೋಗ್ಯದಿಂದ ನಿಧನರಾದರು.



ಮೃತರಿಗೆ ತಂದೆ ಜಿವಿಎನ್ ಶ್ರೀನಿವಾಸಶೆಟ್ಟಿ, ತಾಯಿ ಕಲಾವತಿ ಹಾಗೂ ಇಬ್ಬರು ಸಹೋದರರಿದ್ದಾರೆ. ನಗರದ ಹೊರವಲಯ ದಲ್ಲಿನ ದಾಸಬಣಜಿಗರ ಚಿರಶಾಂತಿ ಧಾಮದಲ್ಲಿ ಭಾನುವಾರ ಬೆಳಗ್ಗೆ ಅಂತ್ಯಕ್ರಿಯೆ ನೆರವೇರಿತು.

# ಚಾವಟಿಯಿಂದ ಹೊಡೆದುಕೊಳ್ಳುವ ಪ್ರತಿಭಟನೆ



ಚಾಮರಾಜನಗರ, ನ.5– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 54 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಚಾವಟಿಯಿಂದ ಹೊಡೆದುಕೊಳ್ಳುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾವಟಿ ಯಿಂದ ಹೊಡೆದುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ ನಂಜುಂಡಸ್ವಾಮಿ, ಚಾ.ಹ.ರಾಮು, ರಾಮಸಮುದ್ರ ಸುರೇಶ್, ತಾಂಡವಮೂರ್ತಿ, ವೀರಭದ್ರ, ಇತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

## ನೀಲನಕ್ಷೆ ತಯಾರಿಸಿ

ಜನರಿಗೆ ತಲುಪಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಈ ಬಾರಿ ಬರಗಾಲವಿದ್ದ ಕಾರಣ ಅದ್ದೂರಿಯಲ್ಲದ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಗಿದೆ. ಆದರೆ ಮುಂದಿನ ಬಾರಿ ದಸರಾವನ್ನು ಅದ್ದೂರಿಯಾಗಿ ಆಚರಣೆ ಮಾಡೋಣ. ಇದಕ್ಕಾಗಿ ಮುಂದಿನ ಬಾರಿ ಜನರ ಜೊತೆ ಪೂರ್ವಭಾವಿ ಸಭೆಗಳನ್ನು ನಡೆಸಿ ದಸರಾವನ್ನು ಮತ್ತಷ್ಟು ಅರ್ಥಪೂರ್ಣಗೊಳಿಸೋಣ ಎಂದು ಹೇಳಿದರು. ಈ ವೇಳೆ ಸಭೆಯಲ್ಲಿ ಭಾಗಿಯಾಗಿದ್ದ ಎಲ್ಲಾ ಅಧಿಕಾರಿಗಳ ಜೊತೆ ಸಿದ್ದರಾಮಯ್ಯ ಗ್ರೂಪ್ ಫೋಟೋಗೆ ಪೋಸ್ ನೀಡಿದರು. ತರುವಾಯ ಅಧಿಕಾರಿಗಳ ಜೊತೆ ಔತಣ ಕೂಟದಲ್ಲಿ ಭಾಗಿಯಾಗಿದ್ದರು.

ದಸರಾ ಮಹೋತ್ಸವದ ನಂತರ ದಸರಾ ಯಶಸ್ವಿಗೆ ಕಾರಣರಾದ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಔತಣಕೂಟ ಆಯೋಜಿಸುವುದು ರೂಢಿ. ಅದರಂತೆ ಸಿದ್ದರಾಮಯ್ಯ ಅಧಿಕಾರಿಗಳಿಗೆ ಇಂದು ಔತಣ ಕೂಟ ಆಯೋಜಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ರೆಹಮಾನ್ ಖಾನ್, ಡಿವಿಜನಲ್ ಕಮಿಷನರ್ ಪ್ರಕಾಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಗ್ಯಾರಂಟಿ ಯೋಜನೆ ಘೋಷಣೆ

ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಕಲಬುರಗಿಯಲ್ಲಿ ಕೆಇಎ ಪರೀಕ್ಷೆಯಲ್ಲಿ ತಾಳಿ, ಕಾಲುಂಗುರ ಬಿಚ್ಚಿಸಿದ್ದು, ಬ್ಲೂಟೂತ್ ಬಳಕೆ ಕುರಿತು ತನಿಖೆ ಸೂಚಿಸಲಾಗುವುದು ಎಂದರು.

**ಅಧಿಕಾರಿ ಕೊಲೆ ಕುರಿತು ತನಿಖೆ:** ಬೆಂಗಳೂರಲ್ಲಿ ನಡೆದಿರುವ ಗಣಿಗಾರಿಕೆ ಇಲಾಖೆ ಅಧಿಕಾರಿ ಪ್ರತಿಮಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿ, ಒಂಟಿಯಾಗಿದ್ದ ಮಹಿಳಾ ಅಧಿಕಾರಿ ಕೊಲೆಯಾಗಿರುವ ಬಗ್ಗೆ ಗಮನಕ್ಕೆ ಬಂದಿದೆ. ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸೂಕ್ತ ತನಿಖೆ ನಡೆದ ನಂತರ ಕಾರಣ ತಿಳಿದು ಬರುತ್ತದೆ ಎಂದರು.

**ಅವರಿಗೂ ತಮಾಷೆ ಮಾಡಲು ಬರುತ್ತಾ?:** ನಾಳೆಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದಾದರೆ ಜೆಡಿಎಸ್‌ನ 19 ಶಾಸಕರ ಬೆಂಬಲ ನೀಡುವುದಾಗಿ ಮಾಜಿ ಸಿಎಂ ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ ಅವರಿಗೂ ವ್ಯಂಗ್ಯ ಮಾಡಲು ಬರುತ್ತದೆ ಎನ್ನುವುದೇ ಖುಷಿಯ ಸಂಗತಿ. ಅವರು ಮೊದಲು ಎನ್‌ಡಿಎ ಬಿಟ್ಟು ಹೊರಬರಲಿ ನೋಡೋಣ ಎಂದರು.

**ಈಶ್ವರಪ್ಪ ಸವಕಲು ನಾಣ್ಯ:** ಕಾಂತರಾಜು ವರದಿ ಸುಟ್ಟು ಹಾಕಬೇಕೆಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಕಾಂತರಾಜು ವರದಿ ಜಾರಿ ಮಾಡಿ ಎಂದು ಈಶ್ವರಪ್ಪ ಭಾಷಣ ಮಾಡಿದ್ದರು. ಅವರ ಮಾತಿಗೆ ಬೆಲೆಯೂ ಇಲ್ಲ, ಕಿಮ್ಮತ್ತೂ ಇಲ್ಲ. ಬಿಜೆಪಿಯಲ್ಲಿಯೇ ಅವರು ಸವಕಲು ನಾಣ್ಯ ಎಂದು ಟಿಕೆಟ್ ನೀಡಿಲ್ಲ. ಅವರ ಮಾತುಗಳಿಗೆ ಏನು ಬೆಲೆ ಇದೆ. ವರದಿ ನೀಡಿದರೆ ಅದನ್ನು ಸ್ವೀಕರಿಸುತ್ತೇವೆ ಎಂದರು. ವರದಿಯಲ್ಲಿ ಏನಿದೆ ಎಂದು ನಮಗೆ ತಿಳಿದಿಲ್ಲ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಈ ಸಂದರ್ಭದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಪುಟ್ಟರಂಗಶೆಟ್ಟಿ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಇನ್ನಿತರರು ಉಪಸ್ಥಿತರಿದ್ದರು.

## ಭಾರತಕ್ಕೆ ಜಯ

ನಿಧಾನಗತಿ ಬ್ಯಾಟಿಂಗ್ ಮಾಡಿದ ಶ್ರೇಯಸ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 87 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 77 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಆಟವಾಡಿದ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 49ನೇ ಶತಕ ಸಿಡಿಸಿ ಸಂಭ್ರಮಿಸಿದರು. ಆ ಮೂಲಕ ಕ್ರಿಕೆಟ್ ದೇವರು ಸಚಿನ್ ತೆಂಡುಲ್ಕರ್ ದಾಖಲೆ ಸರಿಗಟ್ಟಿದರು. ಉಳಿದಂತೆ ಸೂರ್ಯಕುಮಾರ್ ಯಾದವ್ 22, ರವೀಂದ್ರ ಜಡೇಜಾ 29 ರನ್ ಗಳಿಸಿ ಅಜೇಯರಾಗಿ ಉಳಿದರೇ, ವಿರಾಟ್ ಕೊಹ್ಲಿ 121 ಎಸೆತಗಳಲ್ಲಿ 10 ಬೌಂಡರಿ ಒಳಗೊಂಡ 101 ರನ್ ಸಿಡಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ ಭಾರತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 326 ರನ್ ಗಳಿಸಿತು. ದಕ್ಷಿಣ ಆಫ್ರಿಕಾ ಪರ ಲುಂಗಿ ಎನ್ಗಿಡಿ, ಮಾರ್ಕೊ ಜಾನ್ಸೆನ್, ಕಗಿಸೊ ರಬಾಡ, ಕೇಶವ ಮಹಾರಾಜರು, ತಬ್ರೈಜ್ ಶಮ್ಸಿ ತಲಾ ಒಂದೊಂದು ವಿಕೆಟ್ ಉರುಳಿಸಿದರು. 327 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಭಾರತೀಯ ಬೌಲರ್‌ಗಳ ಕರಾರುವಕ್ ದಾಳಿ ತತ್ತರಿಸಿ 27.1 ಓವರ್‌ಗಳಲ್ಲಿ 83 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಕ್ವಿಂಟನ್ ಡಿಕಾಕ್ 5, ತೆಂಬಾ ಬವುಮಾ 11, ರಾಸಿ ವಾನ್ ಡೇರ್ ಡುಸ್ಸೆನ್ 13, ಏಡನ್ ಮಾರ್ಕ್ರಮ್ 9, ಹೆನ್ರಿಚ್ ಕ್ಲಾಸೆನ್ 1, ಡೇವಿಡ್ ಮಿಲ್ಲರ್ 11, ಮಾರ್ಕೋ ಜಾನ್ಸೆನ್ 14, ಕೇಶವ್ ಮಹರಾಜ್ 7, ಕಾಗಿಸೊ ರಬಾಡ 6, ತಬ್ರೈಜ್ ಶಮ್ಸಿ 4 ರನ್ ಗಳಿಸಿದರು. ಆದರೆ ಯಾರಿಂದಲೂ ಬೃಹತ್ ಮೊತ್ತ ಪೇರಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ದಾಖಲಿಸಿದರು. ಭಾರತದ ಪರ ರವೀಂದ್ರ ಜಡೇಜಾ 5, ಮೊಹಮ್ಮದ್ ಶಮಿ, ಕುಲ್ದೀಪ್ ಯಾದವ್ ತಲಾ 2 ವಿಕೆಟ್ ಕಿತ್ತರೆ, ಸಿರಾಜ್ 1 ವಿಕೆಟ್ ಕಬಳಿಸಿದರು.

## ಸಚಿನ್ ದಾಖಲೆ ಸರಿಗಟ್ಟಿದ ಕೊಹ್ಲಿ

ಭರ್ಜರಿಯಾಗಿ ಆಚರಿಸಿಕೊಳ್ಳುವ ಮೂಲಕ ಫ್ಯಾನ್ಸ್‌ಗೆ ಬಂಪರ್ ಗಿಫ್ಟ್ ಕೊಟ್ಟರು. ರನ್ ಮಷಿನ್ ಖ್ಯಾತಿಯ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ ತಾವಾಡಿದ 289 ಪಂದ್ಯಗಳ ಪೈಕಿ 277 ಇನ್ನಿಂಗ್ಸ್‌ಗಳಲ್ಲಿ 49ನೇ ಶತಕ ಸಿಡಿಸಿ ದರೆ, ಸಚಿನ್ ತೆಂಡೂಲ್ಕರ್ 452ನೇ ಇನಿಂಗ್ಸ್‌ನಲ್ಲಿ 49ನೇ ಶತಕ ಬಾರಿಸಿದ್ದರು. ಆ ಮೂಲಕ ಸಚಿನ್‌ಗಿಂತ 175 ಕಡಿಮೆ ಇನಿಂಗ್ಸ್‌ಗಳಲ್ಲಿ 49ನೇ ಶತಕ ದಕ್ಕಿಸಿಕೊಂಡ ಕೊಹ್ಲಿ, ಮಾಸ್ಟರ್ ಬ್ಲಾಸ್ಟರ್ ದಾಖಲೆ ಮುರಿದರು.

ದಕ್ಷಿಣ ಆಫ್ರಿಕಾ ವಿರುದ್ಧ ಶತಕ ಸಿಡಿಸುವ ಮೂಲಕ ವಿರಾಟ್ ಕೊಹ್ಲಿ ವೃತ್ತಿ ಜೀವನದಲ್ಲಿ 79 ಶತಕಗಳನ್ನು ಪೂರೈಸಿದ್ದಾರೆ. ಈ ಪೈಕಿ ಟೆಸ್ಟ್ ಕ್ರಿಕೆಟ್‌ನಲ್ಲಿ 29, ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 1 ಹಾಗೂ ಏಕದಿನ ಕ್ರಿಕೆಟ್‌ನಲ್ಲಿ ಒಟ್ಟು 49 ಶತಕ ಸಿಡಿಸಿದ್ದಾರೆ. ಸಚಿನ್ ತೆಂಡೂಲ್ಕರ್ ದಾಖಲೆ ಮುರಿಯಲು ಇನ್ನು ಒಂದೇ ಒಂದು ಶತಕವಷ್ಟೇ ಬಾಕಿಯಿದೆ ಎಂಬುದು ವಿಶೇಷ.

**ಅತಿ ಹೆಚ್ಚು ಶತಕ ಬಾರಿಸಿದವರ ಪಟ್ಟಿ**
49 –ವಿರಾಟ್ ಕೊಹ್ಲಿ (277 ಇನ್ನಿಂಗ್ಸ್)
49 – ಸಚಿನ್ ತೆಂಡೂಲ್ಕರ್ (452)
31 – ರೋಹಿತ್ ಶರ್ಮಾ (251)
30 – ರಿಕಿ ಪಾಂಟಿಂಗ್ (365)
28 – ಸನತ್ ಜಯಸೂರ್ಯ (433)

**ಹುಟ್ಟುಹಬ್ಬದಂದು ಶತಕ ಸಿಡಿಸಿದವರು**
ವಿನೋದ್ ಕಾಂಬ್ಳಿ(21ನೇ ಬರ್ತ್‌ಡೇ)
ಸಚಿನ್ ತೆಂಡುಲ್ಕರ್(25ನೇ ಬರ್ತ್‌ಡೇ)
ಸನತ್ ಜಯಸೂರ್ಯ(39ನೇ ಬರ್ತ್‌ಡೇ)
ರಾಸ್ ಟೇಲರ್(27ನೇ ಬರ್ತ್‌ಡೇ)
ಟಾಮ್ ಲೇಥಮ್(30ನೇ ಬರ್ತ್‌ಡೇ)
ಮಿಚೆಲ್ ಮಾರ್ಷ್(32ನೇ ಬರ್ತ್‌ಡೇ)
ವಿರಾಟ್ ಕೊಹ್ಲಿ(35ನೇ ಬರ್ತ್‌ಡೇ)

## ಶುಭಾಶಯಗಳ ಸುರಿಮಳೆ!

ಶತಕ ಎಂದು ಬರೆದು ಕೊಹ್ಲಿ ಹಾಗೂ ಸಚಿನ್ ಮುಖಾಮುಖಿಯಾಗಿ ನಿಂತಿರುವ ಫೋಟೋವನ್ನು ಎಕ್ಸ್‌ನಲ್ಲಿ ಶೇರ್ ಮಾಡಿಕೊಂಡಿದೆ. ಮಾಜಿ ಕ್ರಿಕೆಟಿಗ ವಿರೇಂದ್ರ ಸೆಹ್ವಾಗ್, ಸಚಿನ್ ದಾಖಲೆಯನ್ನು ಸರಿಗಟ್ಟಲು ಸಿಕ್ಕಿದ್ದು ಎಂಥಾ ದಿನ..? ಐತಿಹಾಸಿಕ ಈಡನ್ ಗಾರ್ಡನ್ಸ್ ನಲ್ಲಿ ಕೊಹ್ಲಿ ಬರ್ತ್ ಡೇ ಎಂದು ಬರೆದುಕೊಂಡಿದ್ದಾರೆ.

ಟೀಂ ಇಂಡಿಯಾ ಅಭಿಮಾನಿಗಳಿಗೆ ವಿರಾಟ್ ಕೊಹ್ಲಿಯ ಬೆಸ್ಟ್ ಬರ್ತ್ ಡೇ ಗಿಫ್ಟ್ ಎಂದು ಪಾಕಿಸ್ತಾನದ ಮಾಜಿ ಆಟಗಾರ ಶಾಹಿದ್ ಅಫ್ರಿದಿ ಬಣ್ಣಿಸಿದ್ದಾರೆ. ದಾವಣಗೆರೆ ಎಕ್ಸ್‌ಪ್ರೆಸ್ ಖ್ಯಾತಿಯ ಭಾರತದ ಮಾಜಿ ಕ್ರಿಕೆಟಿಗ ವಿನಯ್ ಕುಮಾರ್, 35ನೇ ಹುಟ್ಟುಹಬ್ಬಕ್ಕೆ 49ನೇ ಶತಕದ ಮೂಲಕ ವಿರಾಟ್ ತಮಗೆ ತಾವೇ ಗಿಫ್ಟ್ ಕೊಟ್ಟಿದ್ದಾರೆ. ಹುಟ್ಟುಹಬ್ಬದ ಶುಭಾಶಯಗಳು, ನಿಮ್ಮ ಶತಕ ಹಾಗೂ ಸಾಧನೆಗೆ ಅಭಿನಂದನೆ ಎಂದು ಶುಭ ಕೋರಿದ್ದಾರೆ. ಟೀ ಇಂಡಿಯಾ ಮಾಜಿ ಆಟಗಾದ ಎಸ್.ಬದ್ರಿನಾಥ್ ಕೂಡಾ ವಿರಾಟ್ ಕೊಹ್ಲಿಯ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ. ಶ್ರೀಲಂಕಾದ ಮಾಜಿ ಕ್ರಿಕೆಟಿಗ ರಸೆಲ್ ಅರ್ನಾಲ್ಡ್, ಸೆಂಚುರಿ 49 ವಿರಾಟ್ ಕೊಹ್ಲಿಗೆ ಹುಟ್ಟುಹಬ್ಬದ ಶುಭಾಶಯ ಎಂದು ಶುಭ ಕೋರಿದ್ದಾರೆ.

## ಪ್ರತ್ಯೇಕ ಆಯೋಗಕ್ಕೆ ಚಿಂತನೆ

ಸೂಕ್ತ ಎಂದು ಸಮಿತಿ ಶಿಫಾರಸು ಮಾಡಿತ್ತು. ವಿವಿಧ ಕಾರಣಗಳಿಂದ ಸರ್ಕಾರವು ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಹಿಂದೇಟು ಹಾಕುತ್ತದೆ. ಇದು ಸಾರಿಗೆ ನಿಗಮಗಳು ನಷ್ಟದ ಸುಳಿಗೆ ಸಿಲುಕಲು ಕಾರಣವಾಗುತ್ತದೆ. ಹಲವು ವರ್ಷಗಳವರೆಗೂ ಪ್ರಯಾಣ ದರ ಪರಿಷ್ಕರಣೆ ಆಗದೇ ಇರುವುದರಿಂದ ನಿಗಮಗಳು ನಷ್ಟದಲ್ಲಿವೆ. ಸ್ವತಂತ್ರ ಆಯೋಗ ನೇಮಿಸಿದರೆ ಹಸ್ತಕ್ಷೇಪ ಇಲ್ಲದ ದರ ಪರಿಷ್ಕರಣೆ ಸಾಧ್ಯವಾಗುತ್ತದೆ ಎಂಬುದನ್ನು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಮನವರಿಕೆ ಮಾಡಲು ಹಣಕಾಸು ಅಧಿಕಾರಿಗಳು ಪ್ರಯತ್ನ ಮಾಡಿದ್ದಾರೆ. ವಿಷಯ ಇನ್ನೂ ಚರ್ಚೆಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

## ಕಡವೆ ಬೇಟೆಗಾರ ಬಲಿ

ಗಡಿಯಿಂದ ಅರಣ್ಯ ಪ್ರದೇಶದಲ್ಲಿ ಸುಮಾರು 3 ಕಿ.ಮೀ. ದೂರದಲ್ಲಿ ಪ್ರಕರಣ ಜರುಗಿದ್ದು, ಸ್ಥಳೀಯರು ಘಟನಾ ಸ್ಥಳದಲ್ಲಿ ಪ್ರತಿಭಟನೆ ಮಾಡಲು ಉದ್ದೇಶಿಸಿದ್ದರು. ಆದರೆ ಪೊಲೀಸ್ ಬಂದೋಬಸ್ತ್‌ನಿಂದ ಘಟನಾ ಸ್ಥಳಕ್ಕೆ ಸ್ಥಳೀಯರು ತೆರಳದಂತೆ ನಿರ್ಬಂಧ ಹೇರಲಾಗಿತ್ತು.

**ಚಾಮರಾಜನಗರದಲ್ಲಿ ಮರಣೋತ್ತರ ಪರೀಕ್ಷೆ:** ಎಫ್‌ಎಸ್‌ಎಲ್ ತಂಡದ ಪರಿಶೀಲನೆ ಬಳಿಕ ಗುಂಡೇಟಿಗೆ ಬಲಿಯಾದ ಮೃತ ಮನುವಿನ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ನಿಯಮಾನುಸಾರ ಪರಿಶೀಲನೆ ಬಳಿಕ ಮರಣೋತ್ತರ ಪರೀಕ್ಷೆಯನ್ನು ನಡೆಸಿ, ಸಂಜೆ ವೇಳೆಗೆ ವಾರಸುದಾರರಿಗೆ ಒಪ್ಪಿಸಲಾಯಿತು. ಕಾರ್ಯಾಚರಣೆಯಲ್ಲಿ ಮದ್ದೂರು ವಲಯದ ಆರ್‌ಎಫ್‌ಓ ಮಲ್ಲೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು. ರಾತ್ರಿಯಿಡೀ ಬೇಟೆಗಾರರನ್ನು ತಡೆಗಟ್ಟಲು ಪ್ರಯತ್ನಿಸಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಸಿಬ್ಬಂದಿಗಳ ಕಣ್ಣು ತಪ್ಪಿಸಿ ಕಾಡಿನೊಳಗೆ ನುಸುಳಿದ ಬೇಟೆಗಾರರಲ್ಲಿ ಓರ್ವ ಬಲಿಯಾಗಿದ್ದಾನೆ.

# ವಿಜಯನಗರ ಸಾಮ್ರಾಜ್ಯ ಬದಲು ಕರ್ನಾಟಕ ಸಾಮ್ರಾಜ್ಯ ಎಂದು ಬಳಸಬೇಕು

**● ಇತಿಹಾಸ, ಶಾಸನ ತಜ್ಞೆ ಡಾ.ವಸುಂಧರ ಕವಲಿ ಫಿಲಿಯೋಜಾ ಕರೆ ● ವಿಜಯನಗರವು ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾಗಿತ್ತು ಎಂಬುದಕ್ಕೆ ಶಾಸನ ಪುರಾವೆಗಳಿವೆ**




ಕುವೆಂಪುನಗರದಲ್ಲಿರುವ ಗಾನಭಾರತಿ ವೀಣೆ ಶೇಷಣ್ಣ ಸಭಾಂಗಣದಲ್ಲಿ ಶ್ರೀ ವನಮಾಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ದ್ವೈವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ವಸುಂಧರಾ ಕವಲಿ ಫಿಲಿಯೋಜಾ ಮತ್ತು ಡಾ.ಪಿಯರ್ರ ಸಿಲ್ವನ್ ಫಿಲಿಯೋಜ ಅವರಿಗೆ ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ ಮತ್ತು ಸ್ನೇಹಾ ಫೌಂಡೇಷನ್‌ನ ಸಂಸ್ಥಾಪಕರಾದ ಟಿ.ರಾಮಾಂಜನೇಯ ಮತ್ತು ಕೆ.ಪಿ.ಜಯ ಅವರಿಗೆ ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ವೇಳೆ (ಎಡದಿಂದ) ವಿದ್ವಾನ್ ಚಂದ್ರಶೇಖರ್, ಕಾರ್ಯದರ್ಶಿ ನಾಗರಾಜ್,ಸದಸ್ಯೆ ವೈಶಾಲಿ, ಕಾರ್ಯದರ್ಶಿ ಎಸ್.ಮೀನಾ, ಸದಸ್ಯೆ ಸತ್ಯಭಾಮ, ಅಧ್ಯಕ್ಷ ಸುಂದರ್ ರಾಜ್, ನಾಡೋಜ ವೆಂಕಟಾಚಲ ಶಾಸ್ತ್ರೀ, ಸಂಸ್ಕೃತ ವಿದ್ವಾನ್ ಹೆಚ್.ವಿ.ನಾಗರಾಜ್ ರಾವ್, ಸದಸ್ಯರಾದ ದೇವಕುಮಾರ್, ಶಶಾಂಕ್ ಮತ್ತು ವಿಶ್ವನಾಥ್ ಚಿತ್ರದಲ್ಲಿ ಕಾಣಬಹುದು

ಮೈಸೂರು, ನ.5(ಜಿಎ)–ವಿಜಯನಗರ ಸಾಮ್ರಾಜ್ಯವಾಗಿರಲಿಲ್ಲ. ಅದು ಕರ್ನಾಟಕ ಸಾಮ್ರಾಜ್ಯವಾಗಿತ್ತು. ಎಲ್ಲಾ ಕನ್ನಡಿಗರು ವಿಜಯನಗರ ಸಾಮ್ರಾಜ್ಯವನ್ನು ಕರ್ನಾಟಕ ಸಾಮ್ರಾಜ್ಯ ಎಂದು ಬಳಸಬೇಕು ಎಂದು ಇತಿಹಾಸ ಮತ್ತು ಶಾಸನ ತಜ್ಞೆ ಡಾ.ವಸುಂಧರಾ ಕವಲಿ ಫಿಲಿಯೋಜಾ ಕರೆ ನೀಡಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ವೀಣೆ ಶೇಷಣ್ಣ ಸಭಾಂಗಣದಲ್ಲಿ ಶ್ರೀ ವನಮಾಲಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಶ್ರೀವನಮಾಲಿ ಸಂಸ್ಕೃತಿ ಸೇವಾ ಹಾಗೂ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ದ್ವೈವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಕರ್ನಾಟಕ ಸಾಮ್ರಾಜ್ಯ ಇತ್ತು ಎಂಬುದನ್ನು ಸಾಬೀತುಪಡಿಸಲು ಹಲವಾರು ಶಾಸನಗಳಿವೆ. ಈ ರೀತಿಯ ಅಧಿಕೃತ ದಾಖಲೆಗಳನ್ನು ಅಧ್ಯಯನ ಮಾಡಿದರೆ, ಹೆಚ್ಚಿನ ಮಾಹಿತಿ ದೊರೆಯುತ್ತದೆ. 30 ರಿಂದ 40 ಶಾಸನಗಳಲ್ಲಿ ರಾಜ್ಯದ ಹೆಸರು ಕರ್ನಾಟಕ, ವಿಜಯನಗರ ರಾಜಧಾನಿ ಎಂದು ಪುರಾವೆಗಳಿವೆ. 15ನೇ ಶತಮಾನದಲ್ಲಿ ಬಂದ ಪೋರ್ಚುಗೀಸರಿಗೆ ಕರ್ನಾಟಕ, ವಿಜಯನಗರ ಎಂಬುದಕ್ಕೆ ಕಠಿಣವಾಗಿತ್ತು. ಆದ್ದರಿಂದ ಅವರ ಅನುಕೂಲಕ್ಕೆ ತಕ್ಕಂತೆ ಹೆಸರು ಇಟ್ಟುಕೊಂಡರು. ಇದರಿಂದ ರಾಜ್ಯದ ಹೆಸರು ಮಾಯವಾಯಿತು. 1265ರಲ್ಲಿ ಪತನವಾದದ್ದು, ವಿಜಯನಗರ ಸಾಮ್ರಾಜ್ಯವಲ್ಲ. ಅದು ನಮ್ಮ ಕರ್ನಾಟಕ ಸಾಮ್ರಾಜ್ಯ. ಇದನ್ನು ಹೇಳಲು ಬೇಸರವಾಗುತ್ತದೆ ಎಂದು ವಿಷಾದಿಸಿದರು.

ಕರ್ನಾಟಕ ಸಾಮ್ರಾಜ್ಯ ಪತನದ ನಂತರ ಕರ್ನಾಟಕ ಎಂಬ ಹೆಸರು ತಮಿಳುನಾಡಿನಲ್ಲಿ ಕಂಡಿತು. ಅಲ್ಲಿ ತಾಳಿಕೋಟೆ ಪತನವಾದ ನಂತರ ಕರ್ನಾಟಕ ಮಹಾರಾಜರಿಗೆ ಅಧೀನರಾಗಿದ್ದರು. ಬ್ರಿಟಿಷರು ಬಂದ ನಂತರ ತಮಿಳುನಾಡಿನ ಮಧ್ಯಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದವರನ್ನು, ಕರ್ನಾಟಿಕ್ ಎಂದು ಹೇಳಲು ಆರಂಭಿಸಿ, ನಂತರದ ದಿನಗಳಲ್ಲಿ ಅವರ ಆಸ್ಥಾನದಲ್ಲಿ ಹಾಡುವವರಿಗೆ ಕರ್ನಾಟಿಕ್ ಸಂಗೀತಗಾರರೆಂದು ಹೇಳಿದರು. ಹಾರ್ಟ್ ಆಫ್ ತಮಿಳುನಾಡಿನಲ್ಲಿ ಕರ್ನಾಟಿಕ್ ಸಂಗೀತ ಉಗಮವಾಯಿತು. ಈ ನಡುವೆ ಮೈಸೂರಿಗೆ ಬಂದು ಸಂಗೀತ ಹಾಡುವ ಕಲಾವಿದರು ನಮ್ಮದು ನಿಜವಾದ ಕರ್ನಾಟಿಕ್ ಸಂಗೀತ ನಿಮ್ಮದು, ದಕ್ಷಿಣ ಭಾರತದ ಕರ್ನಾಟಿಕ್ ಸಂಗೀತ ಎನ್ನುತ್ತಿದ್ದರು. ಈ ನಡುವೇ ನಮ್ಮ ರಾಜರು ಅವರೊಡನೆ ವಾದ ಮಾಡುವ ಪರಿಸ್ಥಿತಿಯೂ ನಿರ್ಮಾಣವಾಯಿತು. ಮಹಾರಾಜರನ್ನು ಕರ್ನಾಟಕಧೀಶ್ವರ ಎಂದು ಕರೆಯುತ್ತಿದ್ದರು. ಆದರೆ, ಬ್ರಿಟಿಷರು ಮೈಸೂರು ಸಂಸ್ಥಾನಿಗಳು ಎಂದು ಹೇಳಿಕೊಳ್ಳುವಂತೆ ಒತ್ತಡ ಹಾಕಿದರು. ಈ ರೀತಿ ಅನೇಕ ಅನ್ಯಾಯಗಳು ನಡೆದಿದೆ. ಆದ್ದರಿಂದ ನಾವು ಮುಂದಿನ ದಿನಗಳಲ್ಲಿ ಕರ್ನಾಟಕ ಸಾಮ್ರಾಜ್ಯ ಎನ್ನುವ ಹೆಸರು ಬಳಸಬೇಕು. ಈ ಕೆಟ್ಟ ಮುಳ್ಳು ತೆಗೆದುಹಾಕುವುದು ಕಠಿಣ ಆದರೂ ತೆಗೆದು ಹಾಕೋಣ ಎಂದು ಕರೆ ನೀಡಿದರು.

ನಂತರ ಸಂಸ್ಕೃತ ವಿದ್ವಾಂಸರಾದ ಡಾ.ಪಿಯರ್ರ ಸಿಲ್ವನ್ ಫಿಲಿಯೋಜಾ ಮಾತನಾಡಿ, ಸಂಸ್ಕೃತವಲ್ಲವೇ ಇದು ಭಾರತದ ಶ್ರೇಷ್ಠತೆ ಮತ್ತು ಸಂಸ್ಕೃತದಂತಹ ಉತ್ಕೃಷ್ಟ ಭಾಷೆಯನ್ನು ಹೊಂದಿರುವುದು ಭಾರತದ ಮಹಾನ್ ಭಾಗ್ಯ. ಮೂರೂವರೆ ಮಿಲಿಯನ್ ಪಂಡಿತರು. ಭಾರತೀಯ ಪಂಡಿತರು. ಭಾರತೀಯ ತತ್ವಜ್ಞಾನಿಗಳು, ಕವಿಗಳು, ಎಲ್ಲಾ ರೀತಿಯ ಕಲಾವಿದರ ಸರಣಿಗಳಿಗೆ ಹಲವು ತಲೆಮಾರುಗಳಿವೆ. ಹೀಗೆ ಎಲ್ಲರೂ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿದ್ವಾಂಸರಾದ ನಾಡೋಜ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ ಮಾತನಾಡಿ, ಸಂಸ್ಕೃತಿ ಮತ್ತು ಸಮಾಜ ಸೇವೆ ಮಾಡುತ್ತಿರುವವರನ್ನು ಗುರುತಿಸಿ ಅಭಿನಂದನೆ ಸಲ್ಲಿಸುತ್ತಿರುವುದು ಉತ್ತಮ ಕಾರ್ಯ. ಡಾ.ವಸುಂಧರಾ ಕವಲಿ ಫಿಲಿಯೋಜಾ ವಿಜಯನಗರ ಸಾಮ್ರಾಜ್ಯದ ಕುರಿತು ಅವರು ಆಡಿದ ಹಲವಾರು ವರ್ಷಗಳ ಹಿಂದೆ ಹೇಳಿದ ಮಾತು ಇಂದಿಗೂ ನೆನಪಿದೆ. ಇವರೂ ಇತಿಹಾಸಕಾರರಾಗಿ ಇಂಗ್ಲಿಷ್, ಫ್ರೆಂಚ್ ಮತ್ತು ಕನ್ನಡ ಭಾಷೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಒಬ್ಬರಿಂದ ಈ ಕೆಲಸ ಸಾಧ್ಯವೇ ಎಂಬ ಪ್ರಶ್ನೆ ನನ್ನಲ್ಲಿ ಮೂಡುತ್ತದೆ. ಈ ಹಿಂದೆ ಭಾರತೀಯ ವಿದ್ಯಾ ಪರಂಪರೆ ವಿದ್ಯಾಶಾಲೆಗಳು ಬೆಳೆದಿದ್ದು, ವಿದೇಶದ ಹಲವು ಭಾಷೆಗಳಲ್ಲಿ ಪ್ರಥಮ ಅವಕಾಶ ಪಡೆದುಕೊಂಡು ಅನುವಾದವಲ್ಲದೇ ನೇರವಾಗಿ ಫ್ರೆಂಚ್ ಜರ್ಮನ್ ಭಾಷೆಗಳನ್ನು ಕಲೆತುಕೊಂಡು ಭಾರತೀಯ ಸಂಸ್ಕೃತಿಯನ್ನು ಕಲಿಸಿದ ವಿದ್ವಾಂಸರ ಪಟ್ಟಿಯೇ ಇದೆ ಎಂದು ಸ್ಮರಿಸಿದರು.

ಅನೇಕ ವಿದೇಶಿಗರು ನಿತ್ಯವೂ ಭೇಟಿ ಮಾಡಿ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಇದನ್ನೆಲ್ಲ ನೋಡಿದಾಗ ಅವರ ಉತ್ಸಾಹ ಕುಗ್ಗಿಲ್ಲ. ಅದು ನಮಗೆಲ್ಲ ಮಾದರಿಯಾಗಿದೆ. ಅವರು ತ್ರಿಭಾಷ ವಿದೂಷಿಯಾಗಿದ್ದಾರೆ. ಕರ್ನಾಟಕ ಸಾಮ್ರಾಜ್ಯದ ಕುರಿತು 'ಅಳಿದುಳಿದ ಹಂಪಿ' ಪುಸ್ತಕ ಬರೆದಿದ್ದಾರೆ. ಅವರು ಪ್ರಪಂಚದ ಅನೇಕ ದೇಶಗಳಿಗೆ ಭೇಟಿ ನೀಡಿ ಭಾಷಣ ಮಾಡಿದ್ದಾರೆ. ಚೀನಾದಲ್ಲಿ ಇವರ ಭಾಷಣವನ್ನು ಚೀನಾ ಭಾಷೆಗೆ ಅನುವಾದ ಮಾಡಿಕೊಂಡು ಓದುತ್ತಿದ್ದಾರೆ ಎಂದು ತಿಳಿಸಿದರು.

ಹಳೆ ಬೇರು ಹೊಸ ಚಿಗುರು ಎಂಬ ಮಾತಿನಂತೆ ಇಂದು ರಾಮಾಂಜನೇಯ ಮತ್ತು ಜಯ ಅವರನ್ನು ಸನ್ಮಾನಿಸಲಾಗುತ್ತಿದೆ. ಇವರು ಚಿತ್ರದುರ್ಗದ ಚಳ್ಳಕೆರೆಯಲ್ಲಿ ರಾಮಣ್ಣ ಎಂಬ ಹೆಸರು ಪಡೆದುಕೊಂಡು ಒಳ್ಳೆ ಕೆಲಸ ಮಾಡಿದ್ದಾರೆ. ಜಗತ್ತಿನಲ್ಲಿ ಗಂಡ ಹೆಂಡತಿ ಒಂದೇ ಮನಸ್ಥಿತಿ ಹೊಂದುವುದು ಬಹಳ ಕಷ್ಟ. ಆದರೆ, ಇಂದು ಬ್ರಹ್ಮ ಸೃಷ್ಟಿಸಿರುವ ವಿಶೇಷ ದಂಪತಿಗಳನ್ನು ನೋಡು ತ್ತಿದ್ದೇವೆ. ಒಂದು ಕಡೆ ವಿದ್ಯೆಯ ಹಿಮಾಲಯ ಪರ್ವತ ಮತ್ತೊಂದೆಡೆ ಸೇವೆ ಪರ್ವ ಕಾಣುತ್ತಿದ್ದೇವೆ ಎಂದರು.

> ಯಾರನ್ನು ನಾವು ಪೂಜ್ಯನೀಯರೆಂದು ಪೂಜಿಸುತ್ತೇವೆ ಅವರು ಇಂದು ವೇದಿಕೆಯಲ್ಲಿ ಕಾಣುತ್ತಿರುವುದು ನಮ್ಮ ಪುಣ್ಯ. ಫಿಲಿಯೋಜಾ ಅವರ ಸಾಧನೆಗಳನ್ನು ಹೇಳಲು ಮಾತುಗಳು ಸಾಲದು. ಅವರ ಸಂಸ್ಕೃತ ಸೇವೆ ನಮಗೆ ಹಿಮಾಲಯ ಮತ್ತು ಸಮುದ್ರ ನೋಡಿದಾಗ ಉಕ್ಕಿಬರುವ ಭಾವನೆ ರೀತಿ ಕಾಣುತ್ತದೆ. ವಿದ್ಯಾನಾಥ ಎಂಬವರ ಪ್ರತಾಪ ವೃದ್ದಿರ್ರಿಯಾ ಗ್ರಂಥವನ್ನು ಸಂಶೋಧನೆ ಮಾಡಿ ಸಂಸ್ಕೃತದಲ್ಲಿ ಅಧ್ಯಯನ ಮಾಡಿದರು. ಸೋಬರ್ ವಿಮಿಯಲ್ಲಿ ಇಂದಿಗೂ ಅನೇಕ ಉಪನ್ಯಾಸ ನೀಡಿದ್ದಾರೆ. ಅವರ ಕಾರ್ಯ ಇಂದಿಗೂ ನಿಲ್ಲಿಸಿಲ್ಲ ಪಂಪಾ ಮಹಾಹತ್ಯಾ ಎಂಬುದರ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ.
> -ಹೆಚ್.ವಿ.ನಾಗರಾಜರಾವ್, ಸಂಸ್ಕೃತ ವಿದ್ವಾಂಸ

# ಬಳಸಿದ ಟೂತ್ ಬ್ರಷ್ ಅನ್ನು ಬಿಸಾಡಬೇಡಿ; ಓರಲ್ ಕೇರ್ ರೀಸೈಕ್ಲಿಂಗ್ ಸ್ಟೇಷನ್‌ಗೆ ಕೊಡಿ




ಮೈಸೂರು, ನ 5(ಆರ್‌ಕೆ)– ನೀವು ಬಳಸಿದ ಟೂತ್ ಬ್ರಷ್ ಎಲ್ಲೆಂದರಲ್ಲಿ ಬಿಸಾಡಿ ಪರಿಸರ ಹಾನಿ ಮಾಡಬೇಡಿ. ಬದಲಾಗಿ ಓರಲ್ ಕೇರ್ ರೀಸೈಕ್ಲಿಂಗ್ ಸ್ಟೇಷನ್‌ಗೆ ಕೊಟ್ಟು ಕಸದಿಂದ ರಸ ಮಾಡಲು ಸಹಕರಿಸಿ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯ ನಳಪಾಕ್ ಹೋಟೆಲ್ ಎದುರು ಸ್ಮೈಲ್ ಡೆಂಟಲ್ ಕೇರ್‌ನ ದಂತ ವೈದ್ಯರಾದ ಡಾ. ಭರತ್ ಕುಮಾರ್ ಗಾರ್ಲ ಮತ್ತು ಡಾ. ಪ್ರತಿಭಾ ಗಾರ್ಲ ದಂಪತಿ ಸ್ಥಾಪಿಸಿರುವ ವಿನೂತನ ಓರಲ್ ಕೇರ್ ರೀಸೈಕ್ಲಿಂಗ್ ಸ್ಟೇಷನ್ ಬಾಕ್ಸ್ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಾವು ಬಳಸಿದ ಟೂತ್ ಬ್ರಷ್‌ಗಳನ್ನು ಕಸದ ಬುಟ್ಟಿಗೋ ಅಥವಾ ಎಲ್ಲೆಂದರಲ್ಲಿ ಬಿಸಾಡುತ್ತೇವೆ. ಅದು ಕರಗುವುದಿಲ್ಲವಾದ್ದರಿಂದ ಪರಿಸರದ ಮೇಲೆ ಹಾನಿಯುಂಟಾಗುತ್ತದೆ. ಟೂತ್ ಬ್ರಷ್‌ಗಳನ್ನು ವೈಜ್ಞಾನಿಕವಾಗಿ ವಿಂಗಡಿಸಿ ಜಾಗೃತ ಟೆಕ್ ಲಿ, ರವರಿಗೆ ನೀಡಿದರೆ ಅದರಿಂದ ಫುಟ್‌ಪಾತ್ ಪೇವ್ ಇಂಟರ್‌ಲಾಕಿಂಗ್ ಟೈಲ್ಸ್ ತಯಾರಿಸಿ ತ್ಯಾಜ್ಯವನ್ನು ಮರು ಬಳಕೆ ಮಾಡಲು ಪಾಲಿಕೆಯು ಮುಂದಾಗಿದೆ ಎಂದು ತಿಳಿಸಿದರು.

ದಂತ ವೈದ್ಯರು ಇಂತಹ ಒಂದು ವಿನೂತನ ಪ್ರಯತ್ನ ಮಾಡಿದ್ದು ಇಡೀ ದೇಶದಲ್ಲೇ ಪ್ರಥಮ ಪ್ರಯೋಗವಾಗಿರುವುದರಿಂದ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಬಳಸಿ ಬಿಸಾಡುವ ಟೂತ್ ಬ್ರಷ್‌ಗಳನ್ನು ಈ ಓರಲ್ ಕೇರ್ ರೀಸೈಕ್ಲಿಂಗ್ ಸ್ಟೇಷನ್‌ಗೆ ತಂದು ಬಾಕ್ಸ್‌ನಲ್ಲಿ ಹಾಕಿ, ಅದರಲ್ಲಿರುವ ಬಟನ್‌ಗಳಲ್ಲಿ ನಿಮ್ಮ ಮೊಬೈಲ್ ನಂಬರ್ ಒತ್ತಿದರೆ, ನಿಮಗೆ ಪ್ರಶಂಸೆಯೊಂದಿಗೆ ಚೀಟಿಯೊಂದು ಬರುತ್ತದೆ ಎಂದು ಮೇಯರ್ ತಿಳಿಸಿದರು.

ಮೈಸೂರು ನಗರದಾದ್ಯಂತ ವರ್ಷಕ್ಕೆ 60ರಿಂದ 70 ಟನ್ ಹಳೇ ಟೂತ್ ಬ್ರಷ್‌ಗಳು ಉತ್ಪತ್ತಿಯಾಗುತ್ತವೆ. ಅವುಗಳನ್ನು ಬಳಸಿಕೊಂಡು ಇಂಟರ್‌ಲಾಕಿಂಗ್ ಟೈಲ್ಸ್ ತಯಾರಿಸಿ ನಮ್ಮ ರಸ್ತೆಯ ಫುಟ್‌ಪಾತ್‌ಗಳಿಗೆ ಬಳಸಬಹುದಾಗಿದೆ ಎಂದ ಅವರು, ಮುಂದೆ ನಗರದ ಎಲ್ಲಾ ವಿದ್ಯಾರ್ಥಿ ನಿಲಯಗಳು, ವಸತಿ ಸಮುಚ್ಛಯಗಳು, ಸಾರ್ವಜನಿಕ ಸ್ಥಳಗಳಲ್ಲಿ ಈ ಸ್ಟೇಷನ್ ಬಾಕ್ಸ್‌ಗಳನ್ನು ಅಳವಡಿಸಲು ಚಿಂತಿಸಲಾಗಿದೆ ಎಂದು ಶಿವಕುಮಾರ್ ತಿಳಿಸಿದರು.

ವಸತಿ ಶಾಲಾ–ಕಾಲೇಜುಗಳು, ಪೇಯಿಂಗ್ ಗೆಸ್ಟ್‌ಗಳು, ಅಪಾರ್ಟ್‌ಮೆಂಟ್‌ಗಳ ಬಳಿ ಓರಲ್ ಕೇರ್ ರೀಸೈಕ್ಲಿಂಗ್ ಸ್ಟೇಷನ್‌ಗಳನ್ನು ಅಳವಡಿಸಲು ತಾವು ಗಣಪತಿ ಸಚ್ಚಿದಾನಂದ ಆಶ್ರಮದ ಸ್ವಾಮೀಜಿಯವರನ್ನು ಭೇಟಿ ಮಾಡಿ ಬಾಕ್ಸ್‌ಗಳನ್ನು ಕೊಡಿಸಿಕೊಡುವಂತೆ ಮನವಿ ಮಾಡಿಕೊಳ್ಳುತ್ತೇವೆ ಎಂದು ಅವರು ತಿಳಿಸಿದರು.

ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ, ಡಾ. ಭರತ್‌ಕುಮಾರ್ ಗಾರ್ಲ, ಡಾ. ಪ್ರತಿಭಾ ಗಾರ್ಲ, ಐಡಿಯಾಸ್ ಅನ್‌ಲಿಮಿಟೆಡ್ ಸಂಸ್ಥಾಪಕ ನಾಗೇಂದ್ರ ಶೆಟ್ಟಿ, ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಎಕ್ಸ್‌ಪರ್ಟ್ ಚಿದಂಬರ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

# ನ.7,8 ಕಲಾಮಂದಿರದಲ್ಲಿ 'ಕರಿನೀರ ವೀರ' ನಾಟಕ ಪ್ರದರ್ಶನ



ಮೈಸೂರು, ನ.5(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಮೇ 7 ಮತ್ತು 8ರಂದು ಸಂಜೆ 6ಕ್ಕೆ ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಅವರ ಜೀವನಾಧಾರಿತ 'ಕರಿನೀರ ವೀರ' ಕನ್ನಡ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಯಶಸ್ವಿನಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಿನೀರ ವೀರ ನಾಟಕವನ್ನು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ರಚಿಸಿ, ನಿರ್ದೇಶಿಸಿದ್ದಾರೆ. ಅಯೋಧ್ಯಾ ಪ್ರಕಾಶನವು ಈ ನಾಟಕವನ್ನು ಪುಸ್ತಕ ರೂಪದಲ್ಲಿ ಹೊರತಂದಿದೆ. ಕರಿನೀರ ವೀರ ನಾಟಕ ಈಗಾಗಲೇ ಬೆಂಗಳೂರು, ಮೈಸೂರು ಹಾಗೂ ಮಂಡ್ಯ ನಗರಗಳಲ್ಲಿ ಏಳು ಪ್ರದರ್ಶನ ಕಂಡಿದೆ. ರಾಜ್ಯದಾದ್ಯಂತ ಈ ನಾಟಕ ಪ್ರದರ್ಶನ ನಡೆಸಲು ಸಾವರ್ಕರ್ ಪ್ರತಿಷ್ಠಾನ ನಿರ್ಧರಿಸಿದೆ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಂತೆ 100 ಪ್ರದರ್ಶನ ನಡೆಸುವ ಗುರಿ ನಮ್ಮದಾಗಿದೆ ಎಂದರು. ಮೂರು ಗಂಟೆ ಅವಧಿಯ ಈ ನಾಟಕದಲ್ಲಿ ಜೈಲು ವಾಸದ ವೇಳೆ ಸಾವರ್ಕರ್ ಅನುಭವಿಸಿದ ದೈಹಿಕ, ಮಾನಸಿಕ ಚಿತ್ರಹಿಂಸೆ, ಸ್ವಾತಂತ್ರ್ಯ ಹೋರಾಟದಲ್ಲಿ ಅನುಭವಿಸಿದ ಕಷ್ಟಗಳು, ಸಮಾನತೆಗಾಗಿ ನಡೆಸಿದ ಹೋರಾಟದ ವಿಷಯ ನಾಟಕ ಹೊಂದಿದೆ ನಾಟಕದ ಟಿಕೆಟ್ ಹಾಗೂ ಹೆಚ್ಚಿನ ಮಾಹಿತಿಗಾಗಿ 9916221184, 8660219746 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಾವರ್ಕರ್ ಪ್ರತಿಷ್ಠಾನದ ಖಜಾಂಚಿ ಸಂದೇಶ್, ಸದಸ್ಯರಾದ ರಾಕೇಶ್‌ಭಟ್, ಶಿವಕುಮಾರ್ ಇದ್ದರು.

## ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ನ.5– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನ ಮೆಟ್ರಿಕ್ ನಂತರದ ಬಾಲಕ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು http://shp.karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಡಿ.15 ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಕಚೇರಿಯ ಸಂಪರ್ಕಿಸಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ 0821–2422088 ಕ್ಕೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರಿಗೆ ಶೇ.50 ಮೀಸಲಾತಿ ಕಲ್ಪಿಸುವ ಅಗತ್ಯತೆ ಇದೆ

**ಸಹಾಯಕ ಪ್ರಾಧ್ಯಾಪಕ ಡಾ॥ ಕೃಷ್ಣಮೂರ್ತಿ ಚಮರಂ ಅಭಿಮತ**



ಮೈಸೂರು,ನ.5(ಎಂಟಿವೈ)– ದೇಶದ ಜನಸಂಖ್ಯೆಯಲ್ಲಿ ಪುರುಷರಷ್ಟೇ ಮಹಿಳೆಯರು ಸಮನಾಗಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸುವ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕ ಡಾ. ಕೃಷ್ಣಮೂರ್ತಿ ಚಮರಂ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಭೋಗಾದಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ–2ರಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಪ್ರಸ್ತುತ 140 ಕೋಟಿ ಜನಸಂಖ್ಯೆ ಇದೆ. ಅದರಲ್ಲಿ ಮಹಿಳೆಯರೇ ಅರ್ಧದಷ್ಟು ಸಂಖ್ಯೆಯಲ್ಲಿದ್ದಾರೆ. ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವೂ ಬಹುಮುಖ್ಯ. ಈ ಹಿನ್ನೆಲೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಶೇ.50ರಷ್ಟು ಮೀಸಲಾತಿ ಸೌಲಭ್ಯ ನೀಡಬೇಕೆಂಬ ಕೂಗು ಕೇಳಿ ಬರುತ್ತಿದೆ. ಇದು ಸಮಂಜಸವೂ ಆಗಿದೆ. ದೇಶಕ್ಕೆ ಡಾ. ಬಿ.ಆರ್.ಅಂಬೇಡ್ಕರ್ ಕೊಡುಗೆ ನೀಡಿರುವ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಎಲ್ಲರೂ ಬದುಕಬೇಕು. ಬ್ರಿಟೀಷ್ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದ ಡಾ.ಅಂಬೇಡ್ಕರ್ ಕಾರ್ಮಿಕರ ಸಂಕಷ್ಟ ಸಮೀಪದಿಂದ ನೋಡಿದ್ದರು. ದಿನಕ್ಕೆ 8 ಗಂಟೆ ಕೆಲಸ, ಸಮಾನ ವೇತನ, ಕೆಲಸ ಮಾಡುವ ಹೆಣ್ಣುಮಕ್ಕಳು ಗರ್ಭಿಣಿಯರಾದರೆ ವೇತನ ಸಹಿತ ರಜೆ, ವಿಮೆ, ಹಿಂದು ಬಿಲ್ ಕೋಡ್ ಜಾರಿಗೊಳಿಸಿ ಗಂಡು ಮಕ್ಕಳೊಂದಿಗೆ ಹೆಣ್ಣು ಮಕ್ಕಳಿಗೂ ಆಸ್ತಿಯಲ್ಲಿ ಪಾಲು, ಆಸ್ತಿ ಹಕ್ಕು ನೀಡಿದರು. ವಿಧವಾ ವಿವಾಹ ಕಾಯ್ದೆ ತಂದರು. ಈ ಎಲ್ಲಾ ಅಂಶವನ್ನು ವಿದ್ಯಾರ್ಥಿನಿಯರು ಮನಗಂಡು ಕಂದಾಚಾರ, ಮೂಢನಂಬಿಕೆ ಬದಿಗೊತ್ತಿ ಡಾ.ಅಂಬೇಡ್ಕರ್ ಅವರನ್ನು ಮಾದರಿಯಾಗಿಟ್ಟುಕೊಂಡು ಗುರಿ ಇಟ್ಟುಕೊಂಡು ಸಾಧನೆ ಮಾಡಿ ಜೀವನದಲ್ಲಿ ಯಶಸ್ಸು ಕಾಣುವಂತೆ ಸಲಹೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ. ರಂಗೇಗೌಡ ಮಾತನಾಡಿ, ವಿದ್ಯಾರ್ಥಿನಿಯರು ಅಂಬೇಡ್ಕರ್ ಅವರ ಚಿಂತನೆಗಳನ್ನು ಅಳವಡಿಸಿಕೊಂಡು ಸಾಧನೆ ಮಾಡಬೇಕು. ಓದುವ ಕಡೆ ಹೆಚ್ಚು ಗಮನ ಕೊಟ್ಟು ಸಮಾಜದ ಏಳಿಗೆಗಾಗಿ ಕೊಡುಗೆ ನೀಡಿ ಆದರ್ಶ ವ್ಯಕ್ತಿಗಳಾಗಿ ಹೊರ ಹೊಮ್ಮಿ ಸಮಾಜಮುಖಿ ಕೆಲಸ ಮಾಡುವತ್ತ ಗಮನ ಹರಿಸಬೇಕು ಎಂದರು.

ಸಮಾರಂಭದಲ್ಲಿ ಮಹಿಳಾ ಚಿಂತಕಿ ಪ್ರೇಮಭೋದಿ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ಶಾಲಾ, ಕಾಲೇಜು ಪರೀಕ್ಷೆ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಹೆಣ್ಣು ಮಕ್ಕಳೇ ಹೆಚ್ಚಿನ ಸಾಧನೆ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಔದ್ಯೋಗಿಕ ಕ್ಷೇತ್ರಗಳಲ್ಲಿ ಯುವತಿಯರು ಪುರುಷರಿಗೆ ಸರಿಸಮಾನವಾಗಿ ದುಡಿಯುವ ಮೂಲಕ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಬಹುತೇಕ ಕುಟುಂಬಗಳನ್ನು ಮಹಿಳೆಯರೇ ಕೆಲಸ ಮಾಡಿ ಮುನ್ನಡೆಸುತ್ತಿರುವ ಅನೇಕ ಉದಾಹರಣೆ ನಮ್ಮ ಮುಂದೆ ಇದೆ. ಸೇನೆ, ಬಾಹ್ಯಾಕಾಶ ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳಾ ಸಾಧಕರನ್ನು ಪ್ರೇರಣೆಯಾಗಿಸಿಕೊಂಡು ಕಾಲೇಜು ಹಂತದಲ್ಲೇ ಸಾಧನೆ ಮಾಡುವ ದೃಢ ಮನಸ್ಸು ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಕೆ. ಸಿದ್ದಲಿಂಗ, ವಾರ್ಡನ್ ಎಂ.ಚಂದ್ರಮ್ಮ, ಗಾಯಕ ಮರಿಸ್ವಾಮಿ, ರಶ್ಮಿನರೀಪುರ, ನಿಶ್ಚಿತ ಹಾಜರಿದ್ದರು. ಇದೇ ವೇಳೆ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಎಲ್ಲಾ ನಿಲಯಪಾಲಕರು ಉಪಸ್ಥಿತರಿದ್ದರು.

# ಲಕ್ಷ್ಮಿದೇವಿ ದೇವಸ್ಥಾನ ಕಾಮಗಾರಿಗೆ 30 ಲಕ್ಷ ಅನುದಾನ

## ಅಡಗನಹಳ್ಳಿ ಗ್ರಾಮದಲ್ಲಿ ಶಾಸಕ ಡಿ.ರವಿಶಂಕರ್ ಭರವಸೆ



ಕೆ.ಆರ್.ನಗರ, ನ.5– ಹದಿಮೂರು ಗ್ರಾಮಗಳಿಗೆ ಸೇರಿದ ಶ್ರೀ ಲಕ್ಷ್ಮಿದೇವಿ ದೇವಸ್ಥಾನ ಕಾಮಗಾರಿ ಪೂರ್ಣಗೊಳ್ಳಲು ಬೇಕಾಗಿರುವ 30 ಲಕ್ಷ ರೂ. ಅನುದಾನ ಕೊಡಿಸಿ, ದೇವಾಲಯ ಲೋಕಾರ್ಪಣೆಗೆ ಶ್ರಮಿಸುವುದಾಗಿ ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ತಾಲೂಕಿನ ಅಡಗನಹಳ್ಳಿ ಗ್ರಾಮದಲ್ಲಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ವತಿಯಿಂದ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಶಾಸಕರ ನಿಧಿಯಿಂದ 5 ಲಕ್ಷ ರೂ. ಮಂಜೂರು ಮಾಡಲಾಗಿದೆ. ನಂತರ ವಿಧಾನಪರಿಷತ್ ಸದಸ್ಯರು ಮತ್ತು ಸರ್ಕಾರದಿಂದ ಅನುದಾನ ಕೊಡಿಸುವುದಾಗಿ ತಿಳಿಸಿದರು.

ಗ್ರಾಮದ ಹೆಬ್ಬಾಗಿಲಿನ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯದ ಜೀರ್ಣೋದ್ಧಾರಕ್ಕೆ ಇಲಾಖೆ ವತಿಯಿಂದ ಅಗತ್ಯ ಅನುದಾನ ಬಿಡುಗಡೆ ಮಾಡಿಸಲಾಗುವುದು. ದೇವಾಲಯದ ಅರ್ಚಕರಿಗೆ ಮಾಸಿಕ ವೇತನ ಮಂಜೂರು ಮಾಡುವಂತೆ ತಹಶೀಲ್ದಾರ್‌ಗೆ ಸೂಚಿಸುವುದಾಗಿ ಹೇಳಿದರು.


ಹದಿಮೂರು ಗ್ರಾಮಗಳಿಗೆ ಸೇರಿದ ದೇವಾಲಯದ ಕಾಮಗಾರಿ ಪೂರ್ಣಗೊಳಿಸಲು ಬದ್ಧನಾಗಿದ್ದೇನೆ. ಗ್ರಾಮಸ್ಥರು ದೇವಾಲಯ ಲೋಕಾರ್ಪಣೆಗೊಂಡ ನಂತರ ಸಂಪ್ರದಾಯದಂತೆ ದೇವರಿಗೆ ಪೂಜಾ ಕೈಂಕರ್ಯಗಳನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳಬೇಕು. ಗ್ರಾಮಗಳ ಯಜಮಾನರು ಪರಸ್ಪರ ಹೊಂದಾಣಿಕೆಯಿಂದ ದೇವರ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ, ಸಾರ್ವಜನಿಕರ ಅಹವಾಲು ಆಲಿಸಲು ನಿರ್ಧರಿಸಲಾಗಿದ್ದು, ನಂತರ ಅಡಗನಹಳ್ಳಿ ಗ್ರಾಮದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅಭಿವೃದ್ಧಿ ಕೆಲಸಗಳ ಪಟ್ಟಿ ಮಾಡಲಾಗುವುದು. ಗ್ರಾಮದ ಮುಖ್ಯರಸ್ತೆಯನ್ನು ಡಾಂಬರೀಕರಣ ಮಾಡಲಾಗುತ್ತದೆ ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಚೀರ್ನಹಳ್ಳಿ ಶಿವಣ್ಣ ನಿರ್ದೇಶಕ ಅಪ್ಪಾಜಿಗೌಡ, ಪುರಸಭೆ ಸದಸ್ಯ ನಟರಾಜು, ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಮಾರ್ಕ್ ಮಹದೇವ್, ಅರ್ಕೇಶ್ವರ ಸ್ಪೋರ್ಟ್ಸ್‌ಕ್ಲಬ್ ಅಧ್ಯಕ್ಷ ವೆಂಕಟೇಗೌಡ, ಮಾಜಿ ಅಧ್ಯಕ್ಷ ರಾಮೇಗೌಡ, ದೇವಾಲಯ ಅರ್ಚಕರಾದ ರಾಜಣ್ಣ ಮಾದಪ್ಪ ಕೃಷ್ಣೇಗೌಡ, ಹದಿಮೂರು ಗ್ರಾಮಗಳ ಮುಖಂಡರಾದ ಚನ್ನಕೇಶವ, ಪ್ರಕಾಶ್, ಬಸವೇಗೌಡ, ಕುಮಾರ್, ಸಿದ್ದಲಿಂಗೇಗೌಡ, ಚಂದ್ರೇಗೌಡ, ಮಾರೇಗೌಡ, ಸಿದ್ದೇಗೌಡ, ಪಪೇಗೌಡ, ಪುಟ್ಟಸ್ವಾಮಿಗೌಡ, ಸಣ್ಣತಮ್ಮೇಗೌಡ, ಎಳನೀರು ಮಹದೇವ್, ಕಾಳಿಕುಮಾರ್, ಮಂಜುನಾಥ್, ಜಯಣ್ಣ ಮತ್ತಿತರರಿದ್ದರು.

> ‘ಬಿಜೆಪಿ ಸರ್ಕಾರ ಕಳೆದ ವಿಧಾನಸಭೆ ಚುನಾವಣೆಗೂ ಮುನ್ನ 6 ತಿಂಗಳ ಅವಧಿಯಲ್ಲಿ ಮುಂದಿನ ಒಂದು ವರ್ಷಕ್ಕಾಗುವಷ್ಟು ಕ್ರಿಯಾ ಯೋಜನೆಗೊಳಿಸಿ, ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿಸಿದೆ. ಇವುಗಳಿಗೆ ಹಣ ಒದಗಿಸುವ ಜತೆಗೆ ನಮ್ಮ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಗೂ ಹಣ ನೀಡಬೇಕಾಗಿರುವುದರಿಂದ ಸರ್ಕಾರಕ್ಕೆ ಹೊರೆಯಾಗಿದ್ದು, ಕೇಳಿದಷ್ಟು ಅನುದಾನ ನೀಡಲು ಸಾಧ್ಯವಾಗುತ್ತಿಲ್ಲ.
>
> –ಡಿ.ರವಿಶಂಕರ್, ಶಾಸಕ

## ಮಳೆಗೆ ಮನೆ ಕುಸಿತ



ಹುಣಸೂರು, ನ.5– ತಾಲೂಕಿನ ಹನಗೋಡು ಭಾಗದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆಗೆ ವಾಸದ ಮನೆ ಹಾನಿಯಾಗಿದೆ.

ಹನಗೋಡು ಹೋಬಳಿಯ ನೇರಳಕುಪ್ಪೆ ಗಿರಿಜನ ಎ ಹಾಡಿಯ ನಿವಾಸಿ ಉಷಾ ಅವರಿಗೆ ಸೇರಿದ ವಾಸದ ಮನೆಯ ಗೋಡೆ ಮಳೆಗೆ ಕುಸಿದಿದೆ. ಆದರೆ, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

**ರೈತರ ಸಂತಸ:** ಮಳೆ ಇಲ್ಲದೆ ಬೆಳೆಗಳೆಲ್ಲ ಒಣಗುತ್ತಿದ್ದವು. ಆದರೆ, ಶನಿವಾರ ರಾತ್ರಿ ಬಿದ್ದ ಮಳೆಯಿಂದ ಈ ಭಾಗದ ರೈತರು ಸಂತಸಗೊಂಡಿದ್ದಾರೆ.

# ರಸ್ತೆ ಅಭಿವೃದ್ಧಿಗೆ ಒತ್ತು: ಶಾಸಕ ಜಿ.ಡಿ.ಹರೀಶ್‌ಗೌಡ



ಹುಣಸೂರು, ನ. 5– ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಮೂಲಕ ಗ್ರಾಮೀಣ ಭಾಗದ ಜನರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ತಾಲೂಕಿನ ಹರಳಹಳ್ಳಿ–ಕಿರಂಗೂರು ಗ್ರಾಮದಿಂದ ಹನಗೋಡು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಡಾಂಬರೀಕರಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳು ಹದಗೆಟ್ಟಿವೆ. ಇದರಿಂದ ಸಾರ್ವಜನಿಕರು ಮತ್ತು ರೈತರ ಸಂಚಾರಕ್ಕೆ ತೊಂದರೆಯಾಗಿದೆ. ಹೊಸ ರಸ್ತೆ ನಿರ್ಮಾಣಕ್ಕೆ ಹಿಂದಿನ ಸರ್ಕಾರ ಹಣ ಮಂಜೂರು ಮಾಡಿರಲಿಲ್ಲ. ಈ ಬಾರಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಬಾಕಿ ಉಳಿದಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ನಾನು ಶಾಸಕನಾದ ಮೇಲೆ ರಸ್ತೆ ಕಾಮಗಾರಿಗೆ ಮೊದಲು ಭೂಮಿಪೂಜೆ ಮಾಡುತ್ತಿದ್ದು, ಉಳಿಕೆ ಅಭಿವೃದ್ಧಿ ಕೆಲಸಗಳನ್ನು ಆದ್ಯತೆ ಮೇರೆಗೆ ಹಂತ ಹಂತವಾಗಿ ಮಾಡಲಾಗುವುದು. ಸರ್ಕಾರ ಎಲ್ಲಾ ಶಾಸಕರಿಗೂ ಅನುದಾನ ಈ ವರ್ಷ ಇಲ್ಲ ಎಂದು ಹೇಳಿದ್ದಾರೆ. ಆದರೆ ಗ್ರಾಮಗಳ ರಸ್ತೆಗಳನ್ನು ನೋಡಿದರೆ ಭಯ ಪಡುವ ರೀತಿಯಲ್ಲಿ ಇವೆ. ಇವೆಲ್ಲವೂ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ನೀಡಿದರೂ ಸಾಲದು. ರೈತರಿಗೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡುತ್ತಿಲ್ಲ. ಉಚಿತ ಭಾಗ್ಯಗಳನ್ನು ನೀಡುವುದನ್ನು ನಾನು ಸಹ ಸ್ವಾಗತಿಸುತ್ತೇನೆ. ಆದರೆ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲ. ಯಾರೂ ಸಹ ಉಚಿತ ಭಾಗ್ಯಗಳನ್ನು ಕೇಳಿರಲಿಲ್ಲ. ಆದರೆ ನಮ್ಮ ರಾಜ್ಯದ ದುರ್ದೈವ. ಹನಗೋಡು ಭಾಗದಲ್ಲಿ ರಾತ್ರಿ ವೇಳೆ ವಿದ್ಯುತ್ ನೀಡುತ್ತಿರುವುದರಿಂದ ಕಾಡುಪ್ರಾಣಿಗಳ ಕಾಟದಿಂದ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ರೈತರಿಗೆ ಹೊಸ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ನೀಡಬೇಡಿ ಎಂದು ಈಗಾಗಲೇ ಆದೇಶ ಮಾಡಿದೆ. ಈ ಆದೇಶದಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಈ ಆದೇಶವನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಶಾಸಕರ ಅನುದಾನ ಐವತ್ತು ಲಕ್ಷ ಬಂದಿದೆ. ಈ ಹಣ ಇಡೀ ತಾಲೂಕಿಗೆ ಹಂಚಬೇಕು ಯಾವರೀತಿ ಕೆಲಸ ಮಾಡುವುದು ಎಂಬುದೇ ದೊಡ್ಡ ತಲೆನೋವಾಗಿ ಪರಿಣಮಿಸಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಧು, ಉಪಾಧ್ಯಕ್ಷ ಅಣ್ಣಯ್ಯ ಎಇಇ ಭೋಜರಾಜ್ ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು ಸುಭಾಷ್ ಪಿಡಿಒ ಮಹೇಶ್ ಇಂಜಿನಿಯರ್ ಪ್ರಭಾಕರ್, ಹನಗೋಡು ಗ್ರಾಪಂ ಅಧ್ಯಕ್ಷ ಚೆನ್ನಯ್ಯ, ಹೆಗ್ಗಂದೂರು ಗ್ರಾಪಂ ಅಧ್ಯಕ್ಷ ರವಿ, ರಾಮೇಗೌಡ, ಮಾದೇಗೌಡ ಮತ್ತಿತರರು ಉಪಸ್ಥಿತರಿದ್ದರು.

# ಅರಣ್ಯ ಇಲಾಖೆ ಕಾಡುಪ್ರಾಣಿಗಳ ಹಾವಳಿ ತಡೆಯಲಿ: ಹರ್ಷವರ್ಧನ್



ನಂಜನಗೂಡು, ನ.5– ತಾಲೂಕಿನ ಹೆಡಿಯಾಲ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಗೆ ಅರಣ್ಯ ಇಲಾಖೆ ಮುಂದಾಗಬೇಕು. ಇಲ್ಲದಿದ್ದಲ್ಲಿ ಬೆಳೆ ಹಾಗೂ ಜೀವ ಹಾನಿಯಿಂದ ಕಂಗೆಟ್ಟಿರುವ ಜನರು ಅರಣ್ಯ ಇಲಾಖೆ ವಿರುದ್ಧ ತಿರುಗಿ ಬೀಳಲಿದ್ದಾರೆ ಎಂದು ಮಾಜಿ ಶಾಸಕ ಬಿ. ಹರ್ಷವರ್ಧನ್ ಎಚ್ಚರಿಸಿದರು.

ಹುಲಿ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಾಗಿರುವ ಮಹದೇವನಗರ ಗ್ರಾಮದ ರೈತ ವೀರಭದ್ರ ಭೋವಿಯವರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ ಮಾತನಾಡಿದ ಅವರು, ಹೆಡಿಯಾಲ ವ್ಯಾಪ್ತಿಯ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ಕಂದಕ ನಿರ್ಮಾಣ ಹಾಗೂ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಕಾರ್ಯ ಬಾಕಿ ಉಳಿದಿದೆ. ಅರಣ್ಯ ಇಲಾಖೆಯವರು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವ ಮೂಲಕ ಕಾಡುಪ್ರಾಣಿಗಳ ಹಾವಳಿ ನಿಯಂತ್ರಿಸಬೇಕು. ಕಾಡುಪ್ರಾಣಿಗಳ ಹಾವಳಿಯಿಂದ ಬೇಸತ್ತಿರುವ ರೈತರು ಅರಣ್ಯ ಇಲಾಖೆ ವಿರುದ್ಧ ತಿರುಗಿ ಬಿದ್ದಿದ್ದಾರೆ. ಈ ಪರಿಸ್ಥಿತಿ ವಿಕೋಪಕ್ಕೆ ಹೋಗಲಿದ್ದು, ಮಾನವ ಹಾಗೂ ವನ್ಯಜೀವಿ ಸಂಘರ್ಷದ ಜತೆಗೆ ಅರಣ್ಯ ಇಲಾಖೆಯೊಂದಿಗೂ ಸಂಘರ್ಷ ಉಂಟಾಗಲಿದೆ. ರೈತರು ಕಷ್ಟಪಟ್ಟು ಬೆಳೆದಿರುವ ಬೆಳೆ ಹಾಗೂ ಜಾನುವಾರುಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಗಾಯಾಳು ರೈತ ವೀರಭದ್ರ ಭೋವಿಗೆ ಆರ್ಥಿಕ ನೆರವು ನೀಡಿದರು.

# ಹೆಚ್.ಡಿ.ಕೋಟೆ, ಸರಗೂರು ತಾಲೂಕು ಪತ್ರಕರ್ತರ ಸಂಘದ ಪದಗ್ರಹಣ



ಹೆಚ್.ಡಿ.ಕೋಟೆ, ನ.5– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಪತ್ರಕರ್ತರ ಸಂಘ ಜಿಲ್ಲೆಗೆ ಮಾದರಿಯಾಗುವ ನಿಟ್ಟಿನಲ್ಲಿ ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಿದೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ಕುಮಾರ್ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಮೈರಾಡ ಕಚೇರಿಯ ಆವರಣದಲ್ಲಿ ಭಾನುವಾರ ನಡೆದ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದಿನ ಪದಾಧಿಕಾರಿಗಳ ಸಾಮಾಜಿಕ ಕಾರ್ಯಗಳುನ್ನು ನೂತನ ಪದಾಧಿಕಾರಿಗಳು ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್ ಮಾತನಾಡಿ, ದೃಶ್ಯ ಮಾಧ್ಯಮದ ಜತೆ ಮುದ್ರಣ ಮಾಧ್ಯಮ ಭಾರಿ ಪೈಪೋಟಿ ನೀಡುವುದರೊಂದಿಗೆ ಸಾಗುತ್ತಿದೆ. ಸ್ಥಳೀಯ ವರದಿಗಾರರ ವೃತ್ತಿ ಬದ್ಧತೆಯಿಂದ ಇಂದು ದೃಶ್ಯ ಮಾಧ್ಯಮಕ್ಕೆ ಸಡ್ಡು ಹೊಡೆದು ಮುದ್ರಣ ಮಾಧ್ಯಮ ನಿಲ್ಲುವಂತಾಗಿದೆ ಎಂದರು.

ಪದಗ್ರಹಣ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಉಪಾಧ್ಯಕ್ಷ ಬಿ.ಕೆ.ಮಹೇಶ್, ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ, ಕಾರ್ಯದರ್ಶಿ ಎಚ್.ಪಿ.ದೊಡ್ಡಸಿದ್ದಯ್ಯ, ಖಜಾಂಚಿ ಮಂಜು ಕೋಟೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಹಂಪಪುರ ಬಿ.ನಾಗೇಶ್, ತುಂಬುಸೋಗೆ ರೇಣುಕಾ, ಜಶೀಲಾ, ಬಿ.ರಂಗರಾಜು, ರವಿಕುಮಾರ್ ಆರಾಧ್ಯ, ಸಿ.ಪುಟ್ಟರಾಜು, ಜಿ.ರವಿಕುಮಾರ್ ಅವರು ಪದಗ್ರಹಣ ಸ್ವೀಕರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಗ್ರಾಮಾಂತರ ಕಾರ್ಯದರ್ಶಿ ಮಹದೇವು, ನಿರ್ದೇಶಕ ದಾ.ರಾ.ಮಹೇಶ್, ಹೆಚ್.ಡಿ. ಕೋಟೆ ಮತ್ತು ಸರಗೂರು ತಾಲೂಕು ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಸತೀಶ್ ಬಿ.ಆರಾಧ್ಯ, ಸದಸ್ಯರಾದ ಬಸವರಾಜು, ಕನ್ನಡ ಪ್ರಮೋದ್, ವಾಸುಕಿ ನಾಗೇಶ್, ದಾಸೇಗೌಡ, ಶ್ರೀನಿಧಿ, ಚಿಕ್ಕಣ್ಣೇಗೌಡ, ಸುರೇಶ್, ಆನಂದ್, ಚಂದ್ರು ಶರವಣ ಇದ್ದರು.

## ಮುಂದುವರೆದ ಹುಲಿ ದಾಳಿ: ಮತ್ತೊಂದು ಹಸು ಬಲಿ



ಮಲ್ಕುಂಡಿ, ನ.5– ನಂಜನಗೂಡು ತಾಲೂಕಿನ ಮಲ್ಕುಂಡಿ ಹಾಗೂ ಹೆಡಿಯಾಲ ಭಾಗದಲ್ಲಿ ಹುಲಿ ದಾಳಿ ಮುಂದುವರೆದಿದ್ದು, ಭಾನುವಾರ ಬೆಳ್ಳಂಬೆಳಗ್ಗೆ ಮಲ್ಕುಂಡಿ ಗ್ರಾಮದಲ್ಲಿ ಹುಲಿ ಮತ್ತೊಂದು ಹಸುವನ್ನು ತಿಂದು ಹಾಕಿದೆ.

ಮಲ್ಕುಂಡಿ ಗ್ರಾಮದ ರಮೇಶ್ ಎಂಬುವರು ತಮ್ಮ ಜಮೀನಿನಲ್ಲಿ ಕಟ್ಟಿಹಾಕಿದ ಹಸುವಿನ ಮೇಲೆ ಏಕಾಏಕಿ ದಾಳಿ ನಡೆಸಿರುವ ಹುಲಿ ಕೊಂದುಹಾಕಿ, ಹಸುವಿನ ಅರ್ಧ ಭಾಗವನ್ನು ತಿಂದು ಉಳಿದ ಭಾಗವನ್ನು ಅಲ್ಲೇ ಬಿಟ್ಟುಹೋಗಿದೆ.

ಹುಲಿ ಓಡಾಡಿರುವ ಹೆಜ್ಜೆಯ ಗುರುತು ಕಂಡ ಗ್ರಾಮಸ್ಥರು ಭಯಭೀತರಾಗಿ, ತಕ್ಷಣ ಅರಣ್ಯ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಸಿಬ್ಬಂದಿ, ಪರಿಶೀಲಿಸಿ ಹುಲಿ ಸೆರೆ ಹಿಡಿಯಲು ಸಿಸಿ ಕ್ಯಾಮರಾದ ಮೂಲಕ ಕೂಂಬಿಂಗ್ ನಡೆಸಿದ್ದಾರೆ. ಈಗಾಗಲೇ ಕಳೆದ ಮೂರು ದಿನಗಳಿಂದ ಹೆಡಿಯಾಲ ಭಾಗದ ಕಾಡಂಚಿನಲ್ಲಿ ಹುಲಿ ಸೆರೆಗೆ ಸಾಕಾನೆಗಳ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಇತ್ತ ಹುಲಿ ದಾಳಿ ಮುಂದುವರೆದಿದೆ. ಇದರಿಂದ ಗ್ರಾಮದ ರೈತರು ತಮ್ಮ ಜಮೀನುಗಳಿಗೆ ತೆರಳಿ ಕೆಲಸ ಮಾಡಲು ಭಯಗೊಂಡಿದ್ದಾರೆ. ತಕ್ಷಣ ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರ ಒತ್ತಾಯಿಸಿದ್ದಾರೆ.

## ಚಿರತೆ ದಾಳಿಗೆ ಕುರಿ ಬಲಿ



**ಮಲ್ಕುಂಡಿ:** ಚಿರತೆ ದಾಳಿಗೆ ಕುರಿ ಬಲಿಯಾಗಿರುವ ಘಟನೆ ಸಮೀಪದ ಜಾಲಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ವೆಂಕಟರಾಜ್ ಅರಸ್ ಎಂಬುವರು ತಮ್ಮ ಜಮೀನಿನಲ್ಲಿ ಕುರಿಗಳನ್ನು ಮೇಯಿಸುತ್ತಿದ್ದ ವೇಳೆ ಪೊದೆಯಲ್ಲಿದ್ದ ಚಿರತೆ ಏಕಾಏಕಿ ಕುರಿ ಮೇಲೆ ದಾಳಿ ಮಾಡಿದೆ. ಅರೆಬರೆ ತಿಂದುಹಾಕಿದೆ. ಇದನ್ನು ಕಂಡ ಅಕ್ಕಪಕ್ಕದ ಜಮೀನಿನವರು ಕಿರುಚಾಡಿದ್ದಾರೆ. ಇದರಿಂದ ಗಾಬರಿಗೊಂಡ ಚಿರತೆ ಕುರಿಯ ಉಳಿದ ಭಾಗವನ್ನು ಅಲ್ಲೇ ಬಿಟ್ಟು ಪರಾರಿಯಾಗಿದೆ. ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ.

# ಪಾರ್ಶ್ವನಾಥ ಬಸದಿಯ ಜೀರ್ಣೋದ್ಧಾರಕ್ಕೆ ಚಾಲನೆ

## ಮೂಗೂರಿನಲ್ಲಿ ಶ್ರೀ ಕ್ಷೇತ್ರ ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯಸ್ವಾಮೀಜಿ ಭೂಮಿಪೂಜೆ



ತಿ.ನರಸೀಪುರ, ನ.5– ತಾಲೂಕಿನ ಮೂಗೂರು ಗ್ರಾಮದ ಭಗವಾನ್ ಶ್ರೀ ಪಾರ್ಶ್ವನಾಥ ಬಸದಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗೆ ಶ್ರೀ ಕ್ಷೇತ್ರ ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯಸ್ವಾಮೀಜಿ ಭಾನುವಾರ ಭೂಮಿ ಪೂಜೆ ನೆರವೇರಿಸಿದರು.

ಗ್ರಾಮದ ಬಸ್ತಿ ದೇವರ ಗುಡಿ ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದ ಹಿನ್ನೆಲೆಯಲ್ಲಿ ಮೂಗೂರು ಬಸ್ತಿ ದೇವರ ಗುಡಿ ದಿಗಂಬರ ಜೈನ ಸೇವಾ ಟ್ರಸ್ಟ್, ಶ್ರೀ ಧರ್ಮಸ್ಥಳ ಮಂಜುನಾಥ ಧರ್ಮೋತ್ಥಾನ ಟ್ರಸ್ಟ್, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರ ಇಲಾಖೆ ವತಿಯಿಂದ ಬಸದಿಯ ಜೀರ್ಣೋದ್ಧಾರ ಕಾಮಗಾರಿ ನಡೆಸಲಾಗಿದ್ದು, ಸಂಪೂರ್ಣ ಶಿಲಾಮಯವಾದ ದೇವಾಲಯ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ಸುಮಾರು 36 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಆರಂಭಗೊಂಡಿದ್ದು, 18 ತಿಂಗಳಲ್ಲಿ ಜೀರ್ಣೋದ್ಧಾರ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ.

ಈ ವೇಳೆ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿ ಬಗ್ಗೆ ವಿವರ ನೀಡಿದ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನ ಸೂಪರ್ ವೈಸರ್ ಜಯಕೀರ್ತಿ, ದೇವಾಲಯ ಶಿಥಿಲವಾಗಿರುವುದರಿಂದ ಸಂಪೂರ್ಣವಾಗಿ ನೆಲಸಮಗೊಳಿಸಿ ಮೂಲ ಸ್ವರೂಪಕ್ಕೆ ಯಾವುದೇ ಧಕ್ಕೆಯಾಗದಂತೆ ಕಾಮಗಾರಿ ನಡೆಸಲಾಗುವುದು. ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಈ ಬಸದಿಗೆ ಐತಿಹಾಸಿಕ ಹಿನ್ನೆಲೆ ಇದೆ. ಜೀರ್ಣೋದ್ಧಾರ ಸಮಯದಲ್ಲಿ ತಳಪಾಯದಿಂದ ಭದ್ರತೆ ಮಾಡಿ ಶಿಥಿಲವಾಗಿರುವ ಕಲ್ಲುಗಳನ್ನು ಬದಲಿಸಿ, ಗುಣಮಟ್ಟದ ಕಲ್ಲುಗಳನ್ನು ಉಪಯೋಗಿಸಲಾಗುವುದು ಎಂದರು.

**ಜೀರ್ಣೋದ್ಧಾರ!:** ಐತಿಹಾಸಿಕ ಹಿನ್ನೆಲೆ ಹೊಂದಿರುವ ದೇವಸ್ಥಾನಗಳ ಶಿಲ್ಪಕಲೆ ಸಂರಕ್ಷಣೆ ಮಾಡುವ ನಿಯಮ ಧರ್ಮೋತ್ಥಾನ ಟ್ರಸ್ಟ್‌ನದ್ದಾಗಿದ್ದು, ನವೀಕರಣ ಮಾಡಲಾಗುವುದಿಲ್ಲ. ಯಥಾಸ್ಥಿತಿಯೊಂದಿಗೆ ಯಾವುದೇ ಧಕ್ಕೆಯಾಗದಂತೆ ಜೀರ್ಣೋದ್ಧಾರ ಮಾಡಲಾಗುವುದು. ವಿಮಾನಗೋಪುರ, ನೆಲಹಾಸು, ವಿದ್ಯುತ್ ಹಾಗೂ ಮರದ ಬಾಗಿಲುಗಳನ್ನು ನೂತನವಾಗಿ ಅಳವಡಿಸಿ ಬಸದಿಯನ್ನು ಸ್ಥಳೀಯ ಟ್ರಸ್ಟ್‌ನ ಸುಪರ್ದಿಗೆ ನೀಡಲಾಗುವುದು. ಮುಂದೆ ಅವರೇ ನಿರ್ವಹಣೆ ಮಾಡಲಿದ್ದಾರೆ ಎಂದು ಜಯಕೀರ್ತಿ ತಿಳಿಸಿದರು.

ದೇವಸ್ಥಾನ ನಿರ್ಮಾಣಕ್ಕೆ ಮೂರನೇ ಒಂದು ಭಾಗ ಹಣ ಹಂಚಿಕೆಯೊಂದಿಗೆ ಧರ್ಮೋತ್ಥಾನ ಟ್ರಸ್ಟ್, ಪುರಾತತ್ವ ಇಲಾಖೆ ಹಾಗೂ ಸ್ಥಳೀಯ ಸಮಿತಿ ಬಸದಿ ನಿರ್ಮಾಣ ಮಾಡಲಾಗುತ್ತಿದೆ. ಐತಿಹಾಸಿಕ ಹಿನ್ನೆಲೆಯ ಆಳತೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಭುವನ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯಸ್ವಾಮೀಜಿ ದೇವಸ್ಥಾನದ ಹಿನ್ನೆಲೆ, ಮಹಿಮೆ, ಇತಿಹಾಸದ ಮಾಹಿತಿ ನೀಡಿದರು. ನಗರಸಭೆ ಮಾಜಿ ಸದಸ್ಯ ನಾಗಭೂಷಣ್, ಡಾ.ಎಚ್.ಎಸ್.ಎಲ್.ಕುಮಾರ್, ಪ್ರಸನ್ನ ಕುಮಾರ್, ಮೂಗೂರು ಬಸ್ತಿ ದೇವರ ಗುಡಿ ದಿಗಂಬರ ಜೈನ ಸೇವಾ ಟ್ರಸ್ಟ್‌ನ ಅಧ್ಯಕ್ಷೆ ಶೀಲಾ ಅನಂತರಾಜು, ಉಪಾಧ್ಯಕ್ಷ ಎಂ.ಪಿ.ನಿರ್ಮಲ ಕುಮಾರ್, ಕಾರ್ಯದರ್ಶಿ ಮಹಾವೀರ ಬಿ.ಜೈನ್, ಸಹಕಾರ್ಯದರ್ಶಿ ಸಿ.ಬಿ.ಸತೀಶ್, ಸಿ.ಬಿ.ನಾಗೇಂದ್ರಯ್ಯ, ಎನ್.ಜಿನೇಂದ್ರ ಪ್ರಕಾಶ್, ಕೋಶಾಧಿಕಾರಿ ಎಸ್.ಎ.ಪ್ರಶಾಂತ್, ಗ್ರಾಪಂ ಅಧ್ಯಕ್ಷ ಶಿವಣ್ಣ ಹಾಗೂ ಟ್ರಸ್ಟಿಗಳು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ



| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಟೈಗರ್ ನಾಗೇಶ್ವರ್ ರಾವ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಘೋಸ್ಟ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಯಾರಿಯನ್ (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಭಗವತಿ ಕೇಸರಿ (ತೆ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲಿಯೋ (ಕ) | 2 ಪ್ರದರ್ಶನಗಳು |
| **ರಾಜಕಮಲ್** | |
| ಮಾ ಊರಿ ಪಾಲಿಮೆರಿ ಪಾರ್ಟ್–2 (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಟಗರುಫಲ್ಯ(ಕ) | 4 ಪ್ರದರ್ಶನಗಳು |
| **ಲಿಡೋ** | |
| ಭಾವಪೂರ್ಣ (ಕ) | 2 ಪ್ರದರ್ಶನಗಳು |
| ಲಿಯೋ (ತ) | 2 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಲಿಯೋ(ತ) | 4 ಪ್ರದರ್ಶನಗಳು |
| **ಪ್ರಭಾ** | |
| ಟಿಆರ್‌ಪಿ ರಾಮ(ಕ) | 2 ಪ್ರದರ್ಶನಗಳು |
| ಗರುಡ ಪುರಾಣ(ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | **ಟಗರುಪಲ್ಯ (ಕ):** ಬೆ.10.45ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಲಿಯೋ (ತ):** ಸಂ.4ಕ್ಕೆ, **ಘೋಸ್ಟ್ (ಕ):** ರಾ.9.50ಕ್ಕೆ. |
| ಸ್ಕ್ರೀನ್ 2 | **ಗರುಡ ಪುರಾಣ (ಕ):** ಬೆ.10.50ಕ್ಕೆ, **ಲಿಯೋ (ತ):** ಮ.1.35ಕ್ಕೆ, **ಯುಟಿ 69 (ಹಿಂ):** ಸಂ.4.45ಕ್ಕೆ, **ಕೀಡಾ ಕೋಲ (ತೆ):** ರಾ.7.15ಕ್ಕೆ, ರಾ.9.45ಕ್ಕೆ |
| ಸ್ಕ್ರೀನ್ 3 | **12th ಫೇಲ್ (ಹಿಂ):** ಬೆ.10.45ಕ್ಕೆ, ರಾ.7ಕ್ಕೆ, **ಕ್ರೇಜಿ ಕೀರ್ತಿ (ಕ):** ಮ.1.45ಕ್ಕೆ, **ಟಗರುಪಲ್ಯ (ಕ):** ಸಂ.4.15ಕ್ಕೆ, **ಗರುಡನ್ (ಮ):** ರಾ.9.55ಕ್ಕೆ. |
| ಸ್ಕ್ರೀನ್ 4 | **ಘೋಸ್ಟ್ (ಕ):** ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, **ಟಗರು ಪಲ್ಯ (ಕ):** ರಾ.10ಕ್ಕೆ. |

### ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | **ಘೋಸ್ಟ್ (ಕ):** ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ. |
| ಸ್ಕ್ರೀನ್ 2 | **ಟಗರುಪಲ್ಯ (ಕ):** ರಾ.10.05ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಲಿಯೋ (ತ):** ಮ.12.55ಕ್ಕೆ. |
| ಸ್ಕ್ರೀನ್ 3 | **ಕೀಡಾ ಕೋಲ (ತೆ):** ಬೆ.9.55ಕ್ಕೆ, ಮ.3.25ಕ್ಕೆ, **ಟಗರು ಪಲ್ಯ (ಕ):** ಮ.12.35ಕ್ಕೆ, **ಲಿಯೋ (ಕ):** ಸಂ.6.05ಕ್ಕೆ, **ಲಿಯೋ (ತ):** ರಾ.9.30ಕ್ಕೆ. |
| ಸ್ಕ್ರೀನ್ 4 | **ಲಿಯೋ (ತ):** ಬೆ.10.30ಕ್ಕೆ, **ಟಗರುಪಲ್ಯ (ಕ):** ಮ.1.55ಕ್ಕೆ, **ಟಿ.ಆರ್.ಪಿ. ರಾಮ (ಕ):** ಸಂ.4.45ಕ್ಕೆ, **ಗರುಡನ್ (ಮ):** ರಾ.7.30ಕ್ಕೆ, **ಕೀಡಾ ಕೋಲ(ತೆ):** ರಾ.10.30ಕ್ಕೆ. |

### ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | **ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧ್ವಜ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ. |
| ಸ್ಕ್ರೀನ್ 2 | **ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | **ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ. |
| ಸ್ಕ್ರೀನ್ 4 | **ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ |

### ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

**ಭಗವಂತ್ ಕೇಸರಿ (ತೆ):** ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, **ಗಣಪತ್ (ಹಿಂ):** ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, **ಘೋಸ್ಟ್ (ಕ):** ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, **ಲಿಯೋ (ಕ):** ಮ.12.15ಕ್ಕೆ, **ಲಿಯೋ (ತ):** ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಲಿಯೋ (ತ):** ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, **ಯಾರಿಯನ್ 2 (ಹಿಂ):** ಬೆ.9.55ಕ್ಕೆ, ರಾ.7.20ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಕಂಪಲಾಪುರದಲ್ಲಿ ರಾಜ್ಯೋತ್ಸವ ಆಚರಣೆ




ಕಂಪಲಾಪುರ, ನ.5– ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ಮಹದೇವಯ್ಯ ಮಾತನಾಡಿ, ಬೇರೆ ಭಾಷೆಗಳನ್ನು ಕಲಿಯಬೇಕು. ಆದರೆ, ಮಾತೃಭಾಷೆ ಕನ್ನಡವನ್ನು ಮರೆಯಬಾರದು. ಕನ್ನಡ ನಾಡಿಗೆ ಭವ್ಯಪರಂಪರೆಯ ಇತಿಹಾಸವಿದೆ. ಇದನ್ನು ಜಗತ್ತಿಗೆ ಪರಿಚಯಿಸುವ ನಿಟ್ಟಿನಲ್ಲಿ ನಾವೆಲ್ಲಾ ಸಾಮಾಜಿಕ ಜವಾಬ್ದಾರಿ ಹೆಚ್ಚಿಸಿಕೊಳ್ಳಬೇಕು ಎಂದರು.

ಹಿಂದಿ ಶಿಕ್ಷಕಿ ಪೂರ್ಣಿಮಾ ಮಾತನಾಡಿ, 1905ರಲ್ಲಿ ಮೈಸೂರು ಸಂಸ್ಥಾನ ಏಕೀಕರಣವಾಗಿ ಅದರ ನೇತೃತ್ವವನ್ನು ಹುಯಿಲಗೊಳ ನಾರಾಯಣರಾವ್ ವಹಿಸಿದ್ದರು. 1956ರ ನ.1ರಂದು ಕನ್ನಡ ಮಾತನಾಡುವ ಭಾಷಾವಾರು ಪ್ರಾಂತಗಳು ಒಟ್ಟಾಗಿ ಅಂದು ಮೈಸೂರು ಸಂಸ್ಥಾನಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಆ ದಿನವನ್ನು ನಾವು ನಾಡಹಬ್ಬವಾಗಿ ಆಚರಿಸುತ್ತಿದ್ದೇವೆ ಎಂದರು.


ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಶಿಕ್ಷಕರಾದ ಶಾರದಮ್ಮ, ಸಂಜಯ್ ಕುಮಾರ್, ಗೀತಾ ಮಾತನಾಡಿದರು. ಇದೇ ವೇಳೆ ಭಾಷಾ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳು ಕನ್ನಡ ಗೀತೆಗಳಿಗೆ ನೃತ್ಯ ಪ್ರದರ್ಶಿಸಿದರು. ಎಸ್‌ಡಿಎಂಸಿ ಸದಸ್ಯ ರಾಜೇಶ್, ಶಿಕ್ಷಕರಾದ ಮಹೇಶ್, ಪ್ರಸನ್ನ, ಭಾಗ್ಯ, ಗಿರಿಜಾ, ಸುಜಾತ, ಭವಾನಿ, ಶಾಲಿನಿ ಇತರರಿದ್ದರು.

## ನಂಜುಂಡಾಚಾರ್ ನಿಧನ



**ಹುಣಸೂರು:** ತಾಲೂಕಿನ ಬಿಳಿಕೆರೆ ಹೋಬಳಿಯ ವಡೇರಹೊಸಹಳ್ಳಿ ಗ್ರಾಮದ ಯಜಮಾನ್ ನಂಜುಂಡಾಚಾರ್ (76) ಭಾನುವಾರ ಸಂಜೆ ಅನಾರೋಗ್ಯದಿಂದ ನಿಧನರಾದರು. ಮೃತರು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ವಡೇರಹೊಸಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ವಿ.ಎನ್.ಕೆಂಡಗಣ್ಣಪ್ಪ



**ನಂಜನಗೂಡು:** ತಾಲೂಕಿನ ಹಗಿನವಾಳು ಗ್ರಾಮ ಪಂಚಾಯಿತಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ವಳಗೆರೆ ಗ್ರಾಮದ ವಿ.ಎನ್.ಕೆಂಡಗಣ್ಣಪ್ಪ (80) ಭಾನುವಾರ ನಿಧನರಾದರು. ಮೃತರು ಪತ್ನಿ ನಿರ್ಮಲಮ್ಮ, ಪುತ್ರರಾದ ಶ್ಯಾಮ್ ಪಟೇಲ್, ಭಾನು ಪಟೇಲ್, ಪುತ್ರಿ ಮಮತಾ, ಅಪಾರ ಬಂಧು–ಬಳಗ ಅಗಲಿದ್ದಾರೆ. ಸೋಮವಾರ ವಳಗೆರೆ ಗ್ರಾಮದ ಮೃತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಬರ ಪರಿಹಾರ ವಿಚಾರದಲ್ಲಿ ಕೇಂದ್ರದಿಂದ ಮಲತಾಯಿ ಧೋರಣೆ

## ಸಿಎಂ ಸಿದ್ದರಾಮಯ್ಯ ಪುನರುಚ್ಚಾರ



ಮೈಸೂರು,ನ.5(ಎಂಟಿವೈ)– ರಾಜ್ಯದಲ್ಲಿ ಬರದ ಪರಿಸ್ಥಿತಿ ತೀವ್ರಗೊಂಡಿದ್ದರೂ ಕೇಂದ್ರ ಸರ್ಕಾರ ಪರಿಹಾರ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಬೆಂಗಳೂರಿಂದ ವಿಶೇಷ ವಿಮಾನದಲ್ಲಿ ಭಾನುವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲದಿಂದಾಗಿ 33 ಸಾವಿರ ಕೋಟಿ ರೂ. ನಷ್ಟ ಸಂಭವಿಸಿದೆ. ಎನ್‌ಡಿಆರ್‌ಎಎಫ್ ನಿಯಮಾನುಸಾರ 17,900 ಕೋಟಿ ರೂ. ಪರಿಹಾರ ಮೊತ್ತ ನೀಡುವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದ್ದರೂ ಭೇಟಿಗೆ ಮೋದಿ ಅವರು ಅವಕಾಶ ನೀಡಲಿಲ್ಲ. ಆ ನಂತರವೂ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಸಚಿವರನ್ನು ದೆಹಲಿಗೆ ಕಳುಹಿಸಲಾಗಿತ್ತು. ಈ ಮೂವರು ಸಚಿವರಿಗೂ ಭೇಟಿಗೆ ಅವಕಾಶ ನೀಡಲಿಲ್ಲ. ಇದರಿಂದ ಸಚಿವರು ತಮ್ಮ ಇಲಾಖೆಗಳ ಕಾರ್ಯದರ್ಶಿಗಳಿಗೆ ನಮ್ಮ ಮನವಿ ಸಲ್ಲಿಸಿ ಬಂದಿದ್ದಾರೆ. ಇದನ್ನು ಗಮನಿಸಿದರೆ ಕರ್ನಾಟಕದ ಮೇಲೆ ಕೇಂದ್ರ ಸರ್ಕಾರಕ್ಕೆ ಇರುವ ಮಲತಾಯಿ ಧೋರಣೆ ತಿಳಿಯುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿರುವುದನ್ನು ಬಿಜೆಪಿ ಸಹಿಸುತ್ತಿಲ್ಲ. ಆ ಕಾರಣದಿಂದಲೇ ಕರ್ನಾಟಕವನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಬರ ಪರಿಹಾರ ಕಾರ್ಯ ಆರಂಭ:** ರಾಜ್ಯದಲ್ಲಿ 216 ತಾಲೂಕುಗಳಲ್ಲಿ ಬರದ ಪರಿಸ್ಥಿತಿ ಇದೆ. ಕೇಂದ್ರ ಸರ್ಕಾರ ಬರ ಪರಿಹಾರ ನೀಡದೇ ಇದ್ದರೂ, ರಾಜ್ಯ ಸರ್ಕಾರ ಬರ ನಿರ್ವಹಣೆಗೆ ವಿವಿಧ ಕಾಮಗಾರಿ ಆರಂಭಿಸಿದೆ ಬರ ಪರಿಹಾರಕ್ಕಾಗಿ ಈಗಾಗಲೇ 900 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರು, ಉದ್ಯೋಗ ನೀಡುವುದು ಸೇರಿದಂತೆ ಇನ್ನಿತರ ಚಟುವಟಿಕೆ ಬಿರುಸಾಗಿ ನಡೆಸಲಾಗುತ್ತಿದೆ. ಯಾವುದೂ ನಿಂತಿಲ್ಲ ಎಂದರು.

**ಬರ ಪರಿಸ್ಥಿತಿ ಕುರಿತು ವರದಿ ನೀಡಲು ಸೂಚನೆ:** ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳ ಉಸ್ತುವಾರಿ ಸಚಿವರಿಗೆ ಸೂಚನೆ ನೀಡಲಾಗಿದ್ದು, ಬರ ಪರಿಸ್ಥಿತಿ ಹಾಗೂ ಬರ ಪರಿಹಾರ ಕಾರ್ಯದ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

**ಪತ್ರ ಬರೆದ ಮೇಲೆ ಬಿಡುಗಡೆ:** ಕೇಂದ್ರ ಸರ್ಕಾರ ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ನೀಡಬೇಕಾಗಿದ್ದ ಅನುದಾನ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರ ಪತ್ರ ಬರೆದ ನಂತರ ಇದೀಗ 600 ಕೋಟಿ ರೂ.ಗಳ ಬಿಡುಗಡೆ ಮಾಡಿದೆ ಎಂದರು.

**ಮೋದಿಗೆ ಪ್ರತಿಷ್ಠೆ ಪ್ರಶ್ನೆ:** ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಬೇಕು ಎಂದು ಪ್ರಧಾನಿ ಮೋದಿ ಹಾಗೂ ಕೇಂದ್ರ ನಾಯಕರು ಪಣತೊಟ್ಟಿದ್ದರು. ಆ ಕಾರಣದಿಂದಲೇ ಮೋದಿ ಅವರು ಪದೇ ಪದೆ ಕರ್ನಾಟಕಕ್ಕೆ ಬಂದು ಪ್ರಚಾರ ನಡೆಸಿದ್ದರು. ಆದರೂ ಬಿಜೆಪಿ ಹೀನಾಯವಾಗಿ ಸೋತಿರುವುದರಿಂದ ಕರ್ನಾಟಕದ ಜನರ ಮೇಲೆ ನಿರ್ಲಕ್ಷ್ಯ ಭಾವನೆ ಹೊಂದಿದ್ದಾರೆ. ಆ ಕಾರಣದಿಂದಲೇ ನ್ಯಾಯಬದ್ಧವಾಗಿ ರಾಜ್ಯಕ್ಕೆ ನೀಡಬೇಕಾಗಿರುವ ಬರ ಪರಿಹಾರ ಮೊತ್ತ ನೀಡದೆ ವಂಚಿಸುವ ಯತ್ನ ನಡೆಸಲಾಗಿದೆ ಎಂದು ವಿಷಾದಿಸಿದರು.

**ರಾಜ್ಯ ಬಿಜೆಪಿ ನಾಯಕರಿಗೆ ಕಾಳಜಿಯಿಲ್ಲ:** ರಾಜ್ಯಕ್ಕೆ ಬರಬೇಕಾದ ಬರ ಪರಿಹಾರ ಮೊತ್ತ ಕೊಡಿಸುವ ಸಂಬಂಧ ರಾಜ್ಯ ಬಿಜೆಪಿ ನಾಯಕರು ಮೌನವಹಿಸಿದ್ದಾರೆ. ರಾಜ್ಯದ ಜನರು ಹಾಗೂ ರೈತರ ಬಗ್ಗೆ ರಾಜ್ಯ ಬಿಜೆಪಿ ನಾಯಕರಿಗೆ ಕಾಳಜಿ ಇದ್ದಿದ್ದರೆ, ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನುಂಟು ಮಾಡಿ ಬರ ಪರಿಹಾರ ಮೊತ್ತ ಕೊಡಿಸುವ ಪ್ರಯತ್ನ ಮಾಡುತ್ತಿದ್ದರು. ಅದನ್ನು ಬಿಟ್ಟು ಇದೀಗ ಬರಪೀಡಿತ ಪ್ರದೇಶಕ್ಕೆ ಹೋಗಿ ಜನರ ಮುಂದೆ ಮೊಸಳೆ ಕಣ್ಣೀರು ಸುರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಬಿಟ್ಟು ದೆಹಲಿಗೆ ಹೋಗಿ ಕೇಂದ್ರದ ಮುಂದೆ ಮಾತಾಡಲಿ ಎಂದು ಸವಾಲು ಹಾಕಿದರು.

# ಲೋಕಾಯುಕ್ತ ಅಧಿಕಾರಿಗಳ ತಾಲೂಕುವಾರು ಭೇಟಿ; ದೂರು ಸ್ವೀಕಾರ

ಮೈಸೂರು, ನ.5– ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಂಬಂಧಪಟ್ಟ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿ ಮಾಡಿದ ದೂರುಗಳನ್ನು ನಮೂನೆ 01 ರಲ್ಲಿ ಮತ್ತು 02 ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳೊಡನೆ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ನ.8 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ತಾಲೂಕುವಾರು ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಸರಗೂರು ತಾಲೂಕಿನ ಪಿ.ಡಬ್ಲ್ಯೂ.ಡಿ ಗೆಸ್ಟ್‌ಹೌಸ್, ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಪ್ರವಾಸಿ ಮಂದಿರ, ಮಡಿಕೇರಿ ಜಿಲ್ಲೆಯ ವಿರಾಜಪೇಟೆ ತಾಲೂಕಿನ ತಾಲೂಕು ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕಾರ ಕಾರ್ಯಕ್ರಮವು ನಡೆಯುತ್ತದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಅಧೀಕ್ಷಕ ಎಸ್. ಸುರೇಶ್ ಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






# ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ನಿವಾಸಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ

● ಶಿವಮೊಗ್ಗದಲ್ಲಿ ನಡೆದ ವಿಐಎಸ್‌ಎಲ್ ಕಾರ್ಖಾನೆಯ ಶತಮಾನೋತ್ಸವಕ್ಕೆ ತೆರಳಿದಾಗ ಮಾಜಿ ಸಿಎಂ ಮನೆಯಲ್ಲಿ ಆತಿಥ್ಯ ಸ್ವೀಕಾರ ● ಭೇಟಿಯ ಹಿಂದೆ ರಾಜಕೀಯವಿಲ್ಲ

ಮೈಸೂರು, ನ.5–ಮೈಸೂರು ರಾಜ ವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಶನಿವಾರ ಶಿವಮೊಗ್ಗದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿ ಆತಿಥ್ಯ ಸ್ವೀಕರಿಸಿದರು.



ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿತವಾದ ಭದ್ರಾವತಿ ಉಕ್ಕಿನ ಕಾರ್ಖಾನೆ ಎಂದು ಕರೆಯಲ್ಪಡುವ ವಿಐಎಸ್‌ಎಲ್ ಕಾರ್ಖಾನೆಯ ಶತಮಾನೋತ್ಸವ ಸಮಾರಂಭ ಶಿವಮೊಗ್ಗದ ನ್ಯೂ ಟೌನ್ ಹಾಕಿ ಮೈದಾನದಲ್ಲಿ ನಡೆದಿದ್ದು, ಈ ಸಮಾರಂಭದಲ್ಲಿ ಭಾಗವಹಿಸಿದ್ದ ಯದುವೀರ್ ಅವರನ್ನು ಯಡಿಯೂರಪ್ಪ ಅವರು ಭೋಜನಕ್ಕೆ ಆಹ್ವಾನಿಸಿದ ಮೇರೆಗೆ ಯದುವೀರ್ ದಂಪತಿ ಯಡಿಯೂರಪ್ಪ ನಿವಾಸಕ್ಕೆ ತೆರಳಿ ಆತಿಥ್ಯ ಸ್ವೀಕರಿಸಿದರು.

ಯದುವೀರ್ ಮತ್ತು ಯಡಿಯೂರಪ್ಪ ಭೇಟಿ ಹಿನ್ನೆಲೆಯಲ್ಲಿ ಯಾವುದೇ ರೀತಿಯ ರಾಜಕೀಯ ಬೆಳವಣಿಗೆ ಇರಲಿಲ್ಲ. ಮಹಾರಾಜರು ತಮ್ಮ ಊರಿಗೆ ಬರುತ್ತಿರುವುದರಿಂದ ಅವರನ್ನು ಊಟಕ್ಕೆ ಕರೆದಿದ್ದೀನಿ ಎಂದು ಸ್ವತಃ ಯಡಿಯೂರಪ್ಪ ಅವರೇ ಶುಕ್ರವಾರ ಸ್ಪಷ್ಟಪಡಿಸಿದ್ದರು. ಅದರಂತೆ ಈ ಭೇಟಿ ನಡೆದಿದೆ.



ವಿಐಎಸ್‌ಎಲ್ ಕಾರ್ಖಾನೆಯು ಸ್ಥಗಿತಗೊಂಡಿದ್ದು, ಅದನ್ನು ಸರ್ಕಾರದಿಂದ ಪುನರಾರಂಭ ಮಾಡಬೇಕು ಎಂಬ ಆಗ್ರಹ ಕೇಳಿಬಂದಿದ್ದು, ಅದರ ಒಂದು ಭಾಗವಾಗಿ ಕಾರ್ಖಾನೆಯ ಶತಮಾನೋತ್ಸವ ಸಮಾರಂಭವನ್ನು ಶಿವಮೊಗ್ಗದಲ್ಲಿ ಯಡಿಯೂರಪ್ಪನವರ ಮುಂದಾಳತ್ವದಲ್ಲೇ ಏರ್ಪಡಿಸಲಾಗಿತ್ತು. ಈ ಸಮಾರಂಭದಲ್ಲಿ ಮಾತನಾಡಿದ ಯದುವೀರ್, ಕಾರ್ಖಾನೆಯ ಉಳಿವಿಗೆ ಮೈಸೂರು ಅರಮನೆ ಎಂದಿಗೂ ಅದರ ಕಾರ್ಮಿಕರೊಂದಿಗೆ ಇರಲಿದೆ ಎಂದು ಅಭಯ ನೀಡಿದ್ದರು.

ಈ ಸಮಾರಂಭದಲ್ಲಿ ಸುತ್ತೂರು ಶ್ರೀಗಳು, ಸಿದ್ಧಗಂಗಾ ಶ್ರೀಗಳು, ಆದಿಚುಂಚನಗಿರಿ ಶ್ರೀಗಳು, ಬೆಕ್ಕಿನ ಕಲ್ಮಠದ ಶ್ರೀಗಳು, ಬೆಳಕಿ ಶ್ರೀಗಳು ಸೇರಿದಂತೆ ಹಲವಾರು ಮಠಾಧೀಶರು ಹಾಗೂ ಪಕ್ಷಾತೀತವಾಗಿ ರಾಜಕಾರಣಿಗಳು ಭಾಗವಹಿಸಿದ್ದರು. ಯದುವೀರ್ ಮತ್ತು ಯಡಿಯೂರಪ್ಪ ಭೇಟಿಯ ಹಿಂದೆ ಯಾವುದೇ ರೀತಿಯ ರಾಜಕೀಯ ಬೆಳವಣಿಗೆ ಇಲ್ಲದಿದ್ದರೂ ಕೆಲವು ಪತ್ರಿಕೆಗಳು ಯದುವೀರ್ ಅವರಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಟಿಕೆಟ್ ನೀಡಲು ಬಿಜೆಪಿ ಮುಂದಾಗಿರುವುದಾಗಿ ವರದಿ ಮಾಡಿವೆ.
















# ಆಶ್ರಮ ಶಾಲೆ ಮಕ್ಕಳಿಗೆ ಆರೋಗ್ಯ ತಪಾಸಣೆ



ಮೈಸೂರು,ನ.5(ಎಂಟಿವೈ)– ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಶೆಟ್ಟಿಹಳ್ಳಿ, ಕೊಳವಿಗೆ ಆಶ್ರಮಶಾಲೆ ಮಕ್ಕಳಿಗಾಗಿ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿ, ಅಗತ್ಯವುಳ್ಳ ಮಕ್ಕಳಿಗೆ ಚಿಕಿತ್ಸೆ ನೀಡಲಾಯಿತು.

ಆಶ್ರಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬುಡಕಟ್ಟು ಸಮುದಾಯ ಮಕ್ಕಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಮೈಸೂರು ಜಿಲ್ಲೆ ಸೇರಿದಂತೆ ವಿವಿಧೆಡೆಯಿರುವ ಆಶ್ರಮ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿ, ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದ್ದು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಶೆಟ್ಟಿಹಳ್ಳಿ ಹಾಗೂ ಕೊಳವಿಗೆ ಶಾಲೆಯಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ 140 ವಿದ್ಯಾರ್ಥಿಗಳಿಗೆ ತಪಾಸಣೆ ಮಾಡಲಾಯಿತು.

ಈ ವೇಳೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಮಾತನಾಡಿ, ಸಂಸ್ಥೆ ವತಿಯಿಂದ ಜಿಲ್ಲೆಯಲ್ಲಿ ಇದುವರೆಗೆ 6 ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗಿದೆ. ಇದರಲ್ಲಿ 12 ಆಶ್ರಮ ಶಾಲೆಯ ಮಕ್ಕಳಿಗೆ ತಪಾಸಣೆ ನಡೆಸಲಾಗಿದೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ, ವಾಕ್ ಮತ್ತು ಶ್ರವಣ ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತಿರುವ ಈ ಶಿಬಿರದಲ್ಲಿ 30ಕ್ಕೂ ಹೆಚ್ಚು ತಜ್ಞ ವೈದ್ಯರು ಭಾಗವಹಿಸಿ, ಮಕ್ಕಳಿಗೆ ಚಿಕಿತ್ಸೆ ನೀಡಿದ್ದಾರೆ. ಶೆಟ್ಟಿಹಳ್ಳಿ ಆಶ್ರಮ ಶಾಲೆಯ 80 ಮಕ್ಕಳು, ಕೊಳವಿಗೆ ಆಶ್ರಮ ಶಾಲೆಯ 60 ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ. ಶಿಬಿರದಲ್ಲಿ ಕಿವಿ, ಮೂಗು, ಗಂಟಲು, ವಾಕ್ ಮತ್ತು ಶ್ರವಣ ಪರೀಕ್ಷೆ, ದಂತ ಚಿಕಿತ್ಸೆ, ನೇತ್ರ ತಪಾಸಣೆ, ರಕ್ತಪರೀಕ್ಷೆ, ಆರೋಗ್ಯ ತಪಾಸಣೆ ಮಾಡಲಾಗಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಮೈಸೂರಿಗೆ ಕರೆತಂದು ನಮ್ಮ ಸಂಸ್ಥೆಯ ವತಿಯಿಂದ ಉಚಿತವಾಗಿ ಚಿಕಿತ್ಸೆ ಕೊಡಿಸುತ್ತೇವೆ. ಈ ಎರಡು ಶಾಲೆಗಳಲ್ಲಿ ಜೇನು ಕುರುಬ ಮಕ್ಕಳೇ ಹೆಚ್ಚಾಗಿದ್ದಾರೆ. ಎಷ್ಟೋ ಮಕ್ಕಳು ಚಿಕಿತ್ಸೆಗೆ ಬರದೆ ಮನೆಯಲ್ಲೆ ಉಳಿದುಕೊಂಡಿದ್ದಾರೆ. ಪೋಷಕರು ಮಕ್ಕಳ ವಿದ್ಯಾಭ್ಯಾಸದ ಜೊತೆಗೆ ಆರೋಗ್ಯದ ಬಗ್ಗೆಯು ಕಾಳಜಿ ವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಾ.ಮಹಾದೇವಪ್ಪ ಡಾ.ಎಂ.ಡಿ. ಇಂದಿರಾ, ಡಾ.ರವೀಶ್ ಗಣಿ, ಡಾ.ದೀಪ, ಡಾ.ಕಿರಣ್, ಡಾ.ಅರುಣ್, ತಾಲೂಕು ಕಲ್ಯಾಣಾಧಿಕಾರಿ ಹೆಚ್.ಸಿ. ಬಸವರಾಜು, ಶೆಟ್ಟಿಹಳ್ಳಿ ಆಶ್ರಮ ಶಾಲೆಯ ಮುಖ್ಯ ಶಿಕ್ಷಕ ಶಿವಕುಮಾರ್, ಕೊಳವಿಗೆ ಆಶ್ರಮ ಶಾಲೆಯ ಮುಖ್ಯ ಶಿಕ್ಷಕ ಸಣ್ಣಯ್ಯ, ಮೋಹನ್, ಚೇತನ್ ಕುಮಾರ್, ಯೋಗೀಶ್, ರಾಜು ಕೆಎಸ್, ಬಿ.ಎಸ್. ಶಿವಣ್ಣ ಎಂ.ಎ. ಮಂಜುನಾಥ್, ಸುಬ್ಬೇಗೌಡ, ಶಂಕರ್, ರಾಜು ಕೆ.ಎಂ., ವಿಜಯ್, ರಾಜು ಉಪಸ್ಥಿತರಿದ್ದರು.









# ಕಂದಳಿಕೆ ಹೋಬಳಿ ವ್ಯಾಪ್ತಿಯ ಎರಡು ಹಾಡಿಗಳ ಜನರ ಸಮಸ್ಯೆ ಆಲಿಸಿದ ಅಧಿಕಾರಿ



ಮೈಸೂರು, ನ.5 (ಎಸ್‌ಪಿಎನ್)– ಸರಗೂರು ತಾಲೂಕು ಕಂದಳಿಕೆ ಹೋಬಳಿ ವ್ಯಾಪ್ತಿಯ ಎರಡು ಹಾಡಿಗಳಿಗೆ ನಾಗರಿಕ ಹಕ್ಕು ನಿರ್ದೇಶನಾಲಯದ ಪೊಲೀಸ್ ಅಧೀಕ್ಷಕಿ ಡಾ.ಬಿ.ಟಿ. ಕವಿತಾ ಶುಕ್ರವಾರ ಭೇಟಿ ನೀಡಿ, ನಿವಾಸಿಗಳ ಸಮಸ್ಯೆ ಆಲಿಸಿದರು.

ನಡಹಾಡಿ, ದಡದಹಳ್ಳಿ ಹಾಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ತಾಲೂಕು ಮಟ್ಟದ ಅಧಿಕಾರಿಗಳನ್ನೂ ಸ್ಥಳಕ್ಕೆ ಕರೆಯಿಸಿ ಹಾಡಿ ನಿವಾಸಿಗಳ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುವಂತೆ ಸೂಚನೆ ನೀಡಿದರು. ಇದೇ ವೇಳೆ ಆನೆ ತುಳಿತದಿಂದ ಮೃತಪಟ್ಟವರ ಮನೆಯವರಿಗೆ ಸಾಂತ್ವನ ಹೇಳಿದರು. ಇಲ್ಲಿನ ಮಹಿಳೆಯರಿಗೆ ಹೊದಿಕೆಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಜನಸಂಗ್ರಾಮ ಪರಿಷತ್ ರಾಜ್ಯ ಕಾರ್ಯದರ್ಶಿ ಹಾಡಿ ಪ್ರಸನ್ನ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಸಿಬ್ಬಂದಿ ಹಾಜರಿದ್ದರು.

ನಡಹಾಡಿ ನಿವಾಸಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಹಾಗೂ ಇಲ್ಲಿನ ಗ್ರಾಮಸ್ಥರಿಗೆ ಮಂಜೂರಾಗಿರುವ 60 ಎಕರೆ ಜಮೀನಿನಲ್ಲಿರುವ ಅನಧಿಕೃತ ಒತ್ತುವರಿದಾರರನ್ನು ತೆರವುಗೊಳಿಸುವಂತೆ ಒತ್ತಾಯಿಸಿ ನಡಹಾಡಿ ಮಹಿಳೆಯರು ಜಿಲ್ಲಾಧಿಕಾರಿ ಹಾಗೂ ನಾಗರಿಕ ಹಕ್ಕು ನಿರ್ದೇಶನಾಲಯದ ಪೊಲೀಸ್ ಅಧೀಕ್ಷಕರಿಗೆ ಮನವಿ ಸಲ್ಲಿಸಿದ್ದರ ಬಗ್ಗೆ 'ಮೈಸೂರು ಮಿತ್ರ' ಅ.5ರ ಸಂಚಿಕೆಯಲ್ಲಿ ಸಚಿತ್ರ ವರದಿ ಪ್ರಕಟಿಸಲಾಗಿತ್ತು.

